ಬುಧವಾರ, ಜನವರಿ 18, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 18 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಹವಾಮಾನದ ವೈಪರೀತ್ಯಗಳು ಗುಬ್ಬಚ್ಚಿಗಳ ಅಸ್ತಿತ್ವಕ್ಕೆ ಮಾರಕವಾಗುತ್ತಿವೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,655 ▲	18,053 ▲	₹58,600 (ಬೆಂಗಳೂರು) ▼	₹71,100 (ಬೆಂಗಳೂರು) ▼	81.70 ▼

ಕೆಪಿಎಸ್‌ಸಿ: ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ಹುದ್ದೆ ₹ 40 ಲಕ್ಷಕ್ಕೆ ಬಿಕರಿ – ಆರೋಪ

ಸಂದರ್ಶನದ ಸುತ್ತ ಸಂಶಯದ ಹುತ್ತ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) 660 ಸಹಾಯಕ ಎಂಜಿನಿಯರ್ (ಎಇ) ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಸಂದರ್ಶನದ ಅಂಕ ನೀಡಿಕೆಯಲ್ಲಿ ತಾರತಮ್ಯ ಮಾಡಲಾಗಿದೆ. ಸಂದರ್ಶನ ಪ್ರಕ್ರಿಯೆ ಬಗ್ಗೆಯೇ ಸಂದೇಹವಿದೆ' ಎಂದು ಅಭ್ಯರ್ಥಿಗಳು ಆಯೋಗದ ಕಾರ್ಯದರ್ಶಿಗೆ ದೂರು ನೀಡಿದ್ದಾರೆ.

'400 ಅಂಕಗಳ ಲಿಖಿತ ಪರೀಕ್ಷೆಯಲ್ಲಿ ಕೇವಲ 83.50 ರಿಂದ 94 ಅಂಕ ಗಳಿಸಿದ ಅಭ್ಯರ್ಥಿಗಳಿಗೆ, ವ್ಯಕ್ತಿತ್ವ ಪರೀಕ್ಷೆಯಲ್ಲಿ (ಸಂದರ್ಶನ) ಒಟ್ಟು 50ಕ್ಕೆ 40 ಅಂಕಗಳನ್ನು ನೀಡಲಾಗಿದೆ. ಲಿಖಿತದಲ್ಲಿ 69 ಅಂಕ ಗಳಿಸಿದ ಅಭ್ಯರ್ಥಿಗೆ ಸಂದರ್ಶನದಲ್ಲಿ 39 ಅಂಕ ಕೊಡಲಾಗಿದೆ. ಆದರೆ, 236 ಅಂಕ ಗಳಿಸಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದ್ದ ಅಭ್ಯರ್ಥಿಗೆ ಸಂದರ್ಶನದಲ್ಲಿ ಕೇವಲ 13.25 ಅಂಕ ನೀಡಲಾಗಿದೆ' ಎಂದು ಕೆಲವೇ ಅಂಕಗಳಿಂದ ನೇಮಕಾತಿಯಿಂದ ವಂಚಿತ ರಾದ ಅಭ್ಯರ್ಥಿಗಳು ತಿಳಿಸಿದ್ದಾರೆ.

'ಹಣ ಕೊಟ್ಟವರಿಗೆ ಗರಿಷ್ಠ, ಉಳಿದವರಿಗೆ ಕನಿಷ್ಠ'

'ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ಹುದ್ದೆಗೆ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ ಪ್ರಕ್ರಿಯೆಯನ್ನು ಪಾರದರ್ಶಕ ಮತ್ತು ನ್ಯಾಯೋಚಿತವಾಗಿ ನಡೆಸಲು ಹಾಗೂ ಸಹಜ ನ್ಯಾಯ ಒದಗಿಸುವ ಉದ್ದೇಶದಿಂದ ಆಯ್ಕೆ ಪ್ರಾಧಿಕಾರದ ಅಧ್ಯಕ್ಷರು (ಕೆಪಿಎಸ್‌ಸಿ) ನಾಲ್ವರ ಸಂದರ್ಶಕ ಮಂಡಳಿ ರಚಿಸಬೇಕು. ಈ ಸದಸ್ಯರು ನೀಡುವ ಅಂಕಗಳ ಸರಾಸರಿಯನ್ನು ಒಟ್ಟು ಅಂಕವೆಂದು ಪರಿಗಣಿಸಬೇಕು. 50 ಅಂಕಗಳ ಸಂದರ್ಶನದಲ್ಲಿ 40ಕ್ಕಿಂತ ಹೆಚ್ಚು ಅಥವಾ 20ಕ್ಕಿಂತ ಕಡಿಮೆ ಅಂಕ ನೀಡಿದರೆ, ಅದಕ್ಕೆ ಮಂಡಳಿಯು ಕಾರಣ ದಾಖಲಿಸಬೇಕು ಎಂದು ರಾಜ್ಯ ಸರ್ಕಾರ ಸೂಚಿಸಿತ್ತು. ಆದರೆ, ಈ ಚೌಕಟ್ಟಿನೊಳಗೇ, ಹಣ ನೀಡಿರುವ ಅಭ್ಯರ್ಥಿಗಳಿಗೆ ಗರಿಷ್ಠ, ಉಳಿದವರಿಗೆ ಕನಿಷ್ಠ ಅಂಕಗಳನ್ನು ನೀಡಿ ಅನ್ಯಾಯ ಎಸಗಲಾಗಿದೆ. 40 ಅಂಕ ಪಡೆದ ಬಹುತೇಕ ಅಭ್ಯರ್ಥಿಗಳು ₹ 30 ಲಕ್ಷದಿಂದ ₹ 50 ಲಕ್ಷವರೆಗೆ ಹಣ ನೀಡಿದ್ದಾರೆ ಎನ್ನಲಾಗುತ್ತಿದೆ. ಪ್ರತಿಭೆ ಇದ್ದರೂ ಹಣ ಇಲ್ಲದೇ ಇದ್ದರೆ ಉದ್ಯೋಗ ಗಿಟ್ಟಿಸಿಕೊಳ್ಳುವುದು ಕಷ್ಟ ಎನ್ನುವ ಸ್ಥಿತಿ ನಿರ್ಮಾಣವಾಗಿದೆ' ಎನ್ನುವುದು ಹುದ್ದೆ ವಂಚಿತರ ಆರೋಪ.

ಪ್ರಜಾವಾಣಿ ವಿಶೇಷ

ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕದ ಆಧಾರದಲ್ಲಿ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನ ಮಂಡಳಿ ಈ ರೀತಿ ಅಂಕ ನೀಡಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

'ಲಿಖಿತ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ್ದರೂ ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಂಕ ನೀಡುವಾಗ ತಾರತಮ್ಯ ಮಾಡಲಾಗಿದೆ. ಲಕ್ಷಾಂತರ ರೂಪಾಯಿ ಪಡೆದು ಹುದ್ದೆಗಳನ್ನು ಬಿಕರಿ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ.

ಈ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ 2021 ರ ಡಿಸೆಂಬರ್ 13 ರಿಂದ 15ರವರೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. 2022ರ ನವೆಂಬರ್ 7ರಿಂದ 2023ರ ಜನವರಿ 6ರವರೆಗೆ ವ್ಯಕ್ತಿತ್ವ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ, 24 ಗಂಟೆಯ ಒಳಗೇ (ಮರುದಿನ ರಾತ್ರಿ) ನೇಮಕಾತಿಗೆ ಅರ್ಹರಾಗಿರುವವರ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿತ್ತು.

'1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾದ 1,974 ಅಭ್ಯರ್ಥಿಗಳ ಪೈಕಿ 67 ಅಭ್ಯರ್ಥಿಗಳು ನಾನಾ ಕಾರಣಗಳಿಗೆ ಅಸಿಂಧು ಆಗಿದ್ದರು. ಉಳಿದ 1,907 ಅಭ್ಯರ್ಥಿಗಳಿಗೆ ಸಂದರ್ಶಕ ಮಂಡಳಿ ನೀಡಿರುವ ಅಂಕಗಳು ಸಂದೇಹಗಳನ್ನು ಮೂಡಿಸುವಂತಿವೆ' ಎನ್ನುವುದು ಅಭ್ಯರ್ಥಿಗಳ ಆರೋಪ.

ವ್ಯಕ್ತಿತ್ವ ಪರೀಕ್ಷೆಯಲ್ಲಿ 497 ಅಭ್ಯರ್ಥಿಗಳಿಗೆ ತಲಾ 40 ಅಂಕ ನೀಡಲಾಗಿದೆ. ಈ ಪೈಕಿ, ಲಿಖಿತ ಪರೀಕ್ಷೆಯಲ್ಲಿ 150 ಕ್ಕಿಂತ ಕಡಿಮೆ ಅಂಕ ಗಳಿಸಿದ ಹಲವರಿದ್ದಾರೆ. 170 ಮಂದಿಗೆ ತಲಾ 38 ರಿಂದ 39 ಅಂಕ ನೀಡಲಾಗಿದೆ.

4ನೇ ಪುಟ ನೋಡಿ



ದೂರು ಬಂದಿರುವುದು ನಿಜ. ಆಯೋಗದ ಇಬ್ಬರು, ವಿಷಯ ತಜ್ಞರಿಬ್ಬರನ್ನು ಒಳಗೊಂಡ ಸಂದರ್ಶಕ ಮಂಡಳಿ ವ್ಯಕ್ತಿತ್ವ ಪರೀಕ್ಷೆ ನಡೆಸಿದೆ. ಅಂಕ ನೀಡುವುದು ಮಂಡಳಿಯ ವಿವೇಚನಾಧಿಕಾರ

ವಿಕಾಸ್ ಕಿಶೋರ್ ಸುರಳ್ಕರ್
ಕಾರ್ಯದರ್ಶಿ, ಕೆಪಿಎಸ್‌ಸಿ

ಸಹಾಯಕ ಎಂಜಿನಿಯರ್ – ವ್ಯಕ್ತಿತ್ವ ಪರೀಕ್ಷೆ

ಅಭ್ಯರ್ಥಿಗಳ ಸಂಖ್ಯೆ	ಗಳಿಸಿದ ಅಂಕ
36	20ರ ಒಳಗೆ
239	20
886	20ರಿಂದ 26
79	26ರಿಂದ 30
667	38ರಿಂದ 40

'ಗುರು ರಾಘವೇಂದ್ರ, ವಸಿಷ್ಠ ಬ್ಯಾಂಕ್ ಹಗರಣ ಸಿಬಿಐಗೆ'

ಬೆಂಗಳೂರು: ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ವಶಿಷ್ಟ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಿರುವ ಅವ್ಯವಹಾರಗಳ ಕುರಿತ ತನಿಖೆಯನ್ನು ಸಿಬಿಐಗೆ ವಹಿಸಲು ಶಿಫಾರಸು ಮಾಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು

ಎರಡೂ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಿರುವ ಅಕ್ರಮಗಳ ತನಿಖೆ, ಸಾಲ ವಸೂಲಾತಿ, ಪುನಶ್ಚೇತನ ಕುರಿತು ಸ್ಥಳೀಯ ಶಾಸಕರು, ವಿಧಾನ ಪರಿಷತ್ ಸದಸ್ಯರ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು.

2ನೇ ಪುಟ ನೋಡಿ

ವಿಮಾನದ ತುರ್ತು ನಿರ್ಗಮನ ದ್ವಾರ ತೆರೆದ ತೇಜಸ್ವಿ ಸೂರ್ಯ



ಚೆನ್ನೈ: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ಹಾಗೂ ಬಿಜೆಪಿ ಯುವ ಮೋರ್ಚಾ ಮುಖ್ಯಸ್ಥ ತೇಜಸ್ವಿ ಸೂರ್ಯ ಅವರು ಚೆನ್ನೈನಿಂದ ತಿರುಚಿನಾಪಳ್ಳಿಗೆ ಹೊರಡಲು ಸಿದ್ಧವಾಗಿದ್ದ ಇಂಡಿಗೊ ವಿಮಾನದ ತುರ್ತು ನಿರ್ಗಮನ ದ್ವಾರ ತೆರೆದು ಟೀಕೆಗೆ ಗುರಿಯಾಗಿದ್ದಾರೆ.

ತೇಜಸ್ವಿ ಅವರು ತಮಿಳುನಾಡು ಬಿಜೆಪಿ ಯುವ ಮೋರ್ಚಾದ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಜೊತೆ ಡಿಸೆಂಬರ್ 10ರಂದು ಚೆನ್ನೈನಿಂದ ತಿರುಚಿನಾಪಳ್ಳಿಗೆ ಹೊರಡಲು ವಿಮಾನ ಏರಿದ್ದರು. ಈ ವೇಳೆ ತುರ್ತು ನಿರ್ಗಮನ ದ್ವಾರದ 'ಲಿವರ್' ಎಳೆದಿದ್ದರು. ಕ್ಷಮಾಪಣಾ ಪತ್ರ ನೀಡಿದ ಬಳಿಕ ಅದೇ ವಿಮಾನದಲ್ಲಿ ಪ್ರಯಾಣಿಸಲು ಅವರಿಗೆ ಅನುವು ಮಾಡಿಕೊಡಲಾಗಿತ್ತು.

ವಿಮಾನಯಾನ ನಿಯಮಾವಳಿಗಳ ಅನುಸಾರ ತುರ್ತು ನಿರ್ಗಮನ ದ್ವಾರ ತೆರೆಯುವುದು ಶಿಕ್ಷಾರ್ಹ ಅಪರಾಧ. ಹೀಗಿದ್ದರೂ ತೇಜಸ್ವಿ ವಿಚಾರದಲ್ಲಿ ಇಂಡಿಗೊ ಹಾಗೂ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಮೃದುಧೋರಣೆ ತಳೆದಿರುವುದಕ್ಕೆ ಟೀಕೆ ವ್ಯಕ್ತವಾಗಿದೆ.

11ನೇ ಪುಟ ನೋಡಿ

ಅಮೃತಕಾಲವನ್ನು ಕರ್ತವ್ಯ ಕಾಲವನ್ನಾಗಿ ಮಾಡಿ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತದ ಉತ್ತಮ ಯುಗ ಮುಂದೆ ಇದೆ. ಪಕ್ಷವು ದೇಶದ ಅಭಿವೃದ್ಧಿಗಾಗಿ ತನ್ನನ್ನು ತೊಡಗಿಸಿಕೊಳ್ಳಬೇಕು. 2047ರ ವರೆಗಿನ 25 ವರ್ಷಗಳ ಅಮೃತ ಕಾಲವನ್ನು ಕರ್ತವ್ಯ ಕಾಲವನ್ನಾಗಿ ಪರಿವರ್ತಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಅವರು ಸಮಾರೋಪ ಭಾಷಣ ಮಾಡಿದರು. ಈ ಭಾಷಣದ ವಿವರಗಳನ್ನು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಪಡಣವೀಸ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿ ಕೇವಲ ಒಂದು ರಾಜಕೀಯ ಚಳವಳಿಯಾಗಿ ಉಳಿಯದೆ ಸಾಮಾಜಿಕ ಚಳವಳಿಯಾಗಿ ಬದಲಾಗಿದ್ದು, ಸಾಮಾಜಿಕ ಆರ್ಥಿಕ ಪರಿವರ್ತನೆಗೆ ಕೆಲಸ ಮಾಡುತ್ತಿದೆ' ಎಂದು ಮೋದಿ ಹೇಳಿದರು.

'ದೇಶದ 18ರಿಂದ 25ರ ನಡುವಿನ ಯುವಜನರು ಭಾರತದ ರಾಜಕೀಯ ಇತಿಹಾಸಕ್ಕೆ ಸಾಕ್ಷಿಯಾಗಿಲ್ಲ. ಆದ್ದರಿಂದ ಅವರಿಗೆ ಹಿಂದಿನ ಸರ್ಕಾರಗಳು ನಡೆಸಿರುವ ಭ್ರಷ್ಟಾಚಾರ ಹಾಗೂ ಅಕ್ರಮಗಳ ಅರಿವಿಲ್ಲ. ಹಾಗಾಗಿ ಅವರಿಗೆ ಆ ಕುರಿತು ಅರಿವು ಮೂಡಿಸಬೇಕು ಮತ್ತು ಬಿಜೆಪಿಯ ಉತ್ತಮ ಆಡಳಿತದ ಬಗ್ಗೆ ಮಾಹಿತಿ ನೀಡಬೇಕು' ಎಂದರು.

ಯಾವುದೇ ಚುನಾವಣಾ ಉದ್ದೇಶಗಳಿಲ್ಲದೆ ಸಮಾಜದ ಎಲ್ಲ ವರ್ಗದ ಜನರಿಗಾಗಿ ಕೆಲಸ ಮಾಡುವಂತೆ ಬಿಜೆಪಿ ಸದಸ್ಯರಿಗೆ ಪ್ರಧಾನಿ ಸಲಹೆ ನೀಡಿದರು.

2024ರ ಲೋಕಸಭಾ ಚುನಾವಣೆಗೆ ಸುಮಾರು 400 ದಿನಗಳು ಉಳಿದಿದ್ದು, ಪಕ್ಷದ ಕಾರ್ಯಕರ್ತರು ಸಂಪೂರ್ಣ ಬದ್ಧತೆಯಿಂದ ಸಮಾಜದ ಎಲ್ಲ ವರ್ಗದ ಜನರಿಗಾಗಿ ಕೆಲಸ ಮಾಡಬೇಕು. ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಎಲ್ಲೆಡೆ ವಿಸ್ತರಿಸಬೇಕು ಎಂದರು.

ಪಕ್ಷದ ಸದಸ್ಯರು ಅತಿಯಾದ ಆತ್ಮವಿಶ್ವಾಸ ಹೊಂದಿರಬಾರದು ಎಂದು ಎಚ್ಚರಿಸಿದ ಅವರು, 'ಮಧ್ಯಪ್ರದೇಶದಲ್ಲಿ ದಿಗ್ವಿಜಯ್ ಸಿಂಗ್ ನೇತೃತ್ವದ ಸರ್ಕಾರದ ವಿರುದ್ಧ 1998ರಲ್ಲಿ ಜನವಿರೋಧಿ ಅಲೆ ಇತ್ತು. ಆದರೂ, ಆ ಪಕ್ಷವು ಆ ಚುನಾವಣೆಯಲ್ಲಿ ಗೆಲುವು ಸಾಧಿಸಿತು' ಎಂದು ಉದಾಹರಣೆ ನೀಡಿದರು.

ಪ್ರಧಾನಿಗೆ ಆಹ್ವಾನ: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ರಾತ್ರಿ ಭೇಟಿ ಮಾಡಿ ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆ ಹಾಗೂ ವಿವಿಧ ಯೋಜನೆಗಳಿಗೆ ಚಾಲನೆ ನೀಡಲು ಬರುವಂತೆ ಆಹ್ವಾನಿಸಿದರು.

ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ನೇಪಥ್ಯದಲ್ಲಿ ಪ್ರಧಾನಿ ಅವರನ್ನು ಭೇಟಿ ಮಾಡಿದ ಯಡಿಯೂರಪ್ಪ, ಈ ಆಹ್ವಾನ ನೀಡಿದರು. ಅದಕ್ಕೆ ಪ್ರಧಾನಿ ಒಪ್ಪಿದರು.

ಬಿಜೆಪಿ ಅಧ್ಯಕ್ಷ ನಡ್ಡಾ ಅವಧಿ ವಿಸ್ತರಣೆ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅವಧಿಯನ್ನು ಮುಂದಿನ ವರ್ಷದ ಜೂನ್ ವರೆಗೆ ವಿಸ್ತರಿಸಲು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ತೀರ್ಮಾನಿಸಲಾಯಿತು.

ನಡ್ಡಾ ಅವಧಿಯನ್ನು ವಿಸ್ತರಿಸುವ ಪ್ರಸ್ತಾವವನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಮಂಡಿಸಿದರು. ಅದನ್ನು ಕಾರ್ಯಕಾರಿಣಿಯು ಸರ್ವಾನುಮತದಿಂದ ಅನುಮೋದಿಸಿತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಪಕ್ಷವು 2024ರ ಲೋಕಸಭಾ ಚುನಾವಣೆಯಲ್ಲಿ 2019ಕ್ಕಿಂತ ದೊಡ್ಡ ಜನಾದೇಶದೊಂದಿಗೆ ಗೆಲುವು ಸಾಧಿಸಲಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು. ನಡ್ಡಾ ಅವಧಿಯನ್ನು ವಿಸ್ತರಿಸಲು ಪಕ್ಷದ ಸಂಸದೀಯ ಮಂಡಳಿಯು ಈಗಾಗಲೇ ಅನುಮೋದನೆ ನೀಡಿದೆ.

ನಡ್ಡಾ ಅವರನ್ನು 2020ರ ಜನವರಿ 20ರಂದು ಪಕ್ಷದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.



ಬೆಂಗಳೂರು ವಿಜಯನಗರದ ಹೊಸಹಳ್ಳಿ ಮೆಟ್ರೊ ನಿಲ್ದಾಣ ಬಳಿ ಸ್ಕೂಟರ್‌ಗೆ ಜೋತುಬಿದ್ದ ವೃದ್ಧ ಮುತ್ತಪ್ಪ ತೋಂಟಾಪುರ ಅವರನ್ನು ಸವಾರ ಸಾಹಿಲ್ ರಸ್ತೆಯಲ್ಲೇ ಅಮಾನವೀಯವಾಗಿ ಎಳೆದೊಯ್ದ ದೃಶ್ಯ

ಬೆಂಗಳೂರಿನ ಹೊಸಹಳ್ಳಿ ಮೆಟ್ರೊ ನಿಲ್ದಾಣ ಬಳಿ ಘಟನೆ

ಸ್ಕೂಟರ್‌ಗೆ ಜೋತುಬಿದ್ದ ವೃದ್ಧನ ಎಳೆದೊಯ್ದ ಸವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಜೋತುಬಿದ್ದ ವೃದ್ಧ ಮುತ್ತಪ್ಪ ತೋಂಟಾಪುರ (71) ಅವರನ್ನು ರಸ್ತೆಯಲ್ಲೇ 600 ಮೀಟರ್‌ವರೆಗೆ ಎಳೆದೊಯ್ದು ಕೊಲೆಗೆ ಯತ್ನಿಸಲಾಗಿದೆ. ಕೃತ್ಯ ಎಸಗಿದ ಆರೋಪದಡಿ ದ್ವಿಚಕ್ರ ವಾಹನ ಸವಾರ ಸಾಹಿಲ್ (25) ಎಂಬುವವರನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯನಗರದ ಹೊಸಹಳ್ಳಿ ಮೆಟ್ರೊ ನಿಲ್ದಾಣ ಬಳಿ ಮಂಗಳವಾರ ಈ ಘಟನೆ ನಡೆದಿದೆ. ಗಾಯಗೊಂಡಿರುವ ಮುತ್ತಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೊಲೆ ಯತ್ನ ಹಾಗೂ ಸಾರ್ವಜನಿಕರ ಜೀವಕ್ಕೆ ಕುತ್ತು ತರುವ ರೀತಿಯಲ್ಲಿ ಅಪಾಯಕಾರಿ ಚಾಲನೆ ಆರೋಪದಡಿ ಸಾಹಿಲ್‌ನನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ವಿಜಯಪುರದ ಮುತ್ತಪ್ಪ, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದು ಕುಟುಂಬದ ಜೊತೆ ಹೆಗ್ಗನಹಳ್ಳಿಯಲ್ಲಿ ವಾಸವಿದ್ದಾರೆ. ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದಾರೆ. ಆರೋಪಿ ಸಾಹಿಲ್, ನಾಯಂಡಹಳ್ಳಿ ನಿವಾಸಿ. ಔಷಧ ಪೂರೈಕೆ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ' ಎಂದೂ ಹೇಳಿದರು.

ಮೂರು ಬಾರಿ ನಿಯಮ ಉಲ್ಲಂಘನೆ

'ಆರೋಪಿ ಸಾಹಿಲ್, ಈ ಹಿಂದೆ ಮೂರು ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದು, ₹ 2,000 ದಂಡ ಬಾಕಿ ಇದೆ' ಎಂದು ಸಂಚಾರ ಪೊಲೀಸರು ಹೇಳಿದರು.

5ನೇ ಪುಟ ನೋಡಿ

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಬುಧವಾರದ ಉಷ್ಣಾಂಶ 29° ಗರಿಷ್ಠ 14° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣ ಇರಲಿದೆ.

ಹವಾಮಾನ

ಗುರುವಾರ	ಶುಕ್ರವಾರ	ಶನಿವಾರ
30° 14°	30° 14°	30° 15°

ಮಂಗಳವಾರದ ಹವಾಮಾನ : ಗರಿಷ್ಠ 30° ಕನಿಷ್ಠ 15°

ಪ್ರಜಾವಾಣಿ

ನಗರದಲ್ಲಿ ಇಂದು

ಉಪನ್ಯಾಸ ಕಾರ್ಯಕ್ರಮ: ವಿಷಯ: 'ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಮತ್ತು ಆತ್ಮವಿಶ್ವಾಸ', ಸಂಪನ್ಮೂಲ ವ್ಯಕ್ತಿ: ವಸುಂಧರಾ ಕೆ.ಎಂ., ಅತಿಥಿ: ರಜನಿ ಜಯರಾಮ್, ಅಧ್ಯಕ್ಷತೆ: ರಾಜೇಶ್ವರಿ ವೈ.ಎಂ., ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಜಯನಗರ 9ನೇ ಹಂತ, ಬೆಳಿಗ್ಗೆ 8.50



ತೋಂಟದ ಸಿದ್ಧರಾಮ ಸ್ವಾಮೀಜಿ

ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತ್ಯುತ್ಸವ: ಸಾನ್ನಿಧ್ಯ: ತೋಂಟದ ಸಿದ್ಧರಾಮ ಸ್ವಾಮೀಜಿ, ಅಧ್ಯಕ್ಷತೆ: ಸೌಮ್ಯನಾಥ ಸ್ವಾಮೀಜಿ, ಬಾಲಗಂಗಾಧರನಾಥ ಸ್ವಾಮೀಜಿ ಪ್ರತಿಮೆಗೆ ಮಾಲಾರ್ಪಣೆ: ವಿ. ಸೋಮಣ್ಣ, ನುಡಿ ನಮನ: ದೊಡ್ಡರಂಗೇಗೌಡ, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣ, ಎಂ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ 9.30

'ಸಂವಿಧಾನ ಅಭಿಯಾನೋತ್ಸವ ರಾಜ್ಯ ಸಮಾವೇಶ': ಸಾನ್ನಿಧ್ಯ: ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ:ಮಾ. ಮುನಿರಾಜು, ಅತಿಥಿಗಳು: ಮಾಳವ ನಾರಾಯಣ್, ಜಿ. ಮಂಜುನಾಥ್, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಿ. ಕೃಷ್ಣಪ್ಪ ಅವರ ಭಾವಚಿತ್ರ ಅನಾವರಣ: ಜಮೀರ್ ಅಹಮ್ಮದ ಖಾನ್, 'ಬಿ. ಕೃಷ್ಣಪ್ಪ' ಪ್ರಶಸ್ತಿ ಪ್ರದಾನ: ಟಿ. ವೆಂಕಟರಮಣಯ್ಯ, ಬೈರತಿ ಸುರೇಶ್, ಪ್ರಶಸ್ತಿ ಪುರಸ್ಕೃತರು: ಕೋಟಿಗಾನಹಳ್ಳಿ ರಾಮಯ್ಯ, ಜಯಪ್ರಕಾಶ್, ಆಯೋಜನೆ: ದಲಿತ ವಿಮೋಚನಾ ಸೇನೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ: ಧ್ವಜಾರೋಹಣ: ಕೆ. ಹೇಮಲತಾ, ಸ್ವಾಗತ ಭಾಷಣ: ಕೆ. ಸುಬ್ಬರಾವ್, ಉದ್ಘಾಟನೆ: ತಪನ್ ಸೇನ್, ಪಂಬೀಸ್ ಕ್ರಿಟ್ರೀಸ್, ಎಂ.ಎಸ್. ಮೀನಾಕ್ಷಿ ಸುಂದರಂ, ಆಯೋಜನೆ: ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಸ್ಥಳ: ಗಾಯಿತ್ರಿ ವಿಹಾರ, ಅರಮನೆ ಮೈದಾನ, ಬೆಳಿಗ್ಗೆ 11

ಕೆಂಗಲ್ ಹನುಮಂತಯ್ಯ ದತ್ತಿ ಉಪನ್ಯಾಸ: ವಿಷಯ: 'ಭಾರತ@75-ಚುನಾವಣಾ ಪ್ರಜಾಪ್ರಭುತ್ವ ಯಶಸ್ವಿಯಾಗಿದೆಯೇ?', ಉಪನ್ಯಾಸಕರು: ಬಿ.ಎಲ್. ಶಂಕರ್, ಅತಿಥಿಗಳು: ಜಿ.ಕೆ. ನಾರಾಯಣ ರೆಡ್ಡಿ, ಅಧ್ಯಕ್ಷತೆ: ಎಸ್.ಟಿ. ಬಾಲಗೋಪಾಲ್, ಎಂ.ಆರ್. ಲಕ್ಷ್ಮಿ ಮನೋಹರ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾನೂನು ಕಾಲೇಜು, ಗಾಯಿತ್ರಿನಗರ, ಬೆಳಿಗ್ಗೆ 11

ಪರಿಪೂರ್ಣ ಅಭಿಜ್ಞಾನ-2023: ಅತಿಥಿಗಳು: ವಿಶ್ವೇಶ್ವರ ಹೆಗಡೆ ಕಾಗೇರಿ, ಡಿ.ವಿ. ಸದಾನಂದ ಗೌಡ, ಕೆ. ಶ್ರೀನಿವಾಸಮೂರ್ತಿ, ಜಿ. ಚಂಚೇಗೌಡ, ಆಯೋಜನೆ: ಪರಿಪೂರ್ಣ ಸನಾತನ ಚಾರಿಟಬಲ್ ಟ್ರಸ್ಟ್, ಸ್ಥಳ: ಕೈವಲ್ಯ ಸನ್ನಿಧಾನ, ಅರ್ಜುನ ಬೆಟ್ಟಹಳ್ಳಿ, ಕಸಬ ಹೋಬಳಿ, ಸಂಜೆ 6



ರಮೇಶ್ ಅರವಿಂದ್

ಸಪ್ನ ಬುಕ್ ಹೌಸ್‌ನ ನೂತನ ಶಾಖೆ ಉದ್ಘಾಟನೆ: ರಮೇಶ್ ಅರವಿಂದ್, ಅಧ್ಯಕ್ಷತೆ: ನಾಗತಿಹಳ್ಳಿ ಚಂದ್ರಶೇಖರ್, ಅತಿಥಿಗಳು: ತೇಜಸ್ವಿ ಸೂರ್ಯ, ರಂಜನಿ ರಾಘವನ್, ಎಂ. ಸತೀಶ್ ರೆಡ್ಡಿ, ವಿಶ್ವೇಶ್ವರ ಭಟ್, ನಿತಿನ್ ಷಾ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಎಚ್.ಎಸ್.ಆರ್. ಲೇಔಟ್, 5ನೇ ಮುಖ್ಯರಸ್ತೆ, 7ನೇ ವಲಯ, ಹೋಟೆಲ್ ಕೈಲಾಶ್ ಪರ್ಬತ್ ಹತ್ತಿರ, ಬೆಳಿಗ್ಗೆ 10.30

ಭಜನಾಮೃತ: ಪ್ರಸ್ತುತಿ: ಗುಲ್ಬರ್ಗ ಗುರುರಾಜದಾಸ ಮತ್ತು ತಂಡ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಈಜುಕೊಳದ ಬಡಾವಣೆ, ಮಲ್ಲೇಶ್ವರ, ಸಂಜೆ 6.30

ಸಿದ್ಧಾರ್ಥ ಮುಖರ್ಜಿ ಅವರ 'ದಿ ಸಾಂಗ್ ಆಫ್ ದಿ ಸೆಲ್' ಪುಸ್ತಕ ಬಿಡುಗಡೆ: ಅತಿಥಿಗಳು: ಕಿರಣ್ ಮಜುಂದಾರ್ ಶಾ, ಸ್ಥಳ: ಕಿರಣ್ ಮಜುಂದಾರ್ ಶಾ ಸಭಾಂಗಣ, ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಾಫಿ, ಕಸ್ತೂರಬಾ ರಸ್ತೆ, ಸಂಜೆ 7

ಮಹಾಲಕ್ಷ್ಮಿ ಲೇಔಟ್‌ನಲ್ಲಿ ರಸ್ತೆ ಪೈಪ್ ಬಿರುಕು, ನೀರು ಸೋರಿಕೆ

ರಸ್ತೆ ಕುಸಿತ: ಗುಂಡಿ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿರುವ ಗುಂಡಿಗಳ ಜೊತೆಗೆ ಒಂದಿಲ್ಲ ಒಂದು ಕಾರಣಕ್ಕಾಗಿ ರಸ್ತೆ ಕುಸಿತಗೊಂಡು, ಗುಂಡಿಗಳಾಗುತ್ತಿವೆ. ಒಂದು ವಾರದ ಅವಧಿಯಲ್ಲಿ ರಸ್ತೆ ಕುಸಿತದ ಎರಡು ಪ್ರಕರಣಗಳು ದಾಖಲಾಗಿವೆ.

ಮಹಾಲಕ್ಷ್ಮಿ ಲೇಔಟ್‌ನಲ್ಲಿ ಆಂಜನೇಯ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಜಲಮಂಡಳಿಯ ನೀರಿನ ಪೈಪಿನ ಸೋರಿಕೆಯಿಂದ ಮಂಗಳವಾರ ಬೆಳಿಗ್ಗೆ ರಸ್ತೆ ಕುಸಿತವಾಗಿದೆ.

ಬಿಬಿಎಂಪಿ ಪಶ್ಚಿಮ ವಲಯದ ವತಿಯಿಂದ ವಾರ್ಡ್ ರಸ್ತೆಗಳ ಡಾಂಬರು ಕಾಮಗಾರಿಯ ಸಂದರ್ಭದಲ್ಲಿ ಒಂದು ವಾರದ ಹಿಂದೆ ಈ ಸ್ಥಳದಲ್ಲಿ ತಗ್ಗು ಕಂಡಿದ್ದಾಗ ಎಂಜಿನಿಯರ್‌ಗಳು ಡಾಂಬರು ಹಾಕಿದ್ದರು. ಅದೇ ಸ್ಥಳದಲ್ಲಿ ಮಂಗಳವಾರ ಲಾರಿ ಚಲಿಸಿದಾಗ ರಸ್ತೆ ಕುಸಿದು, ದೊಡ್ಡ ಹಳ್ಳವಾಗಿದೆ.

'ನೀರಿನ ಮಾರ್ಗದ 4 ಇಂಚಿನ ಕಬ್ಬಿಣದ ಪೈಪ್‌ನಲ್ಲಿ (ಸಿಐ) ಸೋರಿಕೆ ಉಂಟಾಗಿದ್ದು, ಅದನ್ನು ಸರಿಪಡಿಸಲಾಗಿದೆ. ಈ ಪೈಪ್ ಮಾರ್ಗವನ್ನು 42 ವರ್ಷಗಳ ಹಿಂದೆ ಅಳವಡಿಸಲಾಗಿತ್ತು' ಎಂದು ಬಿಡಬ್ಲ್ಯುಎಸ್‌ಎಸ್‌ಬಿಯ ಮಹಾಲಕ್ಷ್ಮಿ ಲೇಔಟ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಹರಿನಾಥ್ ಹೇಳಿದರು.

'ಕುಡಿಯುವ ನೀರು ವಿತರಣೆ ಮಾಡುವ ಮಾರ್ಗ ಇದಾಗಿದ್ದು, ಪೈಪ್ ಒಳಭಾಗದಲ್ಲೇ ಬಿರುಕು ಬಿಟ್ಟಿದ್ದು, ನೀರು ಸೋರಿಕೆಯಾಗಿ ಮಣ್ಣು ಕುಸಿತವಾಗಿದೆ. ಅತಿ ಭಾರವಾದ ಕಸದ ಲಾರಿ ಸಂಚರಿಸಿದಾಗ, ಕುಸಿತ ಉಂಟಾಗಿದೆ. ಪೈಪ್ ಬದಲಿಸಲಾಗಿದೆ. ಇದು ಮನೆಗಳಿಗೆ ನೀರು ವಿತರಿಸುವ ಮಾರ್ಗವಾಗಿದ್ದು, ಇಲ್ಲಿ ಈ ಹಿಂದೆ ಭಾರಿ ವಾಹನಗಳು ಸಂಚರಿಸುತ್ತಿರಲಿಲ್ಲ. ಸಮೀಪದಲ್ಲಿ ರಾಜಕಾಲುವೆ ಕಾಮಗಾರಿ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಈ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿತ್ತು. ಹೆಚ್ಚಿನ ಒತ್ತಡದಿಂದ ಪೈಪ್ ಬಿರುಕು ಬಿಟ್ಟು ಸೋರಿಕೆಯಾಗಿದೆ' ಎಂದರು.

'ಬಿಬಿಎಂಪಿ ಪಶ್ಚಿಮ ವಲಯದ ವತಿಯಿಂದ ವಾರ್ಡ್ ರಸ್ತೆಗಳಿಗೆ ಡಾಂಬರು ಹಾಕುವ ಕಾಮಗಾರಿಯನ್ನು ಮಾಡುತ್ತಿದ್ದೇವೆ. ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ಸೇರಿದ ರಸ್ತೆ ಇದಾಗಿದ್ದರೂ, ಸ್ವಲ್ಪ ತಗ್ಗಾಗಿದ್ದನ್ನು ಕಂಡು ಅದರ ಮೇಲೆ ಡಾಂಬರು ಹಾಕಿ ಮಟ್ಟ ಮಾಡಿದ್ದೆವು. ವಾರದ ನಂತರ ಹೀಗಾಗಿದೆ. ಜಲಮಂಡಳಿ ಯವರು ಪೈಪ್ ಬದಲಿಸಿದ್ದಾರೆ. ಒಂದು ದಿನ ನಿಗಾವಹಿಸುತ್ತೇವೆ ಎಂದು ಹೇಳಿದ್ದಾರೆ. ನಂತರ, ನಾವು ಡಾಂಬರು ಹಾಕಿ ಸಂಚಾರಕ್ಕೆ ಅನುವು ಮಾಡಿಕೊಡುತ್ತೇವೆ' ಎಂದು ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ತಿಮ್ಮರಸು ತಿಳಿಸಿದರು.

ಸಚಿವ ಗೋಪಾಲಯ್ಯ ಅವರು ಸ್ಥಳಕ್ಕೆ ಬಂದು ಪರಿಶೀಲಿಸಿ, ಶೀಘ್ರವಾಗಿ ದುರಸ್ತಿ ಕಾಮಗಾರಿ ಪೂರೈಸುವಂತೆ ಸೂಚಿಸಿದರು.

ನಮ್ಮ ಮೆಟ್ರೊ ಕಾಮಗಾರಿ ನಡೆಯುತ್ತಿರುವ ಬ್ರಿಗೇಡ್ ರಸ್ತೆಯಲ್ಲಿ ಜ.12ರಂದು ದೊಡ್ಡ ಗುಂಡಿಯಾಗಿತ್ತು. ಅದಕ್ಕೂ ನೀರಿನ ಸೋರಿಕೆಯೇ ಕಾರಣ ಎಂದು ಅನುಮಾನಿಸಲಾಗಿದೆ. ಈ ನೀರಿನ ಸೋರಿಕೆ ಹೇಗಾಗಿದೆ ಎಂಬುದರ ಕುರಿತು ಬಿಎಂಆರ್‌ಸಿಎಲ್, ಬಿಡಬ್ಲ್ಯುಎಸ್‌ಎಸ್‌ಬಿನವರು ತನಿಖೆ ನಡೆಸುತ್ತಲೇ ಇದ್ದಾರೆ.



ಮಹಾಲಕ್ಷ್ಮಿ ಲೇಔಟ್‌ನಲ್ಲಿ ನೀರು ಸೋರಿಕೆಯಿಂದ ಉಂಟಾದ ರಸ್ತೆ ಕುಸಿತದ ಸ್ಥಳದಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ ಸಿಬ್ಬಂದಿ ಮಂಗಳವಾರ ದುರಸ್ತಿ ಕಾರ್ಯ ನಡೆಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಗ್ರೇಟಾ ಥನ್‌ಬರ್ಗ್ ಪೊಲೀಸ್ ವಶಕ್ಕೆ

ಬರ್ಲಿನ್ (ಎಎಫ್‌ಪಿ): ಕಲ್ಲಿದ್ದಲು ಗಣಿ ವಿಸ್ತರಣೆಗೆ ದಾರಿ ಮಾಡಿಕೊಡಲು ಜರ್ಮನಿಯ ಲುಟ್ಜೆರಾತ್ ಗ್ರಾಮವನ್ನು ಧ್ವಂಸಗೊಳಿಸುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ಸ್ವೀಡನ್‌ನ ಪರಿಸರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಹಾಗೂ ಇತರರನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಪ್ರತಿಭಟನಕಾರರಿಗೆ ಬೆಂಬಲ ನೀಡುವ ಸಲುವಾಗಿ ಹಲವು ದಿನಗಳಿಂದ ಥನ್‌ಬರ್ಗ್ ಅವರು ಜರ್ಮನಿಯಲ್ಲಿ ತಂಗಿದ್ದರು. ಹಲವು ಮಂದಿ ಪ್ರತಿಭಟನಕಾರರನ್ನು ವಶಕ್ಕೆ ಪಡೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ಗುರು ರಾಘವೇಂದ್ರ, ವಸಿಷ್ಠ ಬ್ಯಾಂಕ್ ಹಗರಣ ಸಿಬಿಐಗೆ'

ಒಂದನೇ ಪುಟದಿಂದ...

'ಈ ಎರಡೂ ಬ್ಯಾಂಕ್‌ಗಳಲ್ಲಿನ ಅಕ್ರಮದ ಕುರಿತು ತನಿಖೆ ಆರಂಭವಾಗಿ ಮೂರು ವರ್ಷಗಳಾದರೂ ಸಾಲ ವಸೂಲಾತಿ ಆಗುತ್ತಿಲ್ಲ. ಈ ಕಾರಣದಿಂದ ತನಿಖೆಯನ್ನು ಸಿಬಿಐಗೆ ವಹಿಸಲು ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಸಭೆಯಲ್ಲಿದ್ದ ಶಾಸಕರಾದ ರವಿ ಸುಬ್ರಮಣ್ಯ, ಸೌಮ್ಯಾ ರೆಡ್ಡಿ ಮತ್ತು ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಅವರು ಸಚಿವರ ತೀರ್ಮಾನ ಬೆಂಬಲಿಸಿದರು.

ಸಿಬಿಐ ತನಿಖೆಗೆ ವಹಿಸಬೇಕೆಂಬ ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ. ಠೇವಣಿದಾರರಿಗೆ ಹಣ ಹಿಂದಿರುಗಿಸುವ ವಿಷಯವೂ ಇತ್ಯರ್ಥವಾಗಬೇಕು.

ಡಾ. ಶಂಕರ್ ಗುಹಾ ದ್ವಾರಕನಾಥ್ ಬಿ, ಶ್ರೀ ಗುರು ರಾಘವೇಂದ್ರ ಹಿತರಕ್ಷಣಾ ವೇದಿಕೆಯ ಮಹಾಪೋಷಕ

'ಕಸ ಬಿಸಾಡಿದರೆ ಶಿಕ್ಷೆ, ದಂಡ'

ಬೆಂಗಳೂರು: ರಸ್ತೆ ಬದಿ, ಪಾದಚಾರಿ ಮಾರ್ಗ, ಖಾಸಗಿ ಸ್ಥಳಗಳಲ್ಲಿ ಕಸ ಬಿಸಾಡಿದರೆ ಶಿಕ್ಷೆ ಹಾಗೂ ದಂಡದ ಕ್ರಮಗಳು ಜಾರಿಯಾಗಬೇಕು ಎಂದು ಎನ್.ಜಿ.ಟಿ ರಾಜ್ಯಮಟ್ಟದ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಮಂಗಳವಾರ ಸೂಚಿಸಿದರು.

ಘನತ್ಯಾಜ್ಯ ನಿರ್ವಹಣಾ ನಿಯಮಗಳ ಕುರಿತು ಸಂವಾದ ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಸರಿಯಾಗಿ ಅನುಷ್ಠಾನಕ್ಕೆ ತರಬೇಕು' ಎಂದರು.

ಚುಟುಕು ಸುದ್ದಿ

ಆಕಸ್ಮಿಕ ಲಾಭ ತೆರಿಗೆ ಕಡಿತ

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರ ತಗ್ಗಿಸಿದೆ. ಡೀಸೆಲ್ ಹಾಗೂ ವಿಮಾನ ಇಂಧನ (ಎಟಿಎಫ್) ರಫ್ತು ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೂಡ ಇಳಿಕೆ ಮಾಡಲಾಗಿದೆ.

ಕಚ್ಚಾ ತೈಲ ಉತ್ಪಾದನೆ ಮೇಲಿನ ಈ ತೆರಿಗೆಯನ್ನು ಟನ್‌ಗೆ ₹ 1,900ಕ್ಕೆ ಇಳಿಸಲಾಗಿದೆ. ಡೀಸೆಲ್ ರಫ್ತಿನ ಮೇಲಿನ ತೆರಿಗೆಯನ್ನು ಲೀಟರಿಗೆ ₹ 5ಕ್ಕೆ ಇಳಿಕೆ ಮಾಡಲಾಗಿದೆ. ಇದು ₹ 6.5ರಷ್ಟು ಇತ್ತು. ಎಟಿಎಫ್ ರಫ್ತಿಗೆ ತೆರಿಗೆಯನ್ನು ಲೀಟರಿಗೆ ₹ 3.5ಕ್ಕೆ ಇಳಿಸಲಾಗಿದೆ.

ಬ್ರಿಟನ್ ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ಕಲಾವಿದ ಪ್ರವೀಣ್

ಬೆಂಗಳೂರು: ಬ್ರಿಟನ್ ಮತ್ತು ಐರ್ಲೆಂಡ್ ದೇಶಗಳ ಅತ್ಯುತ್ತಮ ಲ್ಯಾಂಡ್‌ಸ್ಕೇಪ್ ಚಿತ್ರ ಕಲಾವಿದರ ಆಯ್ಕೆಗಾಗಿ ನಡೆಯುವ ಟಿ.ವಿ ಕಾರ್ಯಕ್ರಮಕ್ಕೆ ಬೆಂಗಳೂರಿನ ಚಿತ್ರ ಕಲಾವಿದ ಕೆ.ಆರ್. ಪ್ರವೀಣ್ ಅವರು ಆಯ್ಕೆಯಾಗುವ ಮೂಲಕ ಗಮನ ಸೆಳೆದಿದ್ದಾರೆ. 2000ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದ 'ಲ್ಯಾಂಡ್‌ಸ್ಕೇಪ್ ಆರ್ಟಿಸ್ಟ್ ಆಫ್ ದಿ ಇಯರ್' ಸ್ಪರ್ಧೆಯಲ್ಲಿ (8ನೇ ಆವೃತ್ತಿ) ಪ್ರವೀಣ್ ಅವರು ಭಾಗವಹಿಸಿದ್ದಾರೆ.

ಪ್ರವೀಣ್ ಅವರು ರಚಿಸಿದ್ದ ಸ್ಕಾಟ್ಲೆಂಡ್‌ನ ಡುಗಾಲ್ಡ್ ಸ್ಟೆವಾರ್ಟ್ ಸ್ಮಾರಕದ ಜಲವರ್ಣದ ಚಿತ್ರವು ಕಾರ್ಯಕ್ರಮಕ್ಕೆ ಆಯ್ಕೆಯಾಗಿತ್ತು. ಈ ಕಾರ್ಯಕ್ರಮ ಸ್ಕೈ ಆರ್ಟ್ಸ್ ವಾಹಿನಿಯಲ್ಲಿ ಜನವರಿ 25ರಂದು ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ. ಮೆಟೀರಿಯಲ್ ಎಂಜಿನಿಯರಿಂಗ್‌ನಲ್ಲಿ ಪಿಎಚ್‌ಡಿ ಪದವಿ ಪಡೆಯುವ ಉದ್ದೇಶದಿಂದ 2019ರಲ್ಲಿ ಇಂಗ್ಲೆಂಡ್‌ಗೆ ತೆರಳಿದ್ದ ಅವರು, ಕೋವಿಡ್ ಬಳಿಕ ಚಿತ್ರಕಲಾ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ.

5 ದಿನ 'ಹೆಣ್ಣುಮಕ್ಕಳ ದಿನ' ಆಚರಣೆ

ಬೆಂಗಳೂರು: ರಾಷ್ಟ್ರೀಯ ಹೆಣ್ಣುಮಕ್ಕಳ ದಿನವನ್ನು ಜ.18ರಿಂದ ಐದು ದಿನ ಆಚರಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಿಬಿಎಂಪಿಗೆ ಚಟುವಟಿಕೆಗಳ ವೇಳಾಪಟ್ಟಿಯನ್ನು ಸಲ್ಲಿಸಿದೆ.

ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆಯಡಿ ಕೇಂದ್ರ ಸರ್ಕಾರ ಹೆಣ್ಣು ಮಕ್ಕಳ ದಿನವನ್ನು ಆಚರಿಸಲು ಸೂಚಿಸಿದೆ. ಹೆಣ್ಣುಮಕ್ಕಳ ಹಕ್ಕುಗಳ ಕುರಿತಂತೆ ಧನಾತ್ಮಕ ವಿಷಯಗಳನ್ನು ಜ.18, 19, 20, 23 ಮತ್ತು 24ರಂದು ಪ್ರಚಾರ ಮಾಡಲು ಸೂಚಿಸಲಾಗಿದೆ.

‘ಡಿಎಚ್ ಮಾಸ್ಟರ್‌ಮೈಂಡ್’ ಮುದ್ರಣ ಪ್ರತಿ ಬಿಡುಗಡೆ, ವಿಚಾರ ಸಂಕಿರಣ

ಎನ್‌ಇಪಿ ಪಠ್ಯಕ್ರಮದ ಚೌಕಟ್ಟು ಶೀಘ್ರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮದ ಚೌಕಟ್ಟು (ಎನ್‌ಸಿಎಫ್) ಅಂತಿಮವಾಗಿದ್ದು, ಶೀಘ್ರವೇ ಬಿಡುಗಡೆ ಆಗಲಿದೆ’ ಎಂದು ಎನ್‌ಸಿಎಫ್‌ನ ರಾಷ್ಟ್ರೀಯ ಪರಿಶೀಲನಾ ಸಮಿತಿ ಸದಸ್ಯ ಪ್ರೊ.ಎಂ.ಕೆ. ಶ್ರೀಧರ್ ಮಾಹಿತಿ ನೀಡಿದರು.

ನಗರದಲ್ಲಿ ಮಂಗಳವಾರ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಡಿಎಚ್ ಮಾಸ್ಟರ್‌ಮೈಂಡ್’ ಮುದ್ರಣ ಪ್ರತಿ ಬಿಡುಗಡೆ ಹಾಗೂ ಕ್ರಿಯಾತ್ಮಕ ಶಿಕ್ಷಣ 2022–23ನೇ ಸಾಲಿನ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಅವಕಾಶಗಳು ಮತ್ತು ಸವಾಲುಗಳು ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಒಟ್ಟು 4 ಹಂತದಲ್ಲಿ ಪಠ್ಯಕ್ರಮದ ಚೌಕಟ್ಟು ರೂಪಿಸಲಾಗುತ್ತಿದೆ. ಎನ್‌ಸಿಎಫ್‌ನಂತೆ ರಾಜ್ಯದಲ್ಲೂ ಮೊದಲ ಹಂತದ (3ರಿಂದ 6 ವರ್ಷ) ಪಠ್ಯಕ್ರಮದ ಚೌಕಟ್ಟು ಸಿದ್ಧವಾಗಿದ್ದು ಜ.28ರ ಒಳಗಾಗಿ ಬಿಡುಗಡೆ ಆಗಲಿದೆ. ಶಾಲಾ ಹಂತದ ಪಠ್ಯಕ್ರಮದ ಚೌಕಟ್ಟು ಗಮನಿಸಿಯೇ ಉಳಿದ ಚೌಕಟ್ಟು ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಹೇಳಿದರು.

‘ಮಗು 6ನೇ ವರ್ಷದಲ್ಲಿದ್ದಾಗ ಮಿದುಳು ಶೇ 80ರಷ್ಟು ಚುರುಕುತನದಿಂದ ಕೂಡಿರುತ್ತದೆ. ಒಂದೇ ಮಾಧ್ಯಮದ ಬದಲಿಗೆ ಬಹುಭಾಷೆ ಕಲಿತ ವಿದ್ಯಾರ್ಥಿಯ ಆಲೋಚನಾ ಶಕ್ತಿಯೂ ಹೆಚ್ಚಿರುತ್ತದೆ. ಈ ಎಲ್ಲ ಅಂಶಗಳನ್ನೂ ಗಮನಿಸಲಾಗಿದೆ. ಉನ್ನತ ಶಿಕ್ಷಣಕ್ಕೆ ತೆರಳುವುದಕ್ಕೂ ಮೊದಲು ಒಬ್ಬ ವಿದ್ಯಾರ್ಥಿಯ ಜ್ಞಾನದ ಎಲ್ಲ ಶಾಖೆಯೂ ಪರಿಚಯವಾಗಲಿದೆ’ ಎಂದು ಪ್ರತಿಪಾದಿಸಿದರು.

‘ಪದವಿ ಕಲಿತವರಲ್ಲಿ ಶೇ 80ರಷ್ಟು ಮಂದಿ ಉನ್ನತ ಶಿಕ್ಷಣಕ್ಕೆ ತೆರಳುತ್ತಿಲ್ಲ. ಅವರೆಲ್ಲರೂ ನೇರವಾಗಿ ಸಮಾಜಕ್ಕೆ ತೆರಳುತ್ತಿದ್ದಾರೆ. ಶಾಲಾ ಹಂತದಲ್ಲೇ ಮಕ್ಕಳಿಗೆ ಕೌಶಲಯುತ ಶಿಕ್ಷಣ ಅಗತ್ಯ’ ಎಂದು ಹೇಳಿದರು.

‘ಸಮಸ್ಯೆಗಳ ಕುರಿತು ಚರ್ಚಿಸದೇ ಅವಕಾಶಗಳ ಬಗ್ಗೆಯೇ ಅವಲೋಕನ ಅಗತ್ಯ. ಹೊಸ ಪದ್ಧತಿ ತಲೆನೋವು ಅಂದುಕೊಳ್ಳದೇ ಬದಲಾವಣೆಗೆ ಲಭಿಸಿದ ಅವಕಾಶವೆಂದು ಶಿಕ್ಷಕರು ಭಾವಿಸಿಕೊಳ್ಳಬೇಕು’ ಎಂದು ಪ್ರತಿಪಾದಿಸಿದರು.

ದಿ. ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಹಾಗೂ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ಲೆಸ್ಲಿ ಮಾತನಾಡಿದರು.


ನಗರದಲ್ಲಿ ಮಂಗಳವಾರ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಿಎಚ್ ಮಾಸ್ಟರ್‌ಮೈಂಡ್‌ನ ಮುದ್ರಣ ಪ್ರತಿಯನ್ನು ಎನ್‌ಸಿಎಫ್‌ನ ರಾಷ್ಟ್ರೀಯ ಪರಿಶೀಲನಾ ಸಮಿತಿ ಸದಸ್ಯ ಪ್ರೊ.ಎಂ.ಕೆ. ಶ್ರೀಧರ್ ಬಿಡುಗಡೆ ಮಾಡಿದರು. ವಿವಿಧ ಶಾಲಾ – ಕಾಲೇಜುಗಳು ಪ್ರಾಂಶುಪಾಲರು, ಉಪ ಪ್ರಾಂಶುಪಾಲರು ಹಾಗೂ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಉದ್ಯೋಗ ಆಕಾಂಕ್ಷಿಗಳಿಗೆ ನೆರವು

ಎನ್‌ಇಪಿಯ ಜಾರಿ ಹಂತದಲ್ಲಿರುವ ಕೆಲವು ಸಮಸ್ಯೆಗಳನ್ನು ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳು ಪರಿಹರಿಸಬೇಕು ಎಂಬುದು ಈ ವಿಚಾರ ಸಂಕಿರಣದಲ್ಲಿ ವ್ಯಕ್ತವಾಯಿತು. ಮಾಸ್ಟರ್ ಮೈಂಡ್ ಮುದ್ರಣ ಪ್ರತಿಯು ಉದ್ಯೋಗ ಆಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳಿಗೆ ನೆರವಾಗಲಿದೆ.

–**ಡಾ.ಭಾಸ್ಕರ್**, ಪ್ರಾಂಶುಪಾಲ, ಶೇಷಾದ್ರಿಪುರಂ ಕಾಲೇಜು

ಗ್ರಾಮೀಣರಿಗೆ ಅನುಕೂಲ

‘ಡಿಎಚ್ ಮಾಸ್ಟರ್ ಮೈಂಡ್’ ಡಿಜಿಟಲ್ ರೂಪದಲ್ಲಿ ಉತ್ತಮವಾಗಿ ಮೂಡಿಬರುತ್ತಿತ್ತು. ನೆಟ್‌ವರ್ಕ್ ಸಮಸ್ಯೆ ಬಗೆಹರಿಯದ ಕಾರಣಕ್ಕೆ ಗ್ರಾಮೀಣ ಪ್ರದೇಶದ ಭಾಗದಲ್ಲಿ ಮುದ್ರಣದ ಪ್ರತಿ ಅಗತ್ಯವಿತ್ತು.

–**ಗಂಗಾಂಬಿಕಾ**, ಪ್ರಾಂಶುಪಾಲೆ, ಬ್ಲಾಸಂ ಶಾಲೆ, ಕನಕಪುರ

‘24 ಶಾಲೆಗಳಿಗೆ ಆಧುನಿಕ ಸೌಲಭ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀಮಂತ ಕುಟುಂಬದ ಮಕ್ಕಳಿಗೆ ಲಭಿಸುವ ಉನ್ನತ ಶಿಕ್ಷಣವು ಸರ್ಕಾರಿ ಶಾಲೆಯ ಮಕ್ಕಳಿಗೂ ದೊರೆಯಬೇಕೆಂಬ ಉದ್ದೇಶದಿಂದ ಬಿ.ಟಿ.ಎಂ ವಿಧಾನಸಭಾ ಕ್ಷೇತ್ರದ 24 ಸರ್ಕಾರಿ ಶಾಲೆಗಳ ನವೀಕರಣದ ಜೊತೆಯಲ್ಲಿ ಆಧುನೀಕರಣ ಸೌಲಭ್ಯ ಒದಗಿಸಲಾಗಿದೆ’ ಎಂದು ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜು ವಾರ್ಷಿಕೋತ್ಸವ ಮತ್ತು ಬಿಟಿಎಂ ಕ್ಷೇತ್ರದ 24 ಸರ್ಕಾರಿ ಶಾಲೆಗಳು ಅಭಿವೃದ್ಧಿಯನ್ನು ಸರ್ಕಾರದ ಶಿಕ್ಷಣ ಇಲಾಖೆಯ ಮುಖ್ಯ ಸಲಹೆಗಾರ ಪ್ರೊ. ದೊರೆಸ್ವಾಮಿ ಅವರ ಜತೆಗೆ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

‘ಸಮಾಜದಲ್ಲಿ ವಿದ್ಯಾವಂತರಿಗೆ ಮಾತ್ರ ಗೌರವ ಸಿಗುತ್ತದೆ. ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗಬಾರದು’ ಎಂದು ಹೇಳಿದರು.

‘ಮಕ್ಕಳು ಕುಳಿತುಕೊಳ್ಳಲು ಡೆಸ್ಕ್, ಬರೆಯಲು ಟೇಬಲ್ ಮತ್ತು ಕಂಪ್ಯೂಟರ್ ಲ್ಯಾಬ್, ಸೈನ್ಸ್ ಲ್ಯಾಬ್ ಮತ್ತು ಶೌಚಾಲಯ ವ್ಯವಸ್ಥೆ, ಆಟದ ಮೈದಾನ ನವೀಕರಣ ಮಾಡಲಾಗಿದೆ. ಮಕ್ಕಳ ಶಿಕ್ಷಣ ಪಡೆದು ಉನ್ನತ ಸ್ಥಾನಮಾನ ಗಳಿಸಿ, ರಾಜ್ಯ, ರಾಷ್ಟ್ರಕ್ಕೆ ಉತ್ತಮ ಪ್ರಜೆಯಾಗಲಿ ಎಂಬುದು ನಮ್ಮ ಆಶಯ’ ಎಂದು ಅವರು ಹೇಳಿದರು.

ಪ್ರೊ.ದೊರೆಸ್ವಾಮಿ ಮಾತನಾಡಿ, ‘ಶಿಕ್ಷಣದಲ್ಲಿ ಅಭಿವೃದ್ಧಿಯಾಗಬೇಕಾದರೆ ಸರ್ಕಾರದ ಜೊತೆಯಲ್ಲಿ ಖಾಸಗಿ ಸಂಸ್ಥೆಗಳು ಸಹಕಾರ ನೀಡಬೇಕು. ಆಗ ಬದಲಾವಣೆ ತರಲು ಸಾಧ್ಯ’ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಂಜುನಾಥ ರೆಡ್ಡಿ, ಬೈರಸಂದ್ರ ನಾಗರಾಜ್, ಚಂದ್ರಪ್ಪ, ಗೋವರ್ಧನ್ ರೆಡ್ಡಿ, ಆನಂದ್ ಹಾಜರಿದ್ದರು.


ಶಾಸಕ ರಾಮಲಿಂಗಾರೆಡ್ಡಿ ಹಾಗೂ ಸರ್ಕಾರದ ಶಿಕ್ಷಣ ಇಲಾಖೆಯ ಮುಖ್ಯ ಸಲಹೆಗಾರ ಪ್ರೊ.ದೊರೆಸ್ವಾಮಿ ಅವರು ಶಾಲಾ ಮಕ್ಕಳ ಜತೆಗೆ ಸಮಾಲೋಚಿಸಿದರು

‘ಶಾಲೆ ಮುಚ್ಚಲು ಹೆಚ್ಚುವರಿ ಶಿಕ್ಷಕರ ಅಸ್ತ್ರ’

ಬೆಂಗಳೂರು: ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರ ಪಟ್ಟಿ ತಯಾರಿಸಿ, ಶಿಕ್ಷಕರ ಮರು ಹೊಂದಾಣಿಕೆ ಮಾಡುವ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಹೊರಟಿದೆ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಆರೋಪಿಸಿದ್ದಾರೆ. ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಾಲಾ ಶಿಕ್ಷಕರ ಮರು ಹೊಂದಾಣಿಕೆ ಪ್ರಾರಂಭಿಸಿರುವುದು ಸರಿಯಾದ ಕ್ರಮವಲ್ಲ. ಶಾಲೆಗಳು 2022-23ನೇ ಶೈಕ್ಷಣಿಕ ವರ್ಷ ಪೂರೈಸುತ್ತಿವೆ. ನಿಗದಿತ ಪಠ್ಯ, ಮೌಲ್ಯಾಂಕನ ಮುಗಿಸಿ, ಮಕ್ಕಳ ಕಲಿಕೆ ಪರಾಮರ್ಶಿಸುತ್ತಿರುವ ಸಮಯದಲ್ಲಿ ಶಿಕ್ಷಕರನ್ನು ಮಾನಸಿಕವಾಗಿ ತೊಂದರೆಗೆ ಗುರಿಪಡಿಸುವುದು ಮಕ್ಕಳ ಶೈಕ್ಷಣಿಕ ದೃಷ್ಟಿಯಿಂದ ಅವೈಜ್ಞಾನಿಕ ಕ್ರಮ ಎಂದು ಎಚ್ಚರಿಸಿದ್ದಾರೆ.

ಸ್ವಿಗ್ಗಿ ಸಿಬ್ಬಂದಿಗೆ ಆಂಬುಲೆನ್ಸ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಆ್ಯಪ್ ಆಧರಿತ ಆಹಾರ ಪೂರೈಕೆ ಕಂಪನಿ ಸ್ವಿಗ್ಗಿ ತನ್ನ ಆಹಾರ ವಿತರಣಾ ಪ್ರತಿನಿಧಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗೆ ಉಚಿತ ಆಂಬುಲೆನ್ಸ್ ಸೇವೆ ಒದಗಿಸುವುದಾಗಿ ಘೋಷಿಸಿದೆ.

ಈ ಸಂಬಂಧ ಸಂಸ್ಥೆಯು ಡಯಲ್ 4242 ಆಂಬುಲೆನ್ಸ್ ಸರ್ವೀಸಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ‘ತುರ್ತು ಸಂದರ್ಭಗಳಲ್ಲಿ ವಿತರಣಾ ಪ್ರತಿನಿಧಿಗಳು ಉಚಿತ ಸಹಾಯವಾಣಿ ಸಂಖ್ಯೆ 1800 267 4242ಕ್ಕೆ ಕರೆ ಮಾಡಿ, ಆಂಬುಲೆನ್ಸ್ ಸೇವೆಯನ್ನು ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಕಾರ್ಯಾವಧಿಯಲ್ಲಿ ಆ್ಯಪ್‌ನಿಂದ ಹೊರಬರದೇ, ಎಸ್‌ಒಎಸ್ ಬಟನ್ (ತುರ್ತು ಸೇವೆ ಬಟನ್) ಒತ್ತಿದರೂ ಸ್ಥಳಕ್ಕೆ ಆಂಬುಲೆನ್ಸ್ ಬರಲಿದೆ’ ಎಂದು ಸಂಸ್ಥೆ ತಿಳಿಸಿದೆ.

‘ಈ ಪ್ರಕ್ರಿಯೆಗೆ ಯಾವುದೇ ದಾಖಲಾತಿಗಳ ಅಗತ್ಯವಿಲ್ಲ. ಆದರೆ, ವಿತರಣಾ ಪ್ರತಿನಿಧಿಗಳು ತಮ್ಮ ಕುಟುಂಬ ಸದಸ್ಯರ ಗುರುತನ್ನು ದೃಢಪಡಿಸುವ ಅಗತ್ಯವಿರುತ್ತದೆ. ಪ್ರಾಯೋಗಿಕ ಯಶಸ್ಸಿನಿಂದ ಈ ಯೋಜನೆಯನ್ನು ದೇಶದಾದ್ಯಂತ ವಿಸ್ತರಿಸಲಾಗಿದೆ. ಪರೀಕ್ಷಾರ್ಥ ಪ್ರಕ್ರಿಯೆಗಳಲ್ಲಿ ಸರಾಸರಿ 12 ನಿಮಿಷಗಳಲ್ಲಿ ಆಂಬುಲೆನ್ಸ್ ಸೇವೆ ಲಭ್ಯವಾಗಿದೆ’ ಎಂದು ಹೇಳಿದೆ.

ಸ್ವಿಗ್ಗಿಯ ಕಾರ್ಯಾಚರಣೆಗಳ ಮುಖ್ಯಸ್ಥ ಮಿಹಿರ್ ರಾಜೇಶ್ ಶಾ, ‘ಆಹಾರ ವಿತರಣಾ ಪ್ರತಿನಿಧಿಗಳ ಸುರಕ್ಷತೆಗೆ ಸಂಸ್ಥೆ ಬದ್ಧವಾಗಿದೆ. ಆಹಾರ ವಿತರಿಸುವಾಗ ಕೆಲವೊಮ್ಮೆ ಅವಘಡಗಳು ಸಂಭವಿಸುತ್ತವೆ. ಇಂತಹ ಸಂದರ್ಭದಲ್ಲಿ ಅವರಿಗೆ ಕ್ಷಿಪ್ರವಾಗಿ ಆರೋಗ್ಯ ಸೇವೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಾವು ಉಚಿತ ಆಂಬುಲೆನ್ಸ್ ಸೇವೆಗಳನ್ನು ನೀಡುತ್ತಿದ್ದೇವೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿ.ಗೋಪಾಲಾಚಾರ್‌ಗೆ ‘ವ್ಯಾಸ ಪ್ರಶಸ್ತಿ’

ಬೆಂಗಳೂರು: ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ನೀಡುವ ‘ವ್ಯಾಸ ಪ್ರಶಸ್ತಿ’ಗೆ ಉಡುಪಿಯ ವಾದಿರಾಜ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಜಿ. ಗೋಪಾಲಾಚಾರ್ ಆಯ್ಕೆಯಾಗಿದ್ದಾರೆ.

‘ಧ್ರುವ ಪ್ರಶಸ್ತಿ’ಗೆ ಮಂತ್ರಾಲಯ ಮಠದ ಗುರು ಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಎನ್. ವಾಗೀಷಾಚಾರ್ಯ ಮತ್ತು ಶ್ರೀಕಾಂತ ತಂತ್ರೀ, ‘ಕನಕಶ್ರೀ ಪ್ರಶಸ್ತಿ’ಗೆ ಸಂಸ್ಕೃತ ವೇದ ವಿದ್ವಾಂಸ ಶಾಮಾಚಾರ್ಯ, ‘ಬಿ.ಎಸ್.ಬೆಳಗೆರೆ ಮಹಾಲಕ್ಷ್ಮಮ್ಮ ಸರಣಾರ್ಥ ಪ್ರಶಸ್ತಿ’ಗೆ ಆರ್. ಚಂದ್ರಿಕಾ ಆಯ್ಕೆಯಾಗಿದ್ದಾರೆ. ಇದೇ 26–29ರವರೆಗೆ ಕೆಂಗೇರಿಯ ತನ್ನ ಕೇಂದ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ನಿರುದ್ಯೋಗಿಗಳಿಗೆ ತರಬೇತಿ

ಬೆಂಗಳೂರು: ನಗರದ ಉನ್ನತಿ ಸೆಂಟರ್18ರಿಂದ 25 ವರ್ಷದವರೆಗಿನ ನಿರುದ್ಯೋಗಿಗಳಿಗೆ 35 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ತರಬೇತಿಗೆ ಯಾವುದೇ ವಿದ್ಯಾರ್ಹತೆ ನಿಗದಿಪಡಿಸಿಲ್ಲ. ಕನಿಷ್ಠ ಶುಲ್ಕ ಇರಲಿದ್ದು, ಫೆ.1ರಿಂದ ಪ್ರವೇಶ ಪ್ರಾರಂಭವಾಗಲಿದೆ. ಸ್ಪೋಕನ್ ಇಂಗ್ಲಿಷ್, ಬೇಸಿಕ್ ಕಂಪ್ಯೂಟರ್ ಸೇರಿ ಕೌಶಲ ವೃದ್ಧಿಗೆ ಸಂಬಂಧಿಸಿದ ತರಬೇತಿಗಳನ್ನು ನೀಡಲಾಗುತ್ತದೆ. ಉದ್ಯೋಗವನ್ನು ಕೂಡ ಒದಗಿಸಿಕೊಡುವುದಾಗಿ ಕೇಂದ್ರವು ಭರವಸೆ ನೀಡಿದೆ.

ವಿಳಾಸ: ಉನ್ನತಿ ಸೆಂಟರ್, ನಂ.1, ದೇವಸ್ಥಾನದ ರಸ್ತೆ, ಎನ್‌ಜಿಇಎಫ್ ಬಡಾವಣೆ, (ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ), ಸದಾನಂದನಗರ, ಬೆಂಗಳೂರು. ಸಂಪರ್ಕಕ್ಕೆ: 080 25384642 ಅಥವಾ 9980667191

7ನೇ ವೇತನ ಆಯೋಗ: ಪ್ರಶ್ನಾವಳಿ ಬಿಡುಗಡೆ

ಬೆಂಗಳೂರು: ಕೇಂದ್ರೀಯ ವೇತನ ರಚನೆಯನ್ನು ಅಳವಡಿಸಿಕೊಳ್ಳುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು 7 ನೇ ಕರ್ನಾಟಕ ರಾಜ್ಯ ವೇತನ ಆಯೋಗ ಪ್ರಶ್ನಾವಳಿಗಳನ್ನು ಬಿಡುಗಡೆ ಮಾಡಿದ್ದು, ರಾಜ್ಯ ಸರ್ಕಾರಿ ನೌಕರರು ಮತ್ತು ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

ರಾಜ್ಯದಲ್ಲಿ 5.11 ಲಕ್ಷ ನೌಕರರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ₹ 41,288 ಕೋಟಿ ಹಾಗೂ ನಿವೃತ್ತ ಪಿಂಚಣಿದಾರರಿಗೆ ₹ 24,016 ಕೋಟಿಗಳನ್ನು ವ್ಯಯಿಸುತ್ತಿದೆ. ರಾಜ್ಯದ ಒಟ್ಟು ಆದಾಯದಲ್ಲಿ ವೇತನಕ್ಕಾಗಿಯೇ ಶೇ 33.70 ಬಳಕೆಯಾಗುತ್ತಿದೆ.

ಭವಿಷ್ಯದ ನಿವೃತ್ತಿ ಪಿಂಚಣಿ, ಹೊಸ ಪಿಂಚಣಿ ವ್ಯವಸ್ಥೆಗೆ ತಗಲುವ ವೆಚ್ಚ, ವಾರ್ಷಿಕ ವೇತನ ಬಡ್ತಿಗಳನ್ನು ಗಮನದಲ್ಲಿ ಇಟ್ಟುಕೊಂಡು ವೇತನ ಪರಿಷ್ಕರಣೆ ಮಾಡಬೇಕಿದೆ. ಖಾಲಿ ಇರುವ 2.58 ಲಕ್ಷ ಹುದ್ದೆಗಳ ಉಳಿತಾಯವನ್ನೂ ಪರಿಗಣಿಸಿ ಅಂತಿಮ ನಿರ್ಧಾರ ಮಾಡಲಾಗುವುದು. ಅದಕ್ಕಾಗಿ ಅಭಿಪ್ರಾಯಗಳನ್ನು ಫೆಬ್ರವರಿ10 ರ ಒಳಗೆ ಅರಮನೆಯ ರಸ್ತೆಯ ಔಷಧ ಇಲಾಖೆಯ ಕಟ್ಟಡದಲ್ಲಿನ ಆಯೋಗದ ಕಚೇರಿಗೆ ತಲುಪಿಸಲು ಕೋರಲಾಗಿದೆ.

200 ಮೀಟರ್ ಅಂತರದಲ್ಲೇ ನೀರಿನ ಘಟಕ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗೇನಹಳ್ಳಿ (ವಾರ್ಡ್ ನಂ.72) ವ್ಯಾಪ್ತಿಯ ಬಿನ್ನಿಮಿಲ್ ರಸ್ತೆಯಲ್ಲಿ 200 ಮೀಟರ್ ವ್ಯಾಪ್ತಿಯಲ್ಲೇ ಮತ್ತೊಂದು ಕುಡಿಯುವ ನೀರಿನ ಘಟಕ ಸ್ಥಾಪಿಸುತ್ತಿರುವುದಕ್ಕೆ ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ದೂರು ಸಲ್ಲಿಸಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದಾರೆ.

'ಈಗಾಗಲೇ ಒಂದು ಕುಡಿಯುವ ಒಂದು ಕುಡಿಯುವ ನೀರಿನ ಘಟಕ ಬಿನ್ನಿಮಿಲ್ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಹೀಗಿರುವಾಗ, ಕೇವಲ 200 ಮೀಟರ್ ಅಂತರದಲ್ಲಿ ಮತ್ತೊಂದು ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಮುಂದಾಗಿರುವುದು ರಾಜಕೀಯ ಪ್ರೇರಿತವಾಗಿದೆ' ಎಂದು ದೂರಿದ್ದಾರೆ.

'ಹಾಲಿ ಇರುವ ಘಟಕದಿಂದ ಸ್ಥಳೀಯವಾಗಿ ಯಾವುದೇ ತೊಂದರೆ ಇಲ್ಲದೆಯೇ ಸಮರ್ಪಕವಾಗಿ ಕುಡಿಯುವ ನೀರು ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಹೀಗಿರುವಾಗ ಕಿರಿದಾಗಿರುವ ಮತ್ತು ವಾಹನ ದಟ್ಟಣೆ ಹೆಚ್ಚಾಗಿರುವ ರಸ್ತೆಯಲ್ಲಿ ಪಾದಚಾರಿ ರಸ್ತೆಯನ್ನು ಆಕ್ರಮಿಸಿಕೊಂಡು ಸಾರ್ವಜನಿಕ ತೆರಿಗೆ ಮೊತ್ತವನ್ನು ಪೋಲು ಮಾಡಿ ಹೊಸದಾಗಿ ಮತ್ತೊಂದು ನೀರಿನ ಘಟಕವನ್ನು ಸ್ಥಾಪಿಸಲು ಹೊರಟಿರುವುದು ಯಾವ ಪುರುಷಾರ್ಥಕ್ಕೆ ಎಂಬುದು ತಿಳಿಯುತ್ತಿಲ್ಲ' ಎಂದು ಬಿ. ವೇದಕುಮಾರ್, ಮಾಯಣ್ಣ ಮತ್ತಿತರರು ದೂರಿದ್ದಾರೆ.

'ಆದ್ದರಿಂದ, ಹೊಸದಾಗಿ ಇದೇ ಸ್ಥಳದಲ್ಲೇ ನೀರಿನ ಘಟಕ ಸ್ಥಾಪಿಸಲು ಅನುಮೋದನೆ ನೀಡಬಾರದು. ಸಾರ್ವಜನಿಕರಿಗೆ ಅನುಕೂಲವಾಗುವಂತಹ ಇಂತಹ ಯೋಜನೆಗಳನ್ನು ಅವಶ್ಯಕತೆ ಇರುವ ಬೇರೆ ಸ್ಥಳದಲ್ಲಿ ಸ್ಥಾಪಿಸಬೇಕು. ಒಂದು ವೇಳೆ, ಇದೇ ಸ್ಥಳದಲ್ಲೇ ಹೊಸದಾಗಿ ನೀರಿನ ಘಟಕಗಳನ್ನು ಸ್ಥಾಪಿಸಲು ಅನುಮತಿ ನೀಡಿದರೆ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಆದ್ದರಿಂದ, ಯಾವುದೇ ಕಾರಣಕ್ಕೂ ಈ ಸ್ಥಳದಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಅವಕಾಶ ಮಾಡಿಕೊಡಬಾರದು. ಈ ಬಗ್ಗೆ ಅಧಿಕಾರಿಗಳಿಗೂ ನಿರ್ದೇಶನ ನೀಡಬೇಕು' ಎಂದು ಕೋರಿದ್ದಾರೆ.

ಅಶೋಕಗೆ ಕೈ– ದಳ ಪೈಪೋಟಿ

ಪ್ರಜಾ ಮತ — ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

• ಆರ್. ಮಂಜುನಾಥ್

ಬೆಂಗಳೂರು: ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ರಚನೆಯಾದ ಮೇಲೆ ಮೂರು ಬಾರಿಯೂ ಆರ್. ಅಶೋಕ 'ಹ್ಯಾಟ್ರಿಕ್' ಶಾಸಕರಾಗಿದ್ದು, ಪ್ರಸ್ತುತ ಕಂದಾಯ ಇಲಾಖೆ ಸೇರಿದಂತೆ ಸರ್ಕಾರದಲ್ಲಿ ಹಲವು ಖಾತೆಗಳನ್ನು ನಿಭಾಯಿಸಿದ್ದಾರೆ. ಇವರಿಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪೈಪೋಟಿ ನೀಡುತ್ತಿದ್ದರೂ, ಸೋಲಿಸಲು ಸಾಧ್ಯವಾಗಿಲ್ಲ. ಈ ಬಾರಿ ಸೋಲಿಸಲೇಬೇಕು ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಹಟ ತೊಟ್ಟಿವೆ.

ಕ್ಷೇತ್ರ ಸ್ಥಿತಿ–ಗತಿ

ಅಭಿವೃದ್ಧಿ ವಿಷಯಕ್ಕೆ ಬಂದರೆ ಬಿಬಿಎಂಪಿ ವ್ಯಾಪ್ತಿಯಿಂದ ಆಗಬೇಕಾದ ಕೆಲಸಗಳು ಕ್ರಿಯಾಶೀಲ ಕಾರ್ಪೊರೇಟರ್‌ಗಳ ಕಾಲದಲ್ಲಿ ನಡೆದಿವೆ. ಆದರೆ, ಸ್ಮಶಾನ, ಆಟದ ಮೈದಾನ, ಶಾಲೆ– ಕಾಲೇಜುಗಳು ಪದ್ಮನಾಭನಗರ ಕ್ಷೇತ್ರದಲ್ಲಿ ಅಗತ್ಯಕ್ಕನುಸಾರವಾಗಿಲ್ಲ. ಶುದ್ಧ ಕುಡಿಯುವ ನೀರಿನ ಘಟಕಗಳು ರಾಜಕಾಲುವೆಗಳ ಮೇಲಿದ್ದರೂ ಕಾರ್ಯನಿರ್ವಹಿಸುತ್ತಿಲ್ಲ. ಈ ಕ್ಷೇತ್ರ ವ್ಯಾಪ್ತಿಯ ಬಿಜೆಪಿ ನಾಯಕರು ಬಿಬಿಎಂಪಿ ಸದಸ್ಯರಾಗಿ, ಆಡಳಿತ ಪಕ್ಷದ ನಾಯಕ, ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ಸೇರಿದಂತೆ ಹಲವು ಅಧಿಕಾರಗಳಲ್ಲಿದ್ದರು. ಆಗ ಆಯಾ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಆದರೆ, ಕೊಳೆಗೇರಿ ಹಾಗೂ ಬಡವರ್ಗದ ಜನರು ಅತಿ ಹೆಚ್ಚಿರುವ ಈ ಪ್ರದೇಶದಲ್ಲಿ ಬಿಬಿಎಂಪಿಯ ಒಂದು ಶಾಲೆ ಮಾತ್ರ ಇದೆ. ಶಾಲಾ-ಕಾಲೇಜುಗಳ ಸ್ಥಾಪನೆಯ ಹಲವು ಬೇಡಿಕೆಗಳು ಶಾಸಕರ ಮಟ್ಟದಲ್ಲಿ ಈಡೇರಿಲ್ಲ. ಮೂಲಸೌಕರ್ಯದ ಕೊರತೆ ಎದ್ದುಕಾಣುತ್ತಿದೆ.


ಬಿಜೆಪಿಯಿಂದ ಈ ಬಾರಿಯೂ ಆರ್. ಅಶೋಕ ಅವರೇ ಅಭ್ಯರ್ಥಿಯಾಗುವ ಸಾಧ್ಯತೆ ಇದೆ. ದೆಹಲಿ ನಾಯಕರ ಪಟ್ಟೇನಾದರೂ ಬದಲಾದರೆ ಈ ಕ್ಷೇತ್ರದಲ್ಲಿ ಮಾಜಿ ಕಾರ್ಪೊರೇಟರ್‌ಗಳು ಕಣಕ್ಕಿಳಿಯಲು ಸಜ್ಜಾಗಿದ್ದಾರೆ. ಅವರಲ್ಲಿ ಎಲ್. ಶ್ರೀನಿವಾಸ್, ಎ.ಎಚ್. ಬಸವರಾಜು ಮುಂಚೂಣಿಯಲ್ಲಿದ್ದಾರೆ. ಎನ್.ಆರ್. ರಮೇಶ್ ಕೂಡ ಆಕಾಂಕ್ಷಿ.

ಕಾಂಗ್ರೆಸ್‌ನಲ್ಲಿ ಈ ಬಾರಿ ಸ್ಥಳೀಯರಾದ, ಗುತ್ತಿಗೆದಾರ ರಘುನಾಥ ನಾಯ್ಡು ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಪಕ್ಷದ ಬೃಹತ್ ಕಚೇರಿಯನ್ನು ಪದ್ಮನಾಭನಗರ ಕ್ಷೇತ್ರದಲ್ಲಿ ಒಂದೆರಡು ವರ್ಷದಿಂದ ಸ್ಥಾಪಿಸಿ, ಮೇಕೆದಾಟು, ಭಾರತ್ ಜೋಡೊ ಪಾದಯಾತ್ರೆ ಸೇರಿ ಹಲವು ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿ ಸಿದ್ದರಾಮಯ್ಯ, ರಾಮಲಿಂಗಾರೆಡ್ಡಿ ಅವರ ಹೋರಾಟಗಳಿಗೆ ಬೆನ್ನೆಲುಬಾಗಿದ್ದು, ಈ ಬಾರಿ ಟಿಕೆಟ್ ಪಡೆದು, ನಾಯ್ಡು ಸಮುದಾಯ ಸೇರಿ ಕಾಂಗ್ರೆಸ್‌ನ ಮೂಲಮತಗಳನ್ನು ಸೆಳೆಯುವ ಲೆಕ್ಕಾಚಾರ ಹಾಕಿದ್ದಾರೆ.

ಇವರಲ್ಲದೆ, ಮಾಜಿ ಮೇಯರ್ ವೆಂಕಟೇಶ ಮೂರ್ತಿ ಅವರು ಕಾಂಗ್ರೆಸ್ ಸೇರಿಕೊಂಡಿದ್ದು, ಸಮುದಾಯದ ಮತ ಸೇರಿದಂತೆ ಕಾರ್ಪೊರೇಟರ್ ಆಗಿದ್ದ ಸಂದರ್ಭದಿಂದ ಜೊತೆಗಿದ್ದ ಮತದಾರರ ಬೆಂಬಲ ಪಡೆಯುವ ಆಕಾಂಕ್ಷಿಯಾಗಿದ್ದಾರೆ. 2008ರಲ್ಲಿ ಸೋತಿದ್ದ ಹಾಗೂ ಕಳೆದ ಬಾರಿ ಬಿ ಫಾರಂ ಪಡೆದರೂ ಕೊನೆಯ ಕ್ಷಣದಲ್ಲಿ ಹಿಂದೆ ಸರಿದಿದ್ದ ಗುರಪ್ಪ ನಾಯ್ಡು ಹಾಗೂ ಇದೀಗ ಪ್ರಚಾರದಲ್ಲಿರುವ ಸಂಜಯ್ ಗೌಡ ಅವರೂ ಕಣಕ್ಕಿಳಿಯಲು ಆಸಕ್ತರಾಗಿದ್ದಾರೆ.

ತನ್ನದೇ ಆದ ಮತ ಬ್ಯಾಂಕ್ ಹೊಂದಿರುವ ಜೆಡಿಎಸ್ ಯಾರನ್ನು ಕಣಕ್ಕೆ ಇಳಿಸಲಿದೆ ಎಂಬ ಸೂಚನೆಯನ್ನು ಕೊಟ್ಟಿಲ್ಲ.

ಪದ್ಮನಾಭನಗರ



ಆರ್. ಅಶೋಕ



ಹಾಲಿ ಮತದಾರರ ವಿವರ

1,37,250 ಪುರುಷರು

1,32,030 ಮಹಿಳೆಯರು

17 ತೃತೀಯ ಲಿಂಗಿಗಳು

2,69,297 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	77,868	53,563	61,561
ಜೆಡಿಎಸ್	45,702	33,503	30,285
ಕಾಂಗ್ರೆಸ್	33,400	26,183	22,158

ಸುದ್ದಿ 2 ನಿಮಿಷ

ಬಾಲಬ್ರೂಯಿಯಲ್ಲಿ ಕಾನ್ಸ್ಟಿಟ್ಯೂಷನ್ ಕ್ಲಬ್: ಹೈಕೋರ್ಟ್ ಅಸ್ತು

ಬೆಂಗಳೂರು: ನಗರದ ಹೃದಯಭಾಗದಲ್ಲಿನ ಪಾರಂಪರಿಕ ಕಟ್ಟಡ ವೆನಿಸಿದ ಬಾಲಬ್ರೂಯಿ ಅತಿಥಿ ಗೃಹದಲ್ಲಿ 'ಕಾನ್ಸ್ಟಿಟ್ಯೂಷನ್ ಕ್ಲಬ್' ಆರಂಭಿಸುವ ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಮೆಟ್ರೊ ಕಾಮಗಾರಿಗಾಗಿ ಮರ ಕಡಿಯುವುದನ್ನು ಪ್ರಶ್ನಿಸಿ ಪರಿಸರ ತಜ್ಞರೂ ಆದ ಬೆಂಗಳೂರು ಪರಿಸರ ಟ್ರಸ್ಟ್ ಮುಖ್ಯಸ್ಥ ದತ್ತಾತ್ರೇಯ ಟಿ.ದೇವರೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಜೊತೆ ದಾಖಲಿಸಲಾಗಿದ್ದ ಈ ಸಂಬಂಧದ ಮಧ್ಯಂತರ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ವಕೀಲೆ ಪ್ರತಿಮಾ ಹೊನ್ನಾಪುರ, 'ಬಾಲಬ್ರೂಯಿಯ ಪಾರಂಪರಿಕ ಕಟ್ಟಡದ ಸ್ವರೂಪಕ್ಕೆ ಯಾವುದೇ ಧಕ್ಕೆ ಆಗದಂತೆ ನೋಡಿಕೊಳ್ಳಲಾಗುವುದು. ಅತಿಥಿ ಗೃಹದ ಆವರಣದಲ್ಲಿರುವ 159 ಮರಗಳನ್ನು ಕಡಿಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ದೆಹಲಿಯಲ್ಲೂ ಇದೇ ಮಾದರಿಯ ಕ್ಲಬ್ ಇದೆಯಲ್ಲವೇ'? ಎಂದು ಪ್ರಶ್ನಿಸಿತಲ್ಲದೇ, 'ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಒಳ್ಳೆಯ ಗ್ರಂಥಾಲಯ ಹಾಗೂ ಉತ್ತಮ ಕಾಫಿ ಸಿಗುವಂತಾಗಲಿ' ಎಂದು ಆಶಿಸಿ ಸರ್ಕಾರದ ಪ್ರಸ್ತಾವಕ್ಕೆ ಅನುಮತಿ ನೀಡಿತು.



ಮೆಟ್ರೊ: ಕಬ್ಬಿಣದ ಚೌಕಟ್ಟು ಉರುಳಲು ಎಂಜಿನಿಯರ್ ನಿರ್ಲಕ್ಷ್ಯ ಕಾರಣ?

ಬೆಂಗಳೂರು: ಹೆಣ್ಣೂರು ಕ್ರಾಸ್‌ನಲ್ಲಿ ಮೆಟ್ರೊ ಪಿಲ್ಲರ್ ನಿರ್ಮಿಸಲು ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದು ತಾಯಿ–ಮಗು ಮೃತಪಟ್ಟ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು, ಸದ್ಯದಲ್ಲೇ ಅಂತಿಮ ವರದಿ ಸಲ್ಲಿಸುವ ಸಾಧ್ಯತೆಯಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಮನವಿ ಮೇರೆಗೆ ಘಟನಾ ಸ್ಥಳಕ್ಕೆ ತಜ್ಞರು ಭೇಟಿ ನೀಡಿ ಮಾದರಿ ಸಂಗ್ರಹಿಸಿದ್ದರು. ಕಾಮಗಾರಿ ಉಸ್ತುವಾರಿ ವಹಿಸಿದ್ದ ಬಿಎಂಆರ್‌ಸಿಎಲ್ ಅಧಿಕಾರಿಗಳು ಹಾಗೂ ಗುತ್ತಿಗೆ ಪಡೆದಿದ್ದ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಯ (ಎನ್‌ಸಿಸಿ) ಎಂಜಿನಿಯರ್‌ಗಳಿಂದ ಮಾಹಿತಿ ಕಲೆ ಹಾಕಿದ್ದರು. ಸ್ಥಳೀಯರು ಹಾಗೂ ಪ್ರತ್ಯಕ್ಷದರ್ಶಿಗಳಿಂದಲೂ ಮಾಹಿತಿ ಸಂಗ್ರಹಿಸಿದ್ದರು.

'ಕಾಮಗಾರಿ ನಡೆಯುತ್ತಿದ್ದ ಸ್ಥಳದ ಮಣ್ಣು, ಕಾಮಗಾರಿಗೆ ಬಳಸಿದ ಕಬ್ಬಿಣಗಳನ್ನು ಪರಿಶೀಲಿಸಲಾಗಿದೆ. ಅವಘಡಕ್ಕೆ ಎಂಜಿನಿಯರ್‌ಗಳ ನಿರ್ಲಕ್ಷ್ಯವೇ ಕಾರಣ ಎಂಬುದು ಮೇಲ್ನೋಟಕ್ಕೆ ದೃಢಪಟ್ಟಿದೆ. ವೈಜ್ಞಾನಿಕ ಕಾರಣ ಸಮೇತ ಸರ್ಕಾರಕ್ಕೆ ವರದಿ ಸಲ್ಲಿಸಲು ತಯಾರಿ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಗುಣಮಟ್ಟದ ವಸ್ತುಗಳನ್ನೇ ಕಾಮಗಾರಿಗೆ ಬಳಸಲಾಗಿದೆ. ಆದರೆ, ಅತೀ ಎತ್ತರದ ಕಬ್ಬಿಣದ ಚೌಕಟ್ಟು ನಿರ್ಮಿಸಿದ್ದರಿಂದ ಭಾರ ಹೆಚ್ಚಾಗಿ ಉರುಳಿದೆ. ಎತ್ತರದ ಕಬ್ಬಿಣದ ಚೌಕಟ್ಟು ನಿಲ್ಲಿಸಿದ್ದರೂ ವಾಲದಂತೆ ತಡೆಯಲು ಯಾವುದೇ ಸುರಕ್ಷತಾ ಕ್ರಮ ತೆಗೆದುಕೊಂಡಿರಲಿಲ್ಲವೆಂಬ ಅಂಶಗಳು ವರದಿಯಲ್ಲಿವೆ' ಎಂದು ಮೂಲಗಳು ತಿಳಿಸಿವೆ.

'ಬದುಕಿಗೆ ಬೆಳಕಾಗುವ ವಿಶ್ವವಿದ್ಯಾಲಯ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಆಧುನಿಕ ವಿಶ್ವವಿದ್ಯಾಲಯಗಳಿಗಿಂತ ನಮ್ಮ ಬದುಕಿಗೆ ಬೇಕಾದ ಬೆಳಕು ಬಯಲು ವಿಶ್ವವಿದ್ಯಾಲಯದಲ್ಲಿಯೇ ಅಗಾಧವಾಗಿದೆ' ಎಂದು ಜಾನಪದ ತಜ್ಞ ಹಾಗೂ ಮೈಸೂರು ವಿವಿಯ ಮಂಟೇಸ್ವಾಮಿ ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಅಭಿಪ್ರಾಯಪಟ್ಟರು.

ಕೆ.ನಾರಾಯಣಪುರದಲ್ಲಿರುವ ಕ್ರಿಸ್ತು ಜಯಂತಿ ಸ್ವಾಯತ್ತ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ ಆಯೋಜಿಸಿದ್ದ 'ಕನ್ನಡ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯದ ನೆಲೆಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. 'ಆಧುನಿಕ ನಗರಗಳಲ್ಲಿ ವಿಸ್ತಾರವಾದ ನಾಡು ಕಾಣುವುದಿಲ್ಲ; ನಗರಗಳ ಹೊರಗೆ ನಡೆದು ನೋಡಿದಾಗ ನಿಜವಾದ ಹಾಗೂ ನಡೆದಷ್ಟೂ ನಾಡು ಕಾಣುತ್ತದೆ. ನಾವು ನಡೆಯುತ್ತಾ ನೋಡುವುದರ ಜೊತೆಗೆ ನೋಡುತ್ತಾ ಅರಿಯಬೇಕು. ಆ ಮೂಲಕ ನಮ್ಮ ಬದುಕು ಸದಾ ಬೆಳಗುವಂತಾಗುತ್ತದೆ' ಎಂದರು.



ವಿಚಾರ ಸಂಕಿರಣವನ್ನು ಪ್ರೊ.ಕೃಷ್ಣಮೂರ್ತಿ ಹನೂರು ಉದ್ಘಾಟಿಸಿದರು. ಕ್ರಿಸ್ತುಜಯಂತಿ ಕಾಲೇಜಿನ ಹಣಕಾಸು ಅಧಿಕಾರಿ ರೆವರೆಂಡ್ ಫಾದರ್ ಜೈಸ್ ವಿ.ಥಾಮಸ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸರ್ವೇಶ್ ಬಿ.ಎಸ್, ವಿಚಾರ ಸಂಕಿರಣದ ಸಂಚಾಲಕ ಡಾ.ಸಯ್ಯದ್ ಮುಯಿನ್ ಇದ್ದರು

ಜಾನಪದ ಲೋಕವು ದೇಹ ಅಥವಾ ಧರ್ಮ ಪರಾಕ್ರಮವನ್ನು ಎಂದೂ ಮಾನ್ಯ ಮಾಡಲಿಲ್ಲ. ಶಾಸ್ತ್ರೀಯ ಕವಿಗಳೂ ಒಂದೊಂದು ಧರ್ಮದ ಪರವಾಗಿ ಕಾವ್ಯ ಬರೆದರೂ ಅವಕಾಶವಿದ್ದ ಕಡೆಯಲ್ಲಿ ಯುದ್ಧರಹಿತ ಜನಮನಗಳನ್ನು ಕಟ್ಟುವಂತಹ ನುಡಿಗಳನ್ನು ಆಡಿ ಶಾಂತಿ ಹಾಗೂ ಸಾಮರಸ್ಯಕ್ಕಾಗಿ ಆಶಿಸಿದ್ದರು ಎಂದು ತಿಳಿಸಿದರು.

ವಿಚಾರ ಸಂಕಿರಣದ ಭಾಗವಾಗಿ ನಾಡಿನ ಹಲವಾರು ವಿದ್ವಾಂಸರು, ಪ್ರಾಧ್ಯಾಪಕರು ಹಾಗೂ ಸಂಶೋಧಕರು ರಚಿಸಿದ್ದ ಪ್ರಬಂಧಗಳನ್ನು ಒಳಗೊಂಡ 'ಕನ್ನಡ ಅಸ್ಮಿತೆ: ಶಾಂತಿ ಮತ್ತು ಸಾಮರಸ್ಯ', 'ಅರಿವಿನೊಳಗಣ ಬೆರಗು', 'ಕನ್ನಡ ನೋಟ ಶಾಂತಿಯತೋಟ' ಎಂಬ ಮೂರು ಕೃತಿಗಳನ್ನು ಹನೂರು ಬಿಡುಗಡೆ ಮಾಡಿದರು. ಕ್ರೈಸ್ಟ್ ಕಾಲೇಜಿನಲ್ಲಿ ಒಂದು ಕಾಲಕ್ಕೆ ಚಿ.ಶ್ರೀನಿವಾಸರಾಜು ಅವರು ಮಾಡಿದ ಕನ್ನಡ ಸೇವೆಯನ್ನು ಕ್ರಿಸ್ತು ಜಯಂತಿ ಕಾಲೇಜು ಮುಂದುವರಿಸುತ್ತಿರುವುದನ್ನು ಶ್ಲಾಘಿಸಿದರು.

ಸಂಸ್ಕೃತಿ ಚಿಂತಕ ಪ್ರೊ.ರಹಮತ್ ತರೀಕೆರೆ ಮಾತನಾಡಿ, 'ಭಾರತದ ದಾರ್ಶನಿಕ ಪರಂಪರೆಯಲ್ಲಿ ನಿರಂತರವಾಗಿ ಸಹನೆಯ ಬಗ್ಗೆ ಮತ್ತೆ ಮತ್ತೆ ಮಾತನಾಡಿಕೊಂಡೇ ಬರಲಾಗುತ್ತಿದ್ದು, ಶಾಂತಿ ಮತ್ತು ಸಾಮರಸ್ಯವು ಇಂದಿನ ಕಾಲದ ಬಹುದೊಡ್ಡ ಬಾಯಾರಿಕೆ ಹಾಗೂ ಆಪೇಕ್ಷೆ ಆಗಿದೆ. ನಮ್ಮ ದೇಶದಲ್ಲಿ ಇನ್ನೊಬ್ಬರ ಆಹಾರ, ಭಾಷೆ, ಉಡುಗೆ-ತೊಡುಗೆ, ಆಲೋಚನೆಗಳ ಮೇಲೆ ಅಮಾನುಷವಾದ ಆಕ್ರಮಣ ನಡೆಯುತ್ತಿದೆ' ಎಂದು ಅವರು ತಿಳಿಸಿದರು.

ಮಾನವಿಕ ವಿಭಾಗದ ಡೀನ್ ಡಾ.ಗೋಪಕುಮಾರ್ ಎ.ವಿ, ಡಾ.ಎಂ. ಭೈರಪ್ಪ, ಪ್ರೊ.ಚಂದ್ರಶೇಖರ್.ಎನ್, ಡಾ.ರವಿಶಂಕರ್ ಎ.ಕೆ ಮತ್ತಿತರರು ಉಪಸ್ಥಿತರಿದ್ದರು.

'ಮೀಸಲಾತಿ ಪಟ್ಟಿ ಪರಿಷ್ಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಹಾಗೂ ಶೈಕ್ಷಣಿಕ ಜಾತಿವಾರು ಸಮೀಕ್ಷೆ ವರದಿಯನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸ್ವೀಕರಿಸಿ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿ ಪರಿಷ್ಕರಿಸಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಒತ್ತಾಯಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಬಗ್ಗೆ ಒಕ್ಕೂಟವು ಪತ್ರ ಬರೆದಿದೆ.

ಕಳೆದ 20 ವರ್ಷಗಳಿಂದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿ ಪರಿಷ್ಕರಣೆಯಾಗಿಲ್ಲ. ಹಲವು ಬಾರಿ ಹಿಂದುಳಿದ ವರ್ಗಗಳ ಆಯೋಗ ವೈಜ್ಞಾನಿಕ ಅಧ್ಯಯನಗಳನ್ನು ನಡೆಸಿ ಮೀಸಲಾತಿ ಕಲ್ಪಿಸುವ ಬಗ್ಗೆ ಸ್ಪಷ್ಟವಾದ ಶಿಫಾರಸ್ಸುಗಳನ್ನು ಮಾಡಿದೆ. ಆದರೆ, ರಾಜಕೀಯ ತೀರ್ಮಾನಗಳಿಂದಾಗಿ ಬಲಾಢ್ಯರು ಮೀಸಲಾತಿ ಪಡೆದು ಶೋಷಿತರ ಪಾಲನ್ನು ಕಬಳಿಸುತ್ತಿದ್ದಾರೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಅವರು ತಿಳಿಸಿದ್ದಾರೆ.



ವೆಂಕಟರಾಮಯ್ಯ

ಸಾಮಾಜಿಕ ನ್ಯಾಯ ಸೂತ್ರದ ಅಡಿಯಲ್ಲಿ ಮತ್ತು ಅಸಮತೋಲನ ಉಂಟಾಗುವ ಅಪಾಯವನ್ನು ತಪ್ಪಿಸುವ ದೃಷ್ಟಿಯಿಂದ ಈಗಾಗಲೇ ಸಿದ್ಧವಾಗಿರುವ ಎಚ್. ಕಾಂತರಾಜು ಅಧ್ಯಕ್ಷತೆಯ ಆಯೋಗದ ಸಾಮಾಜಿಕ ಹಾಗೂ ಶೈಕ್ಷಣಿಕ ಜಾತಿವಾರು ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ತಕ್ಷಣವೇ ಅಂಗೀಕರಿಸಿ ಶೀಘ್ರ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕಾಂತರಾಜು ವರದಿಗೆ ಆಯೋಗದ ಕಾರ್ಯದರ್ಶಿ ಸಹಿ ಹಾಕಿಲ್ಲ ಎನ್ನುವ ನೆಪವನ್ನು ಸರ್ಕಾರ ಹೇಳುತ್ತಿದೆ. ಸಮಗ್ರವಾಗಿ ಅಧ್ಯಯನ ಮಾಡಿ ಈ ವರದಿ ಸಿದ್ಧಪಡಿಸಿರುವುದರಿಂದ ಯಾವ ಸಮುದಾಯವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರಿದಿದೆ ಎನ್ನುವ ಚಿತ್ರಣ ಸ್ಪಷ್ಟವಾಗುತ್ತದೆ. ಇದರಿಂದ, ಮುಂದುವರಿದ ಸಮುದಾಯಗಳನ್ನು ಇತರ ವರ್ಗಗಳಿಗೆ ಸೇರಿಸುವ ಮೂಲಕ ಅತಿ ಹಿಂದುಳಿದ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಅನುಕೂಲವಾಗುತ್ತದೆ ಎಂದಿದ್ದಾರೆ.

'ಸಿದ್ದರಾಮಯ್ಯಗೆ ಕೋಲಾರ ಸುರಕ್ಷಿತವಲ್ಲ'

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕೋಲಾರ ಸುರಕ್ಷಿತ ಕ್ಷೇತ್ರವಲ್ಲ. ಅಲ್ಲಿ ಸ್ಪರ್ಧಿಸಿದರೆ ಸೋಲು ಕಟ್ಟಿಟ್ಟ ಬುತ್ತಿ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಕೋಲಾರದಲ್ಲಿ ಸಿದ್ದರಾಮಯ್ಯ ಎರಡನೇ ಸ್ಥಾನ ಗಳಿಸುವುದೂ ಕಷ್ಟ. ಎರಡನೇ ಸ್ಥಾನಕ್ಕೆ ಅವರು ವರ್ತೂರು ಪ್ರಕಾಶ್ ಜತೆ ಸ್ಪರ್ಧಿಸಬೇಕಾಗುತ್ತದೆ' ಎಂದರು.

ಕಾರು ಖರೀದಿ ದಿನ ಅಪಘಾತ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಪಶ್ಚಿಮ ಕಾರ್ಡ್ ರಸ್ತೆಯ ಮೋದಿ ಕಣ್ಣಿನ ಆಸ್ಪತ್ರೆ ಸಮೀಪದಲ್ಲಿ ಎಲೆಕ್ಟ್ರಿಕ್ ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಸವಾರ ಬೊಗ್ಗರಂ ನಾಗರಾಜು (61) ಮೃತಪಟ್ಟಿದ್ದಾರೆ.

'ಸೋಮವಾರ ಸಂಜೆ ನಡೆದಿರುವ ಅಪಘಾತ ಸಂಬಂಧ ಮೃತ ನಾಗರಾಜು ಅವರ ಮಗಳು ದೂರು ನೀಡಿದ್ದಾರೆ. ಕಾರು ಚಾಲಕ ಕುಶಾಲ್ ಜೈನ್ (28) ಎಂಬಾತನ ವಿರುದ್ಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರು ಜಪ್ತಿ ಮಾಡಲಾಗಿದೆ' ಎಂದು ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಪರಾಧ ಸುದ್ದಿಗಳು

ಪೂಜೆ ಮಾಡಿಸಿಕೊಂಡು ಹೋಗುತ್ತಿದ್ದಾಗ ಅಪಘಾತ: 'ಸೋಮವಾರವಷ್ಟೇ ಹೊಸದಾಗಿ ಎಲೆಕ್ಟ್ರಿಕ್ ಕಾರು ಖರೀದಿಸಿದ್ದ ಆರೋಪಿ ಕುಶಾಲ್, ಶೋರೂಮ್‌ನಿಂದ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿದ್ದರು. ಅದಾದ ನಂತರ, ಕಾರು ಚಲಾಯಿಸಿಕೊಂಡು ಮೋದಿ ಕಣ್ಣಿನ ಆಸ್ಪತ್ರೆ ಬಳಿಯ ರಸ್ತೆಯಲ್ಲಿ ಹೊರಟಿದ್ದರು' ಎಂದು ಪೊಲೀಸರು ಹೇಳಿದರು. 'ನಾಗರಾಜು ಅವರು ದ್ವಿಚಕ್ರ ವಾಹನದಲ್ಲಿ ರಾಜಾಜಿನಗರ ಕಡೆಯಿಂದ ವಿಜಯನಗರ ಕಡೆಗೆ ಮೋದಿ ಕಣ್ಣಿನ ಆಸ್ಪತ್ರೆ ಬಳಿಯ ರಸ್ತೆ ಮೂಲಕ ತೆರಳುತ್ತಿದ್ದರು. ಇದೇ ಮಾರ್ಗದಲ್ಲಿ ಹೊರಟಿದ್ದ ಕುಶಾಲ್, ನಿರ್ಲಕ್ಷ್ಯದಿಂದ ಅತಿ ವೇಗವಾಗಿ ಕಾರು ಚಲಾಯಿಸಿದ್ದರು. ಅದೇ ಕಾರು, ಬೈಕ್‌ಗೆ ಗುದ್ದಿತ್ತು. ದ್ವಿಚಕ್ರ ವಾಹನ ಸಮೇತ ಬಿದ್ದಿದ್ದ ನಾಗರಾಜು ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು.'

'ಆರೋಪಿ ಕುಶಾಲ್, ಸ್ಥಳೀಯರ ಸಹಾಯದಿಂದ ನಾಗರಾಜು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಯಶವಂತಪುರದ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ತೀವ್ರ ಗಾಯಗೊಂಡಿದ್ದರಿಂದ ನಾಗರಾಜ್ ಸೋಮವಾರ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಅಪಘಾತದ ನಂತರ ಆರೋಪಿಯೇ ಕಾರನ್ನು ಠಾಣೆಗೆ ತಂದು ಒಪ್ಪಿಸಿದ್ದಾರೆ. ಅವರಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಸರಣಿ ಅಪಘಾತ: ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಅಂಜನಾನಗರದಲ್ಲಿ ಸೋಮವಾರ ಸಂಜೆ ಸರಣಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರರಿಬ್ಬರು ಮೃತಪಟ್ಟಿದ್ದಾರೆ.

ಮಾಗಡಿ ನಿವಾಸಿ ರವಿಕುಮಾರ್ ಯಾದವ್ (28) ಹಾಗೂ ಸುಮನಹಳ್ಳಿಯ ವಿಕಾಸ್ (20) ಮೃತರು. ಅಪಘಾತದಲ್ಲಿ ಭವಾನಿ ಸಿಂಗ್ (39) ಎಂಬುವವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಅಪಘಾತಕ್ಕೆ ಕಾರಣ ಎನ್ನಲಾದ ಕ್ಯಾಂಟರ್ ಚಾಲಕ ಸೈಯದ್ ಜಮೀರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತನನ್ನು ಬಂಧಿಸಿ ಕ್ಯಾಂಟರ್ ಜಪ್ತಿ ಮಾಡಲಾಗಿದೆ' ಎಂದು ಬ್ಯಾಡರಹಳ್ಳಿ ಪೊಲೀಸರು ತಿಳಿಸಿದರು.

'ರವಿಕುಮಾರ್ ಹಾಗೂ ವಿಕಾಸ್ ಇಬ್ಬರೂ ಪಲ್ಸರ್ ಬೈಕ್‌ನಲ್ಲಿ ಬ್ಯಾಡರಹಳ್ಳಿ ಕಡೆಯಿಂದ ಸುಂಕದಕಟ್ಟೆ ಕಡೆಗೆ ಹೊರಟಿದ್ದರು. ಅಂಜನಾನಗರ ಬಳಿ ಅವರ ಬೈಕ್ ಮುಂದೆ ಭವಾನಿ ಸಿಂಗ್ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು.

'ಇದೇ ಮಾರ್ಗದಲ್ಲಿ ಚಾಲಕ ಸೈಯದ್ ಜಮೀರ್, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಕ್ಯಾಂಟರ್ ಚಲಾಯಿಸಿಕೊಂಡು ಹೊರಟಿದ್ದರು. ಮುಂದೆ ಹೊರಟಿದ್ದ ಪಲ್ಸರ್ ಬೈಕ್‌ಗೆ ಕ್ಯಾಂಟರ್ ಗುದ್ದಿತ್ತು. ನಂತರ, ಪಲ್ಸರ್ ಬೈಕ್ ಮುಂದಿದ್ದ ಭವಾನಿ ಸಿಂಗ್ ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ಹೇಳಿದರು.

'ಅಪಘಾತದಲ್ಲಿ ಗಾಯಗೊಂಡಿದ್ದ ಮೂವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ರವಿಕುಮಾರ್ ಹಾಗೂ ವಿಕಾಸ್ ಮಾರ್ಗಮಧ್ಯೆಯೇ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಸದ್ಯ ಸೈಯದ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಕ್ಯಾಂಟರ್ ಜಪ್ತಿ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.



ನಗರದ ರಿಚ್ಮಂಡ್ ರಸ್ತೆಯಲ್ಲಿ ನಿರ್ಮಾಣಗೊಂಡ ಫೋರ್ಟಿಸ್ ಆಸ್ಪತ್ರೆಯ ನೂತನ ಘಟಕವನ್ನು ಶಾಸಕ ಎನ್‌.ಎ. ಹ್ಯಾರಿಸ್ ಉದ್ಘಾಟಿಸಿದರು. ಹೃದ್ರೋಗ ತಜ್ಞ ಡಾ. ವಿವೇಕ್ ಜವಳಿ, ಫೋರ್ಟಿಸ್ ಆಸ್ಪತ್ರೆಗಳ ಬೆಂಗಳೂರು ವಿಭಾಗದ ವಹಿವಾಟು ಮುಖ್ಯಸ್ಥ ಅಕ್ಷಯ್ ಓಲೇಟಿ ಹಾಗೂ ನೂತನ ಘಟಕದ ಸೌಲಭ್ಯಗಳ ನಿರ್ದೇಶಕ ರಘುರಾಮ್ ಎಂ.ಡಿ. ಇದ್ದಾರೆ.

ಐಎಂಎ: ರೋಷನ್ ಬೇಗ್ ಆಸ್ತಿ ಜಪ್ತಿ ಕೋರಿಕೆ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ ಮಾನಿಟರಿ ಅಡ್ವೈಸರಿಯ (ಐಎಂಎ) ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ರೋಷನ್ ಬೇಗ್ ಅವರಿಗೆ ಸೇರಿದ ₹ 20 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಲು ಕೋರಿ ಸಕ್ಷಮ ಪ್ರಾಧಿಕಾರ ಸಲ್ಲಿಸಿದ್ದ ಅರ್ಜಿಯನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿದೆ.

ಈ ಸಂಬಂಧ ಸಕ್ಷಮ ಪ್ರಾಧಿಕಾರದ ಅಧಿಕಾರಿಯು 91ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ಗೆ (ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಹೂಡಿಕೆದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆ ಅಡಿ ಸ್ಥಾಪನೆಗೊಂಡಿರುವ ವಿಶೇಷ ನ್ಯಾಯಾಲಯ) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶ ಶ್ರೀಧರ ಗೋಪಾಲಕೃಷ್ಣ ಭಟ್ ವಿಚಾರಣೆ ನಡೆಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಬೇಗ್ ಆಸ್ತಿಯ ಜಪ್ತಿಗೆ ಸರ್ಕಾರ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ರದ್ದುಪಡಿಸಿ, 'ಬೇಗ್ ಷೇರು ಪಾಲುದಾರರಾಗಿ ಅಥವಾ ನಿರ್ದೇಶಕರಾಗಿ ಸಂಸ್ಥೆಯ ವ್ಯವಹಾರಗಳ ಮೇಲೆ ನೇರವಾದ ಅಥವಾ ಪರೋಕ್ಷವಾದ ಯಾವುದೇ ನಿಯಂತ್ರಣ ಹೊಂದಿರಲಿಲ್ಲ. ಐಎಂಎ ಸಮೂಹವು ಅವರ ಸಲಹೆ, ನಿರ್ದೇಶನ ಅಥವಾ ಸೂಚನೆಯಂತೆ ಕಾರ್ಯ ನಿರ್ವಹಿಸಿಲ್ಲ. ಆದ್ದರಿಂದ, ಅವರನ್ನು ಸಂಸ್ಥೆಯ ಪ್ರಚಾರಕರಾಗಿ ಪರಿಗಣಿಸಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಬೇಗ್ ಸಂಸ್ಥೆಯೊಂದಿಗೆ ವ್ಯಾಪಾರದ ಸಂಬಂಧ ಹೊಂದಿದ್ದರು, ಶಿವಾಜಿನಗರದ ಶಾಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಸ್ಥೆಯಿಂದ ಪತ್ರ ಕಳುಹಿಸಿದ್ದರು ಎಂಬುದೇನೊ ನಿಜ. ಐಎಂಎ ಜೊತೆಗೆ ಅವರು ಹೊಂದಿದ್ದ ನಿಕಟ ಸಂಬಂಧವು ಆ ಸಂಸ್ಥೆಯ ಬಗ್ಗೆ ಜನರಲ್ಲಿ ವಿಶ್ವಾಸವನ್ನೂ ಹೆಚ್ಚಿಸಿರಬಹುದು. ಆದರೆ, ಇಷ್ಟು ಮಾತ್ರಕ್ಕೆ ಅವರು ಸಂಸ್ಥೆಯ ಪ್ರಚಾರಕರಾಗಿದ್ದರು ಎಂಬ ತೀರ್ಮಾನಕ್ಕೆ ಬರಲಾಗದು' ಎಂದು ನ್ಯಾಯಾಧೀಶರು ಅರ್ಜಿ ವಜಾಕ್ಕೆ ಕಾರಣ ನೀಡಿದ್ದಾರೆ.

ಐಎಂಎ ಸಮೂಹವು ಹೂಡಿಕೆದಾರರಿಗೆ ಸುಮಾರು ₹ 500 ಕೋಟಿ ವಂಚನೆ ಮಾಡಿದ ಪ್ರಕರಣದಲ್ಲಿ ರೋಷನ್ ಬೇಗ್ ಆರೋಪಿಯಾಗಿದ್ದಾರೆ. ಪ್ರಕರಣ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾಗಿ ಸದ್ಯ ಜಾಮೀನು ಮೇಲೆ ಬಿಡುಗಡೆಯಾಗಿದ್ದಾರೆ.

27 ಕಡೆ ಕಳ್ಳತನ: ಸಿನಿಮಾ ಮೇಕಪ್‌ಮ್ಯಾನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆ ಗಳಲ್ಲಿ ಕಳ್ಳತನ ಮಾಡಿದ್ದ ಆರೋಪಿ ನವಾಜ್ ಷರೀಫ್ (56) ಎಂಬುವರನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನವಾಜ್, ಹಲವು ವರ್ಷಗಳ ಹಿಂದೆ ಸಿನಿಮಾ ಮೇಕಪ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ. ಅದನ್ನು ಬಿಟ್ಟು ಕಳ್ಳತನಕ್ಕೆ ಇಳಿದಿದ್ದ. 27 ಕಡೆ ಕಳ್ಳತನ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಈತನಿಂದ 350 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.



'ರಂಗೋಲಿ ಹಾಕಿರದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸಿ ಆರೋಪಿ ಕೃತ್ಯ ಎಸಗುತ್ತಿದ್ದ. ಕಾಮಾಕ್ಷಿಪಾಳ್ಯ ಪೊಲೀಸರು ಪ್ರಕರಣವೊಂದರಲ್ಲಿ ಆರೋಪಿಯನ್ನು ಕೆಲ ತಿಂಗಳ ಹಿಂದೆಯಷ್ಟೇ ಬಂಧಿಸಿದ್ದರು. ಜೈಲಿಗೆ ಹೋಗಿದ್ದ ಆರೋಪಿ, ಜಾಮೀನು ಮೇಲೆ ಹೊರಬಂದು ಪುನಃ ಕೃತ್ಯ ಎಸಗಲಾರಂಭಿಸಿದ್ದ. ಬೇಗೂರು ಠಾಣೆ ವ್ಯಾಪ್ತಿಯಲ್ಲಿ 7 ಕಡೆ ಕಳ್ಳತನ ಮಾಡಿದ್ದ' ಎಂದರು.

ಶಾಸಕ ತಿಪ್ಪಾರೆಡ್ಡಿ ವಿರುದ್ಧ ಲೋಕಾಯುಕ್ತರಿಗೆ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಆರ್‌.ಮಂಜುನಾಥ್ ಅವರಿಂದ ಲಂಚ ಪಡೆದಿರುವ ಆರೋಪದ ಕುರಿತು ತನಿಖೆ ನಡೆಸುವಂತೆ ಒತ್ತಾಯಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆಪಿಸಿಸಿ) ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರಿಗೆ ಮಂಗಳವಾರ ದೂರು ಸಲ್ಲಿಸಿದೆ.

'ಚಿತ್ರದುರ್ಗ ಶಾಸಕ ತಿಪ್ಪಾರೆಡ್ಡಿ ಅವರಿಗೆ ₹ 90 ಲಕ್ಷ ಲಂಚ ನೀಡಿದ್ದೇನೆ' ಎಂದು ಮಂಜುನಾಥ್ ಆರೋಪಿಸಿರುವ ಆಡಿಯೊ ತುಣುಕನ್ನು ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ್ದರು. ಪತ್ರಿಕಾಗೋಷ್ಠಿಯ ವಿವರಗಳೊಂದಿಗೆ ಲೋಕಾಯುಕ್ತರಿಗೆ ದೂರು ಸಲ್ಲಿಸಿರುವ ಕಾಂಗ್ರೆಸ್ ಮುಖಂಡರಾದ ಎಸ್. ಮನೋಹರ್, ಎ. ಆನಂದ ಮತ್ತು ಪುಟ್ಟರಾಜು, ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಕತ್ತು ಕೊಯ್ದು ವಿದ್ಯಾರ್ಥಿನಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾನುಕುಂಟೆಯ ಶಾನುಭೋಗನಹಳ್ಳಿ ಬಳಿ ವಿದ್ಯಾರ್ಥಿನಿ ರಾಶಿ (19) ಎಂಬುವರನ್ನು ಕತ್ತು ಕೊಯ್ದು ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಮಧುಚಂದ್ರ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಶಾನುಭೋಗನಹಳ್ಳಿ ನಿವಾಸಿ ರಾಶಿ, ಯಲಹಂಕ ಬಳಿಯ ಕಾಲೇಜೊಂದರಲ್ಲಿ ಬಿ.ಎ ವ್ಯಾಸಂಗ ಮಾಡುತ್ತಿದ್ದರು. ಕಾಲೇಜು ಮುಗಿಸಿ ಮಂಗಳವಾರ ಸಂಜೆ ಮನೆಗೆ ಹೊರಟಿದ್ದಾಗ ಅವರನ್ನು ಕೊಲೆ ಮಾಡಲಾಗಿದೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಸಲುಗೆ ಮುಂದುವರಿಸಲು ಪೀಡಿಸಿದ್ದ: 'ರಾಶಿ ಅವರನ್ನು ಆರೋಪಿ ಮಧುಚಂದ್ರ ಪರಿಚಯ ಮಾಡಿಕೊಂಡಿದ್ದ. ಸಲುಗೆ ಸಹ ಬೆಳೆಸಿದ್ದನೆಂದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇತ್ತೀಚೆಗೆ ಬೇರೆ ಯುವತಿಯನ್ನು ಮಧುಚಂದ್ರ ಮದುವೆಯಾಗಿದ್ದ. ಈ ವಿಷಯ ಮುಚ್ಚಿಟ್ಟು ರಾಶಿ ಜೊತೆ ಮಾತನಾಡುತ್ತಿದ್ದ. ಮದುವೆ ವಿಷಯ ಗೊತ್ತಾಗುತ್ತಿದ್ದಂತೆ ರಾಶಿ, ಆರೋಪಿಯಿಂದ ದೂರವಿರಲು ಯತ್ನಿಸಿದ್ದರು. ಇಷ್ಟಕ್ಕೆ ಕೋಪಗೊಂಡ ಆರೋಪಿ, ತನ್ನೊಂದಿಗೆ ಸಲುಗೆ ಮುಂದುವರಿಸುವಂತೆ ಪೀಡಿಸಲಾರಂಭಿಸಿದ್ದ. ಸಲುಗೆ ಮುಂದುವರಿಸಲು ಯುವತಿ ನಿರಾಕರಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಮಂಗಳವಾರ ಸಂಜೆ ಮನೆಯತ್ತ ಹೊರಟಿದ್ದ ರಾಶಿ ಅವರನ್ನು ಅಡ್ಡಗಟ್ಟಿದ್ದ ಆರೋಪಿ, ಚಾಕುವಿನಿಂದ ಕತ್ತು ಕೊಯ್ದು ಪರಾರಿಯಾಗಿದ್ದ. ಸ್ಥಳದಲ್ಲೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಘಟನೆ ನಡೆದು ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಪತ್ತೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿ.ಟೆಕ್ ವಿದ್ಯಾರ್ಥಿನಿ ಕೊಲೆ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಬಿ.ಟೆಕ್ ವಿದ್ಯಾರ್ಥಿನಿ ಲಯಸ್ಮಿತಾ (19) ಎಂಬುವರನ್ನು ಜ. 2ರಂದು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಪ್ರೀತಿ ವಿಚಾರವಾಗಿ ಕೃತ್ಯ ಎಸಗಿದ್ದ ಪವನ್ ಕಲ್ಯಾಣ್ (23) ಎಂಬುವರನ್ನು ಪೊಲೀಸರು ಬಂಧಿಸಿದ್ದರು.

ಪೇಂಟರ್ ಕೊಲೆ: ಆರೋಪಿ ವಶಕ್ಕೆ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಜಗದೀಶ್ (34) ಎಂಬುವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಹೇಮಂತ್ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಮೈಸೂರು ರಸ್ತೆಯ ಕಸ್ತೂರ್‌ಬಾ ನಗರದ ನಿವಾಸಿ ಜಗದೀಶ್, ಪೇಂಟರ್ ಆಗಿದ್ದರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಗದೀಶ್ ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಜ. 14ರಂದು ಕೆಲಸಕ್ಕೆ ಹೋಗದೇ ಮನೆಯಲ್ಲಿದ್ದ ಜಗದೀಶ್, ಪೇಟಿಂಗ್ ವಸ್ತುಗಳನ್ನು ತರಲೆಂದು ಮಾರುಕಟ್ಟೆಗೆ ತೆರಳಿದ್ದರು. ಇದೇ ವೇಳೆ ಅವರು ಮದ್ಯ ಕುಡಿದಿದ್ದರೆಂದು ಗೊತ್ತಾಗಿದೆ.' 'ಟಿಂಬರ್ ಯಾರ್ಡ್ ಬಡಾವಣೆ ರಸ್ತೆಯಲ್ಲಿ ಜಗದೀಶ್ ನಿಂತುಕೊಂಡಿದ್ದರು. ಇದೇ ವೇಳೆ ಆರೋಪಿ ಹೇಮಂತ್ ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದರು. ಪಾನಮತ್ತ ಜಗದೀಶ್, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅದೇ ವಿಚಾರಕ್ಕೆ ಗಲಾಟೆ ಶುರುವಾಗಿತ್ತು' ಎಂದು ತಿಳಿಸಿವೆ.

'ಆರೋಪಿ ಹೇಮಂತ್, ಜಗದೀಶ್ ಅವರ ಕಪಾಳಕ್ಕೆ ಹೊಡೆದಿದ್ದರು. ಸ್ಥಳದಲ್ಲೇ ಕುಸಿದು ಬಿದ್ದಿದ್ದ ಜಗದೀಶ್ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಸ್ಥಳೀಯರು ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆ ನೀಡಿದ್ದ ವೈದ್ಯರು, ಜಗದೀಶ್ ಬದುಕುವುದಿಲ್ಲವೆಂದು ತಿಳಿಸಿದ್ದರು. ಹೀಗಾಗಿ, ಸಂಬಂಧಿಕರು ಮನೆಗೆ ಕರೆತಂದಿದ್ದರು. ಜ. 16ರಂದು ಅವರು ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

₹ 1.20 ಕೋಟಿ ವಂಚನೆ: ಎಂ.ಡಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಉಪಗುತ್ತಿಗೆ ಮೂಲಕ ಕಾಮಗಾರಿ ಮಾಡಿಸಿ ಹಣ ನೀಡದೇ ವಂಚಿಸಿರುವ ಆರೋಪದಡಿ ಐಶ್ವರ್ಯ ಗಿರಿ ಕನ್‌ಸ್ಟ್ರಕ್ಷನ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಜಿ. ಜಯರಾಮಯ್ಯ ವಿರುದ್ಧ ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿವಿಲ್ ಗುತ್ತಿಗೆದಾರ ವಿ.ಎಂ. ಮಲ್ಲಿಕಾರ್ಜುನ್ ಎಂಬುವವರು ದೂರು ನೀಡಿದ್ದಾರೆ. ಅದರನ್ವಯ ಜಯರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಆರೋಪಿ ಜಯರಾಮಯ್ಯ, ಕೊಳಚೆ ನಿರ್ಮೂಲನಾ ಮಂಡಳಿಗೆ ಸಂಬಂಧಪಟ್ಟ ಕಾಮಗಾರಿಗಳ ಟೆಂಡರ್ ಪಡೆದಿದ್ದ. ಅದೇ ಕಾಮಗಾರಿಯನ್ನು ಉಪಗುತ್ತಿಗೆ ಮೂಲಕ ಮಲ್ಲಿಕಾರ್ಜುನ್ ಅವರಿಗೆ ನೀಡಿದ್ದ. 2015ರಿಂದ 2017ರವರೆಗೆ ಮಲ್ಲಿಕಾರ್ಜುನ್ ಕೆಲಸ ಮಾಡಿಸಿದ್ದರು. ಇದಕ್ಕಾಗಿ ಸ್ವಂತ ಹಣ ವ್ಯಯಿಸಿದ್ದರು' ಎಂದು ತಿಳಿಸಿದರು. 'ಕಾಮಗಾರಿ ಮುಗಿದ ಬಳಿಕ ಆರೋಪಿ ಯಾವುದೇ ಹಣ ನೀಡಿರಲಿಲ್ಲ. ₹ 1.20 ಕೋಟಿ ಬಾಕಿ ಉಳಿಸಿಕೊಂಡಿದ್ದ. ಇದನ್ನು ನೀಡುವಂತೆ ಮಲ್ಲಿಕಾರ್ಜುನ್ ಒತ್ತಾಯಿಸಿದ್ದರು. ಅಷ್ಟಕ್ಕೆ ಆರೋಪಿ, ಜೀವ ಬೆದರಿಕೆಯೊಡ್ಡಿದ್ದರು' ಎಂದು ಹೇಳಿದರು.

ಹಲವರಿಗೆ ವಂಚನೆ: 'ಆರೋಪಿ ಜಯರಾಮಯ್ಯ ವಿರುದ್ಧ ಯಶವಂತಪುರ ಠಾಣೆಯಲ್ಲೂ ಪ್ರಕರಣ ದಾಖಲಾಗಿದೆ. ಆರೋಪಿ ಹಲವರಿಗೆ ವಂಚನೆ ಮಾಡಿರುವ ಮಾಹಿತಿಯಿದೆ' ಎಂದು ಪೊಲೀಸರು ತಿಳಿಸಿದರು.

ಬೇಕರಿ ಮಾಲೀಕನ ಮೇಲೆ ಹಲ್ಲೆ: ನಾಲ್ವರ ಬಂಧನ

ಬೆಂಗಳೂರು: ಸಿಗರೇಟ್ ವಿಚಾರವಾಗಿ ಜೆ.ಪಿ.ನಗರದ 24ನೇ ಮುಖ್ಯರಸ್ತೆಯ ಬೇಕರಿ ಮಾಲೀಕ ಮಂಜುನಾಥ್ ಶೆಟ್ಟಿ ಮೇಲೆ ಹಲ್ಲೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಪುಟ್ಟೇನಹಳ್ಳಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಜೆ.ಪಿ.ನಗರ 2ನೇ ಹಂತದ ಶಾರ್ಲೇಶ್‌ಕುಮಾರ್ (32), ನಿರಂಜನ್ (30), ಸಂತೋಷ್ (38) ಹಾಗೂ ಆರ್. ವಿಷ್ಣು (28) ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂದರ್ಶನದ ಸುತ್ತ ಸಂಶಯದ ಹುತ್ತ

ಒಂದನೇ ಪುಟದಿಂದ...

ಹೀಗೆ ಒಟ್ಟು 667 ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆಯಲ್ಲಿ ಗಳಿಸಿದ ಸರಾಸರಿ ಅಂಕ 39.66. ಆದರೆ, ಅರ್ಧಕ್ಕಿಂತಲೂ ಹೆಚ್ಚು (1,125) ಅಭ್ಯರ್ಥಿಗಳಿಗೆ 50ರಲ್ಲಿ 20ರಿಂದ 26ರವರೆಗೆ ಅಂಕ ನೀಡಲಾಗಿದೆ. ಅದರಲ್ಲೂ, 352 ಅಭ್ಯರ್ಥಿಗಳಿಗೆ 20 ಅಂಕಗಳನ್ನಷ್ಟೇ ನೀಡಲಾಗಿದೆ. ಅರ್ಹರ ತಾತ್ಕಾಲಿಕ ಪಟ್ಟಿಯಲ್ಲಿ ಮೊದಲ ಹತ್ತು ಸ್ಥಾನ ಪಡೆದವರು 400 ಅಂಕಗಳ ಲಿಖಿತ ಪರೀಕ್ಷೆಯಲ್ಲಿ 250 ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ವ್ಯಕ್ತಿತ್ವ ಪರೀಕ್ಷೆಯಲ್ಲಿ ಅವರಿಗೆ ಸಿಕ್ಕಿರುವ ಅಂಕ ಸರಾಸರಿ 23.8 ಮಾತ್ರ!

'ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿ ಗಳಿಸಿದ ಅಂಕ, ಸಂದರ್ಶನ ಮಂಡಳಿಯ ನಾಲ್ವರು ಸದಸ್ಯರು ನೀಡಿದ ಅಂಕಗಳ ಸರಾಸರಿ ಆಗಬೇಕು. ಹೀಗಿದ್ದರೂ ಒಟ್ಟು ಅಭ್ಯರ್ಥಿಗಳಲ್ಲಿ ಶೇ 25 ರಷ್ಟು ಮಂದಿಗೆ ನಾಲ್ವರೂ ಒಂದೇ ಸಮನಾದ, ಅದೂ 40 ಅಂಕಗಳನ್ನು ನೀಡಿರುವುದು ಹೇಗೆ? ಅವರಲ್ಲಿಯೂ ಈ 497 ಅಭ್ಯರ್ಥಿಗಳೂ ಅತ್ಯಂತ ಪ್ರತಿಭಾನ್ವಿತರು ಎಂದು ಅನಿಸಿದ್ದಲ್ಲಿ, ಕೇವಲದಾಗಿದೂ 40 ಕ್ಕಿಂತ ಹೆಚ್ಚು ಅಂಕಗಳನ್ನು ನೀಡಿ, ಪರಾ ಹೇಗೆ ಬೇಕಾಯಿತು' ಎನ್ನುವುದು ಹುದ್ದೆವಂಚಿತರ ಪ್ರಶ್ನೆ.

ಪಿಎಫ್‌ಐ ಹೆಸರಲ್ಲಿ ಜೀವ ಬೆದರಿಕೆ: ಬಂಧನ

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ಸಮೀಪದ ಕೆಂಚನಾಲ ಗ್ರಾಮದ ಯುವಕನೊಬ್ಬನಿಗೆ ನಿಷೇಧಿತ ಸಂಘಟನೆ ಪಿಎಫ್‌ಐ ಹೆಸರಲ್ಲಿ ಇನ್‌ಸ್ಟಾಗ್ರಾಂನಲ್ಲಿ ಜೀವ ಬೆದರಿಕೆ ಹಾಕಿದ್ದ ಆರೋಪಿಯನ್ನು ರಿಪ್ಪನ್‌ಪೇಟೆ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಆನಾಪುರ ಗ್ರಾಮದ ಜಾವೀದ್ ಅಹಮದ್ ಎಂಬಾತ ಬಂಧಿತ.

ಕೆಂಚನಾಲ ಗ್ರಾಮದ ಯುವಕ ಸುಮಂತ್ ಅವರಿಗೆ ಜೀವ ಬೆದರಿಕೆ ಬಂದಿದ್ದು, ಠಾಣೆಗೆ ದೂರು ನೀಡಲಾಗಿತ್ತು. ಪೊಲೀಸರು ಆರೋಪಿಯನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದರು.

ಬೆದರಿಕೆ ಕರೆ ಪ್ರಕರಣ: 7 ಮಂದಿಗೆ ನೋಟಿಸ್

ಬೆಳಗಾವಿ: ಇಲ್ಲಿನ ಕೇಂದ್ರ ಕಾರಾಗೃಹದ ಕೈದಿ ಜಯೇಶ್ ಪೂಜಾರಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ನಾಗ್ಪುರದ ಕಚೇರಿಗೆ ಬೆದರಿಕೆ ಕರೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಾಗೃಹದ ಮುಖ್ಯಅಧೀಕ್ಷಕ ಕೃಷ್ಣಕುಮಾರ್ ಅವರು ಏಳು ಜನರಿಗೆ ನೋಟಿಸ್ ನೀಡಿದ್ದಾರೆ.

ಕಾರಾಗೃಹದ ನಾಲ್ವರು ಜೈಲರ್, ಇಬ್ಬರು ವಾರ್ಡರ್ ಹಾಗೂ ಒಬ್ಬ ಕಾನ್‌ಸ್ಟೆಬಲ್‌ಗೆ ನೋಟಿಸ್ ನೀಡಲಾಗಿದೆ. ಕೈದಿಯ ಕೈಗೆ ಮೊಬೈಲ್ ಫೋನ್ ಸಿಕ್ಕಿದ್ದು ಹೇಗೆ, ಈಗ ಅದು ಎಲ್ಲಿದೆ ಎಂಬ ಬಗ್ಗೆ 3 ದಿನಗಳಲ್ಲಿ ಉತ್ತರಿಸಬೇಕು. ಇಲ್ಲದಿದ್ದರೆ ಶಿಸ್ತುಕ್ರಮ ವಹಿಸಲಾಗುವುದು ಎಂದೂ ತಿಳಿಸಿದ್ದಾರೆ.

ಐವರ ಹೇಳಿಕೆ ದಾಖಲಿಸಲಿರುವ ಪೊಲೀಸರು (ನಾಗ್ಪುರ ವರದಿ): 'ನಿತಿನ್ ಗಡ್ಕರಿ ಕಚೇರಿಗೆ ಬೆದರಿಕೆ ಕರೆ ಮಾಡಿದ್ದ ಆರೋಪಿಯು ಈ ಕೃತ್ಯದಲ್ಲಿ ತನ್ನ ಪಾತ್ರವಿಲ್ಲ ಎಂದು ಹೇಳಿದ್ದಾನೆ. ಹೀಗಾಗಿ ಪೊಲೀಸರು ಆತನೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದ ಐವರು ವ್ಯಕ್ತಿಗಳ ಹೇಳಿಕೆಯನ್ನು ದಾಖಲು ಮಾಡಲಿದ್ದಾರೆ' ಎಂದು ನಾಗ್ಪುರ ಪೊಲೀಸ್ ಕಮಿಷನರ್ ಮಂಗಳವಾರ ಮಾಹಿತಿ ನೀಡಿದ್ದಾರೆ.

ಪಕ್ಷಾಂತರಿಗಳಿಗೆ ಬುದ್ಧಿ ಕಲಿಸಬೇಕು– ಬಿ.ಕೆ.ಹರಿಪ್ರಸಾದ್ • ಸಚಿವರಿಬ್ಬರ ಆಕ್ರೋಶ, ತಿರುಗೇಟು

‘ಮಾರಿಕೊಂಡ ಶಾಸಕರಿಗೆ ಏನೆನ್ನಬೇಕು?’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಹೊಟ್ಟೆಪಾಡಿಗೆ ಮೈಮಾರಿಕೊಂಡ ಮಹಿಳೆಗೆ ವೇಶ್ಯೆ ಎಂದು ಕರೆಯುತ್ತೇವೆ. ತಮ್ಮನ್ನೇ ಮಾರಾಟ ಮಾಡಿಕೊಂಡಿದ್ದ ಶಾಸಕರಿಗೆ ಏನೆಂದು ಹೇಳುತ್ತೀರಿ?’ ಎಂದು ವಿಧಾನ-ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ಈ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ. ‘ಹರಿಪ್ರಸಾದ್ ಅವರನ್ನು ಪಿಂಪ್ ಎನ್ನಬಹುದೇ’ ಎಂದು ಬಿ.ಸಿ.ಪಾಟೀಲ ಹಿರೇಕೆರೂರಿನಲ್ಲಿ ಪ್ರಶ್ನಿಸಿದರೆ, ಕಾಂಗ್ರೆಸ್‌ನವರಿಗೂ ಸ್ಯಾಂಟ್ರೊ ರವಿಗೂ ವ್ಯತ್ಯಾಸವಿಲ್ಲ’ ಎಂದು ಮುನಿರತ್ನ ಕೋಲಾರದಲ್ಲಿ ತಿರುಗೇಟು ನೀಡಿದ್ದಾರೆ.

ಕೆಪಿಸಿಸಿ ಹೊಸಪೇಟೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ‘ಪ್ರಜಾಧ್ವನಿ’ ಯಾತ್ರೆಯಲ್ಲಿ ಮಾತನಾಡಿದ ಹರಿಪ್ರಸಾದ್ ಅವರು, ಈ ಹಿಂದೆ ರಾಜ್ಯದಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾದಾಗ ಸಮ್ಮಿಶ್ರ ಸರ್ಕಾರ ರಚಿಸಲಾಗಿತ್ತು. ಆಗ ಕೆಲ ಶಾಸಕರು ತಮ್ಮನ್ನು ಮಾರಿಕೊಂಡರು. ಅಂಥ ಶಾಸಕರಿಗೆ ಏನೆಂದು ಕರೆಯುತ್ತೀರಿ? ಎಂದು ಕೇಳಿದರು.

‘ಸ್ಥಳೀಯ ಶಾಸಕರಿಗೂ ಬುದ್ಧಿ ಕಲಿಸಬೇಕಿದೆ. ತಮ್ಮ ಸ್ವಾಭಿಮಾನವನ್ನೇ ಮಾರಾಟ ಮಾಡಿರುವ ಶಾಸಕನಿಗೆ ಬರುವ ಚುನಾವಣೆಯಲ್ಲಿ ಬುದ್ಧಿ ಕಲಿಸಬೇಕು’ ಎಂದು ಸಚಿವ ಆನಂದ್ ಸಿಂಗ್ ಅವರ ಹೆಸರು ಪ್ರಸ್ತಾಪಿಸದೇ ಅವರು ಹೇಳಿದರು.



ಕೆಪಿಸಿಸಿಯಿಂದ ಹೊಸಪೇಟೆಯಲ್ಲಿ ಮಂಗಳವಾರ ಆಯೋಜಿಸಿದ್ದ ‘ಪ್ರಜಾ ಧ್ವನಿ’ ಯಾತ್ರೆ ಸಮಾರಂಭವನ್ನು ಪಕ್ಷದ ಅಧ್ಯಕ್ಷ ಡಿ.ಕೆ. ಶಿವಕುಮಾರ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸಸಿಗೆ ನೀರೆರೆದು ಉದ್ಘಾಟಿಸಿದರು

‘ಕಾಂಗ್ರೆಸ್ಸಿಗರಿಗೂ ಸ್ಯಾಂಟ್ರೊ ರವಿಗೂ ವ್ಯತ್ಯಾಸವಿಲ್ಲ’



ಮುನಿರತ್ನ

ಕೋಲಾರ: ‘ವೇಶ್ಯೆಯರು ನಾವಲ್ಲ. ಅಂದು ಶಾಸಕರಾಗಿದ್ದ ನಮ್ಮ ಅಭಿಪ್ರಾಯ ಕೇಳದೆ ಸಮ್ಮಿಶ್ರ ಸರ್ಕಾರ ರಚಿಸಲು ಎಚ್.ಡಿ.ಕುಮಾರಸ್ವಾಮಿ ಮುಂದೆ ಕರೆದುಕೊಂಡು ಹೋಗಿ ನಿಲ್ಲಿಸಿದವರಿಗೆ ಈ ಮಾತು ಅನ್ವಯಿಸಲಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ತಿರುಗೇಟು ನೀಡಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘17 ಜನರನ್ನು ವೇಶ್ಯೆಯರಿಗೆ ಹೋಲಿಸಿರುವ ಬಿ.ಕೆ.ಹರಿಪ್ರಸಾದ್ ಅವರಿಗೆ ರಾಜಕೀಯದ ಚಿತ್ರಣ ಗೊತ್ತಿಲ್ಲ.ಗೊತ್ತಿದ್ದರೆ ಈ ಪದ ಬಳಸುತ್ತಿರಲಿಲ್ಲ. ಕಾಂಗ್ರೆಸ್ಸಿಗರಿಗೂ ಸ್ಯಾಂಟ್ರೊ ರವಿಗೂ ಯಾವುದೇ ವ್ಯತ್ಯಾಸವೇ ಇಲ್ಲ’ ಎಂದರು.

‘ಆಗ ಕಾಂಗ್ರೆಸ್‌ನಿಂದ ಗೆದ್ದಿದ್ದ ನಾವು ವಿರೋಧಪಕ್ಷದಲ್ಲಿ ಕೂರಲು ಸಿದ್ಧವಾಗಿದ್ದೆವು. ಆದರೆ, ನಮ್ಮನ್ನು ಕರೆದುಕೊಂಡು ಹೋಗಿ ಕುಮಾರಸ್ವಾಮಿ ಎದುರು ನಿಲ್ಲಿಸಿದಾಗ ನಾವು ಏನಾಗಿದ್ದೆವು? ಸಮ್ಮಿಶ್ರ ಸರ್ಕಾರ ರಚಿಸಿ ಎಂದು ಶಾಸಕರಾದ ನಾವು ಕೇಳಿದ್ದೆವಾ’ ಎಂದು ಪ್ರಶ್ನಿಸಿದರು.

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಹರಿಪ್ರಸಾದ್‌ರನ್ನು ಪಿಂಪ್ ಎನ್ನಬಹುದೇ? –ಬಿ.ಸಿ.ಪಾಟೀಲ

ಪ್ರಜಾವಾಣಿ ವಾರ್ತೆ



ಹಿರೇಕೆರೂರು (ಹಾವೇರಿ ಜಿಲ್ಲೆ): ‘ಹರಿಪ್ರಸಾದ್ ಯಾವ ಚುನಾವಣೆ ಗೆದ್ದು ಬಂದಿದ್ದಾರೆ? ಹಿಂಬಾಗಿಲಿನಿಂದ ಬಂದು ಎಂ.ಎಲ್.ಸಿ ಆಗಿದ್ದಾರೆ. ಹಾಗಾದರೆ, ಹಿಂಬಾಗಿಲಿನಿಂದ ಬಂದ ಇವರನ್ನು ‘ಪಿಂಪ್’ ಎಂದು ಕರೆಯಬಹುದಾ’ ಎಂದು ಸಚಿವ ಬಿ.ಸಿ.ಪಾಟೀಲ ಪ್ರಶ್ನಿಸಿದ್ದಾರೆ.

‘ವೇಶ್ಯೆಯರ ರೀತಿ ಶಾಸಕ ಸ್ಥಾನ ಮಾರಿಕೊಂಡು 17 ಮಂದಿ ಬಿಜೆಪಿಗೆ ಹೋದರು’ ಎಂಬ ಬಿ.ಕೆ.ಹರಿಪ್ರಸಾದ್ ಹೇಳಿಕೆಗೆ ಅವರು ಮಂಗಳವಾರ ಇಲ್ಲಿ ಹೀಗೆ ತಿರುಗೇಟು ಕೊಟ್ಟಿದ್ದಾರೆ.

‘ಆದರೆ ನಾವು ಹಾಗೆ ಕರೆಯಲು ಆಗಲ್ಲ. ಇದು ಅವರ ಸಂಸ್ಕೃತಿ ತೋರಿಸುತ್ತದೆ. ಹಾಗೆ ಮಾತನಾಡಿದರೆ ಜನ ಬೆನ್ನತ್ತಿ ಹೊಡೆಯುತ್ತಾರೆ. ಕಾಂಗ್ರೆಸ್‌ನವರು ಮಾಡಿದ ದ್ರೋಹದಿಂದ ನಾವು ರಾಜೀನಾಮೆ ಕೊಟ್ಟು ಬಂದೆವು. ಮತ್ತೆ ಜನಾದೇಶ ಪಡೆದೇ ಶಾಸಕರಾಗಿದ್ದೇವೆ. ನಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ’ ಎಂದು ಅವರು ಸಮರ್ಥಿಸಿಕೊಂಡರು.

‘ಇಷ್ಟು ವರ್ಷ ಕಾಂಗ್ರೆಸ್‌ನವರು ರೋಗಗ್ರಸ್ತ ಸರ್ಕಾರ ಮಾಡಿದರು. ಬಿಜೆಪಿ ಸರ್ಕಾರ ಅದನ್ನು ತೊಳೆಯುವ ಕೆಲಸ ಮಾಡಿದೆ. ಮತ್ತೆ ಕಾಂಗ್ರೆಸ್ ಸೇರುವ ಪ್ರಮೇಯ ಯಾರಿಗೂ ಇಲ್ಲ’ ಎಂದರು.

‘ಬಿ ರಿಪೋರ್ಟ್‌ನ ಎಲ್ಲ ಪ್ರಕರಣಗಳ ಮರುತನಿಖೆ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಬಿಜೆಪಿ ಸರ್ಕಾರ ಬಿ ರಿಪೋರ್ಟ್ ಹಾಕಿರುವ ಎಲ್ಲ ಪ್ರಕರಣಗಳ ಮರು ತನಿಖೆ ನಡೆಸಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ ಇಲ್ಲಿ ಹೇಳಿದರು.

ಕಾಂಗ್ರೆಸ್ ಪಕ್ಷ ಇಲ್ಲಿ ಏರ್ಪಡಿಸಿದ್ದ ‘ಪ್ರಜಾ ಧ್ವನಿ’ ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು ಅವರು, ‘ರಾಜ್ಯದ ಬಿಜೆಪಿ ಸರ್ಕಾರ ಪ್ರತಿಯೊಂದು ಪ್ರಕರಣಕ್ಕೂ ‘ಬಿ’ ರಿಪೋರ್ಟ್ ಹಾಕುತ್ತಿದೆ. ಇದು ‘ಬಿ’ ರಿಪೋರ್ಟ್ ಸರ್ಕಾರ’ ಎಂದು ವಾಗ್ದಾಳಿ ನಡೆಸಿದರು.

‘ಗುತ್ತಿಗೆದಾರರ ಸಾವು, ನೇಮಕಾತಿ ಸೇರಿದಂತೆ ಇತರೆ ಅಕ್ರಮಗಳನ್ನು ರಾಜ್ಯಪಾಲರ ಅಧಿಕಾರ ದುರ್ಬಳಕೆ ಮಾಡಿಕೊಂಡು ‘ಬಿ’ ರಿಪೋರ್ಟ್ ಹಾಕಿದೆ. ಜನ ಸಾಕಷ್ಟು ನೋವು ಅನುಭವಿಸುತ್ತಿದ್ದಾರೆ. ಆ ನೋವಿಗೆ ಕಾಂಗ್ರೆಸ್ ಪಕ್ಷ ಸ್ಪಂದಿಸಲಿದೆ’ ಎಂದು ಹೇಳಿದರು.

‘ಪಿಎಸ್‌ಐ, ಎಂಜಿನಿಯರ್, ಪ್ರಾಧ್ಯಾಪಕ, ಶಿಕ್ಷಕ ಸೇರಿ ಯಾವುದೇ ಹುದ್ದೆಗೆ ಅರ್ಜಿ ಹಾಕಿದರು ಲಂಚ ಪಡೆಯಲಾಗುತ್ತಿದೆ. ಲಂಚ ಪಡೆದು ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ. ದುಡ್ಡು ಪಡೆದವರು, ಕೊಟ್ಟವರು ಜೈಲಿನಲ್ಲಿದ್ದಾರೆ. ಆದರೆ, ಅದಕ್ಕಾಗಿ ಬ್ರೋಕರ್ ಕೆಲಸ ಮಾಡಿದ ಮಂತ್ರಿಗಳು ಹೊರಗಿದ್ದಾರೆ. ಅವರ ಎಲ್ಲ ಟೇಪ್, ವಿಡಿಯೊ ಹೊರಗೆ ಬಂದಿವೆ’ ಎಂದರು.

‘ಜನರಿಂದ ಬಿಜೆಪಿಗೆ ಪಾಠ’

ಹುಬ್ಬಳ್ಳಿ: ‘ಬಿಜೆಪಿ ಸರ್ಕಾರದ ಭ್ರಷ್ಟ ಆಡಳಿತಕ್ಕೆ ಜನರು ಬೇಸತ್ತಿದ್ದಾರೆ. ಅವರನ್ನು ಮನೆಗೆ ಕಳುಹಿಸಲು ಸ್ವಯಂ-ಪ್ರೇರಿತರಾಗಿ ಸಿದ್ಧತೆ ನಡೆಸಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶಾಸಕ ತಿಪ್ಪಾರೆಡ್ಡಿ ಅವರ ಆಡಿಯೊ ಕುರಿತು ಮಾಧ್ಯಮದವರ ಪ್ರಶ್ನೆಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ನಾಯಕರ ಸಂಸ್ಕೃತಿ, ನಡವಳಿಕೆ ಏನೆಂಬುದು ಇಡೀ ರಾಜ್ಯದ ಜನತೆಗೆ ತಿಳಿದಿದೆ ಎಂದರು.

‘40 ಪರ್ಸೆಂಟ್ ಕಮಿಷನ್ ವಿಷಯ ಕುರಿತು ಅಲ್ಲಿಯ ನಾಯಕರೇ ಪರಸ್ಪರ ಆರೋಪ ಮಾಡುತ್ತ ಕೆಸರೆರಚಾಟ ಮಾಡುತ್ತಿದ್ದಾರೆ. ನಾವು ಚರ್ಚೆ ಮಾಡಿ ಪ್ರಯೋಜನವಿಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜನರೇ ತಕ್ಕ ಪಾಠ ಕಲಿಸಲಿದ್ದಾರೆ’ ಎಂದು ಹೇಳಿದರು.

‘ಫೆಬ್ರುವರಿ 2ರಿಂದ 15 ದಿನ ರಾಯಚೂರು, ವಿಜಯಪುರ, ಕೊಪ್ಪಳ, ಬಳ್ಳಾರಿ ಭಾಗದಲ್ಲಿ ಪಂಚರತ್ನ ಯಾತ್ರೆ ನಡೆಯಲಿದೆ. ನಾಲ್ಕನೇ ಹಂತದಲ್ಲಿ ಕಿತ್ತೂರು ಕರ್ನಾಟಕ ಭಾಗದಲ್ಲಿ ನಡೆಯಲಿದೆ’ ಎಂದು ತಿಳಿಸಿದರು.

1‘ಎ’ ಪ್ರವರ್ಗ ರಚಿಸಲು ಸವಿತಾ ಸಮಾಜ ಆಗ್ರಹ

ಬೆಂಗಳೂರು: ‘ಸವಿತಾ ಸಮಾಜವನ್ನು 2ಎ ಪ್ರವರ್ಗದಿಂದ ಪ್ರತ್ಯೇಕಗೊಳಿಸಿ 1‘ಎ’ ಪ್ರವರ್ಗ ರಚಿಸಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು’ ಎಂದು ಸವಿತಾ ಪೀಠದ ಸವಿತಾನಂದ ಸ್ವಾಮೀಜಿ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಾಮಾಜಿಕವಾಗಿ ಶೋಷಣೆಗೊಳಪಟ್ಟಿರುವ ಸವಿತಾ ಸಮುದಾಯ ಬಹುಸಂಖ್ಯಾತರಿರುವ 2ಎ ಪ್ರವರ್ಗದಲ್ಲಿದ್ದು, ಮೀಸಲಾತಿ ಸೇರಿ ಇತರೆ ಸೌಲಭ್ಯಗಳಿಂದ ವಂಚಿತವಾಗಿದೆ. ಸಮುದಾಯ ಇದನ್ನು ಪ್ರತಿಭಟಿಸಿಲ್ಲ. ಇದರ ಪರಿಣಾಮ ಬಲಿಷ್ಠ ಜಾತಿಗಳು ಇಂದು ನಮ್ಮ ಅನ್ನದ ತಟ್ಟೆಗೆ ಕೈ ಹಾಕಲು ಮುಂದಾಗಿವೆ’ ಎಂದು ಹೇಳಿದರು.

ಆಡಿಯೊಗಿಂತ ಸಾಕ್ಷಿ ಬೇಕಾ: ಸಿದ್ದರಾಮಯ್ಯ ಪ್ರಶ್ನೆ

ಹೊಸಪೇಟೆ (ವಿಜಯನಗರ): ‘ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಲಂಚ ಪಡೆದಿದ್ದಾರೆ ಎಂದು ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷರು ಆಡಿಯೊ ಬಿಡುಗಡೆ ಮಾಡಿದ್ದಾರೆ. ಆದರೆ, ಮುಖ್ಯಮಂತ್ರಿ ‘ಡಾಕ್ಯುಮೆಂಟ್ ಕೊಡಿ, ತನಿಖೆ ಮಾಡಿಸುತ್ತೇನೆ’ ಎಂದಿದ್ದಾರೆ. ಅದಕ್ಕಿಂತ ಸಾಕ್ಷಿ ಬೇಕಾ?’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮಂಗಳವಾರ ಇಲ್ಲಿ ಹಮ್ಮಿಕೊಂಡಿದ್ದ ‘ಪ್ರಜಾ ಧ್ವನಿ’ ಯಾತ್ರೆಯಲ್ಲಿ ಅವರು, ‘ನಿಮ್ಮ ಅಪ್ಪ ಎಸ್.ಆರ್. ಬೊಮ್ಮಾಯಿ ಅವರು ವಕೀಲರಾಗಿದ್ದರು. ನೀವು ವಕೀಲ ಅಲ್ಲ, ಬಿಇ ಗ್ರ್ಯಾಜುಯೇಟ್. ಎವಿಡೆನ್ಸ್ ಏನು ಅಂತ ಗೊತ್ತಾಗಲ್ಲ. ಏಕೆಂದರೆ ಎವಿಡೆನ್ಸ್ ಆ್ಯಕ್ಟ್ ಓದಿಲ್ಲ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಟೀಕಿಸಿದರು.

‘ವಿಧಾನಸೌಧದ ಗೋಡೆಗಳು ಲಂಚ, ಲಂಚ ಎಂದು ಪಿಸುಗುಡುತ್ತಿವೆ. 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಹಿಂದೆ ಯಾರೂ ಹೇಳಿರಲಿಲ್ಲ. ಮೊದಲ ಬಾರಿಗೆ ಬೊಮ್ಮಾಯಿ ಅವರಿಗೆ ಈ ಕಳಂಕ ಅಂಟಿಕೊಂಡಿದೆ. ಗುತ್ತಿಗೆದಾರರಾದ ಸಂತೋಷ ಪಾಟೀಲ, ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಿವಕುಮಾರ ಎಂಬುವರು ದಯಾ ಮರಣ ಕೋರಿ ಪತ್ರ ಬರೆದಿದ್ದರು. ಈಗ ಚಿತ್ರದುರ್ಗದ ಶಾಸಕರ ಲಂಚದ ಆರೋಪ ಬಂದಿದೆ’ ಎಂದು ಹೇಳಿದರು

ಒಂದು ದೇಶ– ಒಂದು ಸಮವಸ್ತ್ರಕ್ಕೆ ಸಮ್ಮತಿ

ರಾಜ್ಯ ಗೃಹ ಇಲಾಖೆಯಿಂದ ತಾತ್ವಿಕ ಒಪ್ಪಿಗೆ • ಕೇಂದ್ರ ಗೃಹ ಸಚಿವಾಲಯ ಕಾರ್ಯದರ್ಶಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಇಲಾಖೆಯು ಸಿದ್ಧಪಡಿಸಿರುವ ಪೊಲೀಸ್ ಇಲಾಖೆಯಲ್ಲಿ ‘ಒಂದು ದೇಶ- ಒಂದು ಸಮವಸ್ತ್ರ’ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲು ರಾಜ್ಯದ ಗೃಹ ಇಲಾಖೆ ತಾತ್ವಿಕ ಒಪ್ಪಿಗೆ ನೀಡಿದೆ.

ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿಗೆ ಮಂಗಳವಾರ ಪತ್ರ ಬರೆದಿರುವ ರಾಜ್ಯದ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ‘ಪ್ರಧಾನಿಯವರ ಸಲಹೆಯಂತೆ ದೇಶದ ಎಲ್ಲ ರಾಜ್ಯಗಳಲ್ಲೂ ಪೊಲೀಸರಿಗೆ ಒಂದೇ ರೀತಿಯ ಸಮವಸ್ತ್ರ ನಿಗದಿ ಪಡಿಸುವುದು ಅಗತ್ಯವಾಗಿದೆ. ಇದು ದೇಶದ ಕಾನೂನು ಅನುಷ್ಠಾನ ಸಂಸ್ಥೆಗಳ ಸಿಬ್ಬಂದಿಯ ಗುರುತಿನಲ್ಲಿ ಏಕತೆ ತರಲಿದೆ. ಒಂದು ಸಮವಸ್ತ್ರ ನೀತಿ ಜಾರಿಗೊಂಡ ದಿನದಿಂದಲೇ ಕರ್ನಾಟಕದಲ್ಲಿ ಅದನ್ನು ಅನುಷ್ಠಾನಕ್ಕೆ ತರಲಾಗುವುದು’ ಎಂದು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ‘ಪೊಲೀಸರಿಗೆ ಸಮವಸ್ತ್ರ ನೀತಿ ಜಾರಿಗೊಳಿಸುವ ಕುರಿತು ಕೇಂದ್ರ ಗೃಹ ಸಚಿವಾಲಯವು ರಾಜ್ಯ ಸರ್ಕಾರದ ಅಭಿಪ್ರಾಯ ಕೇಳಿತ್ತು. ಒಳಾಡಳಿತ ಇಲಾಖೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ನಾನು ಸಮ್ಮತಿ ಸೂಚಿಸಿದ್ದು, ಅದರಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ’ ಎಂದು ಹೇಳಿದ್ದಾರೆ.

ಸಮವಸ್ತ್ರದ ವಿವರ: ಕಾನೂನು ಸುವ್ಯವಸ್ಥೆ ಪೊಲೀಸ್ ಸಿಬ್ಬಂದಿ– ಖಾಕಿ ಸಮವಸ್ತ್ರ, ಖಾಕಿ ಟೋಪಿ, ರಬ್ಬರ್ ಅಡಿಕಟ್ಟು ಹೊಂದಿರುವ ಕಪ್ಪು ಬಣ್ಣದ ಶೂ, ಇಲಾಖೆಯ ಲಾಂಛನವುಳ್ಳ ಕಪ್ಪು ಬೆಲ್ಟ್. ಸಂಚಾರ ವಿಭಾಗದ ಪೊಲೀಸ್ ಸಿಬ್ಬಂದಿ– ಬಿಳಿ ಅಂಗಿ ಮತ್ತು ಖಾಕಿ ಬಣ್ಣದ ಪ್ಯಾಂಟ್, ಬಿಳಿ ಬಣ್ಣದ ಟೋಪಿ, ರಬ್ಬರ್ ಅಡಿಕಟ್ಟು ಹೊಂದಿರುವ ಕಪ್ಪು ಬಣ್ಣದ ಶೂ, ಇಲಾಖೆಯ ಲಾಂಛನವುಳ್ಳ ಕಪ್ಪು ಬೆಲ್ಟ್. ಮಹಿಳಾ ಪೊಲೀಸ್ ಸಿಬ್ಬಂದಿ– ಖಾಕಿ ಸಮವಸ್ತ್ರ, ಬಟ್ಟೆಯಿಂದ ಮಾಡಿದ ಖಾಕಿ (ಬೆರೆಟ್) ಬಣ್ಣದ ದುಂಡನೆಯ ಟೋಪಿ, ಗರ್ಭಿಣಿಯರಿಗೆ ಖಾಕಿ ಸೀರೆ, ಕಪ್ಪು ಬಣ್ಣದ ಶೂ, ಇಲಾಖೆಯ ಲಾಂಛನವುಳ್ಳ ಕಪ್ಪು ಬೆಲ್ಟ್.

ಸಶಸ್ತ್ರ ಪೊಲೀಸ್ ಸಿಬ್ಬಂದಿ– ಖಾಕಿ ಸಮವಸ್ತ್ರ, ಖಾಕಿ ಟೋಪಿ, ಇಲಾಖೆಯ ಲಾಂಛನವುಳ್ಳ ಕಪ್ಪು ಬೆಲ್ಟ್. ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ)– ಖಾಕಿ ಸಮವಸ್ತ್ರ, ಖಾಕಿ ಟೋಪಿ (ಅಧಿಕಾರಿಗಳ ಶೈಲಿ), ಕಂದುಬಣ್ಣದ ಆಕ್ಸ್‌ಫರ್ಡ್ ಶೂ, ಇಲಾಖೆಯ ಲಾಂಛನವುಳ್ಳ ಕಂದುಬಣ್ಣದ ಬೆಲ್ಟ್. ಮಹಿಳಾ ಎಎಸ್‌ಐ– ಖಾಕಿ ಸಮವಸ್ತ್ರ, ಖಾಕಿ ಟೋಪಿ (ಅಧಿಕಾರಿಗಳ ಶೈಲಿ), ಗರ್ಭಿಣಿಯರು ಖಾಕಿ ಸೀರೆ ಧರಿಸಬಹುದು, ಕಂದುಬಣ್ಣದ ಆಕ್ಸ್‌ಫರ್ಡ್ ಶೂ, ಇಲಾಖೆಯ ಲಾಂಛನವುಳ್ಳ ಕಂದು ಬಣ್ಣದ ಬೆಲ್ಟ್.

ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಮತ್ತು ಮಹಿಳಾ ಪಿಎಸ್‌ಐ– ಖಾಕಿ ಸಮವಸ್ತ್ರ, ಖಾಕಿ ಟೋಪಿ (ಅಧಿಕಾರಿಗಳ ಶೈಲಿ), ಕಂದುಬಣ್ಣದ ಆಕ್ಸ್‌ಫರ್ಡ್ ಶೂ, ಇಲಾಖೆಯ ಲಾಂಛನವುಳ್ಳ ಕಂದುಬಣ್ಣದ ಬೆಲ್ಟ್, ಗರ್ಭಿಣಿಯರು ಖಾಕಿ ಸೀರೆ ಧರಿಸಬಹುದು.

ಗಾಲ್ಫ್ ಕ್ಲಬ್ ಬಂದ್: ₹ 8 ಲಕ್ಷ ಪರಿಹಾರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ರಾಮನಗರ: ಈಗಲ್‌ಟನ್ ಗಾಲ್ಫ್ ಕ್ಲಬ್ ಮುಚ್ಚಿದ್ದಕ್ಕೆ ಪ್ರತಿಯಾಗಿ ಸದಸ್ಯರಿಗೆ ಆಗಿರುವ ₹ 8 ಲಕ್ಷ ನಷ್ಟ ತುಂಬಿಕೊಡುವಂತೆ ರಾಮನಗರ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಮಂಗಳವಾರ ಆದೇಶ ನೀಡಿದೆ.

‘ಹಣವನ್ನು 45 ದಿನಗಳಲ್ಲಿ ದೂರುದಾರರಿಗೆ ಹಿಂದಿರುಗಿಸಬೇಕು. ಇಲ್ಲವಾದಲ್ಲಿ ಹಣ ಪಾವತಿಸುವವರೆಗೆ ವಾರ್ಷಿಕ ಶೇ 9ರಂತೆ ಬಡ್ಡಿ ನೀಡಬೇಕು‘ ಎಂದು ಅಧ್ಯಕ್ಷ ಎಚ್. ಚನ್ನೇಗೌಡ ಹಾಗೂ ಸದಸ್ಯೆ ರೇಣುಕಾದೇವಿ ದೇಶಪಾಂಡೆ ಅವರಿದ್ದ ಆಯೋಗ ಆದೇಶಿಸಿದೆ.

ಹಿನ್ನೆಲೆ: ಬಿಡದಿಯಲ್ಲಿರುವ ಈಗಲ್‌ಟನ್ ಗಾಲ್ಫ್ ವಿಲೇಜ್‌ನ ವಿಲ್ಲಾವೊಂದರ ನಿವಾಸಿ ಪ್ರದೀಪ್ ಸುಸರ್ಲಾ ಎಂಬುವರು 2018ರ ಅಕ್ಟೋಬರ್ 2ರಂದು ₹ 11.80 ಲಕ್ಷ ಪಾವತಿಸಿ ಈಗಲ್‌ಟನ್ ಗಾಲ್ಫ್ ಕ್ಲಬ್‌ನ ಅಜೀವ ಸದಸ್ಯತ್ವ ಪಡೆದಿದ್ದರು. ಒಂದು ವರ್ಷ ಸೌಲಭ್ಯ ಬಳಸಿಕೊಂಡಿದ್ದರು. ನಂತರ ಸರ್ಕಾರದ ಆದೇಶದಂತೆ ಗಾಲ್ಫ್ ಕ್ಲಬ್ ಬಂದ್ ಆದ ಪರಿಣಾಮ ನಷ್ಟ ಭರಿಸುವಂತೆ ರೆಸಾರ್ಟ್ ಮಾಲೀಕರ ವಿರುದ್ಧ 2022ರ ಏಪ್ರಿಲ್ 19ರಂದು ಆಯೋಗಕ್ಕೆ ದೂರು ನೀಡಿದ್ದರು. ದೂರುದಾರರು ₹11.80 ಲಕ್ಷ ಸದಸ್ಯತ್ವ ಶುಲ್ಕ ಪಾವತಿಸಿದ್ದಾರೆ. ಅದರಲ್ಲಿ ₹1.80 ಲಕ್ಷ ಜಿಎಸ್‌ಟಿ ಪಾವತಿಯಾಗಿದೆ. ಮೂರು ವರ್ಷ ಗಾಲ್ಫ್ ಸೌಲಭ್ಯ ಬಳಸಿದ್ದಕ್ಕಾಗಿ ₹2 ಲಕ್ಷ ಕಡಿತಗೊಳಿಸಿ, ಉಳಿದ ₹8 ಲಕ್ಷವನ್ನು ದೂರುದಾರರಿಗೆ ಪಾವತಿಸಲು ಆಯೋಗ ಸೂಚಿಸಿದೆ.

ಸ್ಕೂಟರ್‌ಗೆ ಜೋತುಬಿದ್ದ ವೃದ್ಧನ ಎಳೆದೊಯ್ದ ಸವಾರ

ಒಂದನೇ ಪುಟದಿಂದ

ಆಗಿದ್ದೇನು?: ‘ಮುತ್ತಪ್ಪ ಅವರು ಕೆಲಸ ನಿಮಿತ್ತ ತಮ್ಮ ಬೊಲೆರೊ ಪಿಕ್‌ಅಪ್ ವಾಹನದಲ್ಲಿ ಪಶ್ಚಿಮ ಕಾರ್ಡ್ ರಸ್ತೆ ಮಾರ್ಗವಾಗಿ ಚಂದ್ರಾ ಲೇಔಟ್‌ನಲ್ಲಿರುವ ಕುವೆಂಪು ಭಾಷಾ ಪ್ರಾಧಿಕಾರ ಕಚೇರಿಗೆ ಹೊರಟಿದ್ದರು. ಮಾಗಡಿ ರಸ್ತೆ ಟೋಲ್‌ಗೇಟ್ ಸಮೀಪದ ಎಸ್‌ಬಿಐ ಬ್ಯಾಂಕ್ ವೃತ್ತದಲ್ಲಿ ಹೋಗುವಾಗ ಮುತ್ತಪ್ಪ ಅವರಿಗೆ ಕರೆ ಬಂದಿತ್ತು. ಹೀಗಾಗಿ, ರಸ್ತೆ ಪಕ್ಕದಲ್ಲಿ ಬೊಲೆರೊ ವಾಹನ ನಿಲ್ಲಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಮೊಬೈಲ್‌ನಲ್ಲಿ ಮಾತನಾಡುತ್ತ ಹೊಂಡಾ ಆಕ್ಟಿವಾ ದ್ವಿಚಕ್ರ ವಾಹನವನ್ನು ಅತಿ ವೇಗವಾಗಿ ಚಲಾಯಿಸಿದ್ದ ಸವಾರ ಸಾಹಿಲ್, ಬೊಲೆರೊ ಪಿಕ್‌ಅಪ್ ವಾಹನಕ್ಕೆ ಗುದ್ದಿಸಿದ್ದ. ಇದರಿಂದಾಗಿ ಬೊಲೆರೊ ಹಾಗೂ ದ್ವಿಚಕ್ರ ವಾಹನ ಎರಡೂ ಜಖಂಗೊಂಡಿದ್ದವು.’

‘ವಾಹನದಿಂದ ಕೆಳಗೆ ಇಳಿದಿದ್ದ ಮುತ್ತಪ್ಪ, ಸವಾರ ಸಾಹಿಲ್‌ನನ್ನು ತರಾಟೆಗೆ ತೆಗೆದುಕೊಂಡಿದ್ದರು. ತನ್ನದೇನು ತಪ್ಪಿಲ್ಲವೆಂದು ವಾದಿಸಿದ್ದ ಸಾಹಿಲ್, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ನಂತರ, ದ್ವಿಚಕ್ರ ವಾಹನ ಸಮೇತ ಸ್ಥಳದಿಂದ ತಪ್ಪಿಸಿಕೊಂಡು ಹೋಗಲು ಮುಂದಾಗಿದ್ದ. ಆತನನ್ನು ತಡೆದು ನಿಲ್ಲಿಸಲು ಹೋಗಿದ್ದ ಮುತ್ತಪ್ಪ, ದ್ವಿಚಕ್ರ ವಾಹನದ ಬ್ಯಾಕ್ ರೆಸ್ಟ್ (ಹಿಂಬದಿ ಹಿಡಿಕೆ) ಹಿಡಿದುಕೊಂಡಿದ್ದರು. ದ್ವಿಚಕ್ರ ವಾಹನ ನಿಲ್ಲಿಸದ ಸಾಹಿಲ್, ಮುತ್ತಪ್ಪ ಅವರನ್ನು ಕೆಳಸೇತುವೆ ಮಾರ್ಗದ ಮೂಲಕ 600 ಮೀಟರ್‌ವರೆಗೂ ರಸ್ತೆಯಲ್ಲೇ ಎಳೆದೊಯ್ದಿದ್ದ. ವಾಹನ ನಿಲ್ಲಿಸುವಂತೆ ಬೇಡಿಕೊಂಡರೂ ಆರೋಪಿ ನಿಲ್ಲಿಸಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಮುತ್ತಪ್ಪ ಅವರನ್ನು ಎಳೆದೊಯ್ಯುತ್ತಿದ್ದ ದೃಶ್ಯ ಕಂಡಿದ್ದ ಸ್ಥಳೀಯರು, ಆರೋಪಿಯನ್ನು ಬೆನ್ನಟ್ಟಿದ್ದರು. ಹೊಸಹಳ್ಳಿ ಮೆಟ್ರೊ ನಿಲ್ದಾಣ ಸಮೀಪದಲ್ಲಿ ದ್ವಿಚಕ್ರ ವಾಹನ ತಡೆದಿದ್ದರು. ನಂತರವೇ, ಗಸ್ತು ಸಿಬ್ಬಂದಿ ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದು ತಿಳಿಸಿದರು.

ಜನರು ತಡೆಯದಿದ್ದರೆ ಕೊಲೆ: ‘ಅಪಘಾತವನ್ನುಂಟು ಮಾಡಿ ಪರಾರಿಯಾಗುತ್ತಿದ್ದ ಸಾಹಿಲ್‌ನನ್ನು ಹಿಡಿದು ಕೊಳ್ಳಲು ಹೋದಾಗ, ರಸ್ತೆಯಲ್ಲೇ ನನ್ನನ್ನು ಎಳೆದೊಯ್ದ. ಜನರು ಅಡ್ಡಗಟ್ಟಿ ತಡೆಯದಿದ್ದರೆ ಆತ ನನ್ನನ್ನು ಕೊಲೆ ಮಾಡುತ್ತಿದ್ದ’ ಎಂದು ಗಾಯಾಳು ಮುತ್ತಪ್ಪ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

‘ದ್ವಿಚಕ್ರ ವಾಹನ ನಿಲ್ಲಿಸುವಂತೆ ಪರಿಪರಿಯಾಗಿ ಬೇಡಿಕೊಂಡರೂ ಆತ ಪ್ರತಿಕ್ರಿಯಿಸಲಿಲ್ಲ. ಕೊಲೆ ಮಾಡುವ ಉದ್ದೇಶ ಅವನದ್ದಾಗಿತ್ತು. ಘಟನೆಯಿಂದಾಗಿ ಎರಡೂ ಕಾಲು, ಸೊಂಟ ಹಾಗೂ ದೇಹದ ಇತರೆಡೆ ಗಾಯಗಳಾಗಿವೆ. ಕೃತ್ಯಕ್ಕೆ ಕಾರಣವಾದ ಆರೋಪಿ ಸಾಹಿಲ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದೂ ಮುತ್ತಪ್ಪ ಒತ್ತಾಯಿಸಿದ್ದಾರೆ.

ಘಟನೆ ಬಗ್ಗೆ ಹೇಳಿಕೆ ನೀಡಿರುವ ಸಾಹಿಲ್, ‘ಅಪಘಾತದ ಸ್ಥಳದಲ್ಲಿ ಮುತ್ತಪ್ಪ ಅವರೇ ನನ್ನ ಮೇಲೆ ಹಲ್ಲೆ ಮಾಡಿದರು. ಜನರು ಸೇರುತ್ತಿದ್ದಂತೆ ಭಯಗೊಂಡು ಪರಾರಿಯಾಗಲು ಯತ್ನಿಸಿದೆ. ಬ್ಯಾಕ್ ರೆಸ್ಟ್ ಹಿಡಿದಿದ್ದ ಮುತ್ತಪ್ಪ ಅವರನ್ನು ಬಿಡಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿದ್ದೆ’ ಎಂದಿದ್ದಾನೆ. ವಿಜಯನಗರ ಸಂಚಾರ ಠಾಣೆಯಲ್ಲೂ ಸಾಹಿಲ್ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ದಾವೂದ್ 2ನೇ ಮದುವೆ: ಸೋದರಳಿಯ ಮಾಹಿತಿ

ಮುಂಬೈ (ಪಿಟಿಐ): ‘ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ಪಾಕಿಸ್ತಾನ ಮೂಲದ ಎರಡನೇ ಪತ್ನಿ ಇದ್ದಾರೆ. ತನ್ನ ಮೊದಲ ಹೆಂಡತಿಗೆ ವಿಚ್ಛೇದನ ನೀಡಿದ್ದೇನೆ ಎಂದು ಸುಳ್ಳು ಹೇಳಿದ್ದಾನೆ’ ಎಂದು ದಾವೂದ್‌ನ ಸೋದರಳಿಯ ಅಲೀಶಾಹ್ ಪಾರ್ಕರ್, ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ತಿಳಿಸಿದ್ದಾರೆ.

ಭಾರತದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಹಾಗೂ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವ ಅಪರಾಧ ಸಿಂಡಿಕೇಟ್ ಹಾಗೂ ಅಂತರ ರಾಷ್ಟ್ರೀಯ ಭಯೋತ್ಪಾದನಾ ಜಾಲದ ಕುರಿತು ಎನ್‌ಐಎ ತನಿಖೆ ನಡೆಸುತ್ತಿದೆ. ಈ ಸಂಬಂಧ ‘ಡಿ- ಕಂಪನಿ’ ಎನ್ನುವ ಅಂತರರಾಷ್ಟ್ರೀಯ ಅಪರಾಧ ಸಿಂಡಿಕೇಟ್ ಕುರಿತ ತನಿಖೆ ವೇಳೆ ಎನ್‌ಐಎಗೆ ಅಲೀಶಾಹ್ ಈ ಮಾಹಿತಿ ನೀಡಿದ್ದಾರೆ.

‘ದಾವೂದ್‌ನ ಮೊದಲ ಪತ್ನಿ ಹೆಸರು ಮೆಹಜಬೀನ್. ದಾವೂದ್‌ಗೆ ಮೂವರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗನಿದ್ದಾನೆ’ ಎಂದರು. ದಾವೂದ್‌ನ ಎರಡನೇ ಹೆಂಡತಿ ಪಾಕಿಸ್ತಾನದ ಪಠಾಣ್ ಸಮುದಾಯಕ್ಕೆ ಸೇರಿದವರು.

ಡಿ-ಕಂಪನಿ ಕಾರ್ಯಚಟುವಟಿಕೆಗಳಿಗೆ ಹವಾಲಾ ಮೂಲಕ ದೊಡ್ಡ ಮಟ್ಟದ ಹಣವನ್ನು ಕಳುಹಿಸುತ್ತಾರೆ. ಮುಂಬೈ ಮತ್ತು ಇತರ ಭಾಗಗಳಲ್ಲಿ ಭಯೋತ್ಪಾದನಾ ದಾಳಿ ನಡೆಸಿ, ಜನರಲ್ಲಿ ಭಯ ಹುಟ್ಟಿಸುವುದು ಡಿ–ಕಂಪನಿಯ ಕಾರ್ಯಚಟುವಟಿಕೆಯಾಗಿದೆ’ ಎಂದೂ ಅವರು ಆರೋಪಿಸಿದ್ದಾರೆ.

ಅಲೀಶಾಹ್, ದಾವೂದ್‌ನ ಸಹೋದರಿ ಹಸೀನಾ ಪಾರ್ಕರ್ ಅವರ ಮಗ. ಕಳೆದ ನವೆಂಬರ್‌ನಲ್ಲಿ ಈ ಪ್ರಕರಣ ಸಂಬಂಧ ಎನ್‌ಐಎ ಸಲ್ಲಿಸಿದ್ದ ಆರೋಪಪಟ್ಟಿಯಲ್ಲಿ ಅಲೀಶಾಹ್ ಅವರ ಹೆಸರೂ ಇತ್ತು. ದಾವೂದ್ ಕುಟುಂಬದವರೊಂದಿಗೆ ಕರಾಚಿಯಲ್ಲಿರುವ ಅಬ್ದುಲ್ಲಾ ಗಾಜಿ ಬಾಬಾ ದರ್ಗಾದ ಹಿಂಭಾಗ ಇರುವ ದಂಡು ಪ್ರದೇಶದಲ್ಲಿ ವಾಸವಿದ್ದಾರೆ.

‘ಕೆಆರ್‌ಪಿಪಿ ಬೆಂಬಲಿಸಿ ಶ್ರೀರಾಮುಲು ಟ್ವೀಟ್’

ಬಳ್ಳಾರಿ: ಮಾಜಿ ಸಚಿವ ಗಾಲಿ ಜನಾರ್ದನರೆಡ್ಡಿ ಅವರ ಪಕ್ಷಕ್ಕೆ ರಾಯಚೂರು ಜಿಲ್ಲೆಯ ಸಿಂಧನೂರಿನ ಜನರಿಗೆ ಆಹ್ವಾನ ನೀಡಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು ಟ್ವೀಟ್ ಮಾಡಿ, ಅನಂತರ ಅದನ್ನು ಅಳಿಸಿ ಹಾಕಿದ್ದಾರೆ ಎನ್ನಲಾಗಿದೆ. ‘ಬಿ.ಶ್ರೀರಾಮುಲು@ಬಿಜೆಪಿ’ ಟ್ಯಾಗ್‌ಲೈನ್‌ನಲ್ಲಿ ಮಾಡಿದ ಟ್ವೀಟ್ ಅನ್ನು ಕೆಲ ಹೊತ್ತಿನಲ್ಲಿ ಅಳಿಸಿ ಹಾಕಲಾಗಿದೆ.

ರೆಡ್ಡಿ ಅವರ ‘ಆಪ್ತ’ರಾಗಿರುವ ಸಚಿವರ ಟ್ವೀಟ್ ಚರ್ಚೆಗೆ ಗ್ರಾಸವಾಗಿದೆ. ಆದರೆ, ಟ್ವೀಟರ್ ಖಾತೆ ಹ್ಯಾಕ್ ಆಗಿದೆ ಎಂದು ಮೂಲಗಳು ಪ್ರತಿಪಾದಿಸಿವೆ.

‘ಜ. 17ರಂದು ಜನಾರ್ದನರೆಡ್ಡಿ ಅವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮಕ್ಕೆ ಸಿಂಧನೂರಿನ ಜನರನ್ನು ಹೃದಯ ಪೂರ್ವಕವಾಗಿ ಆಹ್ವಾನಿಸುತ್ತಿದ್ದೇನೆ’ ಎಂದು ಟ್ವೀಟ್ ಮಾಡಲಾಗಿದೆ. ಈ ಕುರಿತ ಪ್ರತಿಕ್ರಿಯೆಗೆ ಮೊಬೈಲ್‌ಗೆ ಕರೆ ಮಾಡಿದರೂ ಶ್ರೀರಾಮುಲು ಸಿಗಲಿಲ್ಲ.

ಜೈಲಿನಲ್ಲೇ ಜನ್ಮ ದಿನಾಚರಣೆ: ಕೈದಿಗಳ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ರಾಮನಗರ: ಜೈಲಿನ ಒಳಗೆ ಜನ್ಮದಿನವನ್ನು ಆಚರಿಸಿದ್ದಲ್ಲದೇ ಅದರ ಫೋಟೊವನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಾಕಿಕೊಂಡಿದ್ದ ಕೈದಿಗಳ ವಿರುದ್ಧ ರಾಮನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾ ಬಂಧಿಯಾಗಿರುವ ರೌಡಿಶೀಟರ್ ಕಿರಣ್ ಅಲಿಯಾಸ್ ತಮಟೆ ಕಿರಣ ಹಾಗೂ ಇತರರು ಇದೇ 14ರಂದು ಜೈಲಿನಲ್ಲಿ ಹುಟ್ಟುಹಬ್ಬ ಆಚರಿಸಿ ಕೊಂಡಿದ್ದರು.

ಅದಕ್ಕೆ ಸಂಬಂಧಿಸಿದ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ ಸಂಭ್ರಮಿಸಿದ್ದರು.

ಈ ಕುರಿತು ದೂರುಗಳ ಹಿನ್ನೆಲೆಯಲ್ಲಿ ಮಂಗಳವಾರ ಜಿಲ್ಲಾ ಕಾರಾಗೃಹದ ಮೇಲೆ ದಾಳಿ ನಡೆಸಿದ ಎಸ್‌ಪಿ ಸಂತೋಷ್ ಬಾಬು ಹಾಗೂ ಡಿವೈಎಸ್‌ಪಿ ಮೋಹನ್‌ಕುಮಾರ್ ನೇತೃತ್ವದ ತಂಡ ಕಾರಾಗೃಹದಲ್ಲಿ ಕೈದಿಗಳು ಬಳಸುತ್ತಿದ್ದ ಎರಡು ಮೊಬೈಲ್ ಅನ್ನು ವಶಕ್ಕೆ ಪಡೆಯಿತು.

ಕಿರಣ್ ಹಾಗೂ ಆತನ ಸಹಚರರ ವಿರುದ್ಧ ರಾಮನಗರ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕೈದಿಗಳಿಗೆ ಸಹಕಾರ ನೀಡಿರುವ ಜೈಲು ಸಿಬ್ಬಂದಿ ವಿರುದ್ಧ ತನಿಖೆ ನಡೆಸಿ ಕಾರಾಗೃಹ ವಿಭಾಗದ ಎಡಿಜಿಪಿಗೆ ವರದಿ ಸಲ್ಲಿಸಲಾಗುವುದು ಎಂದು ಎಸ್ಪಿ ತಿಳಿಸಿದ್ದಾರೆ.



ಪ್ರಜಾಧ್ವನಿ

ಕೊಪ್ಪಳದಲ್ಲಿ ಮಂಗಳವಾರ ಕಾಂಗ್ರೆಸ್ ಆಯೋಜಿಸಿದ್ದ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ನಿಧನ ವಾರ್ತೆ

ಮಾಜಿ ಶಾಸಕ ಎಲ್‌.ಟಿ.ತಿಮ್ಮಪ್ಪ ಹೆಗಡೆ



ಸಾಗರ: ತಾಲ್ಲೂಕಿನ ಮಡಸೂರು-ಲಿಂಗದಹಳ್ಳಿಯ ಕಾನುಕೊಪ್ಪದಲ್ಲಿ ಮಾಜಿ ಶಾಸಕ ಎಲ್‌.ಟಿ. ತಿಮ್ಮಪ್ಪ ಹೆಗಡೆ (94) ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಕೆಲ ತಿಂಗಳಿಂದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ಸ್ವಗ್ರಾಮ ಕಾನುಕೊಪ್ಪದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು. 1978 ಹಾಗೂ 1983ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸಾಗರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಸಹಕಾರ, ಶಿಕ್ಷಣ, ಧಾರ್ಮಿಕ ಕ್ಷೇತ್ರಗಳಲ್ಲೂ ಸಕ್ರಿಯರಾಗಿದ್ದರು.

ಆಪ್ಸ್‌ಕೋಸ್, ತೋಟಗಾರ್ಸ್, ಸಾಗರ ಪ್ರಾಂತ್ಯದ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ, ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಸಂಸ್ಥಾಪಕ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಬಿಜೆಪಿಯಿಂದಲೇ ಸಹಾಯ • ವೈಯಕ್ತಿಕವಾಗಿ ಆಟೊ ಕೊಡುಗೆ –ಶಾಸಕ ವೇದವ್ಯಾಸ

ಕುಕ್ಕರ್ ಬಾಂಬ್ ಸ್ಫೋಟ ಸಂತ್ರಸ್ತನಿಗೆ ₹ 5 ಲಕ್ಷ ನೆರವು

ಪ್ರಜಾವಾಣಿ ವಾರ್ತೆ

ಮಂಗಳೂರು: ‘ನಗರದಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟದ ಸಂತ್ರಸ್ತ ಆಟೊ ಚಾಲಕ ಪುರುಷೋತ್ತಮ ಪೂಜಾರಿ ಅವರಿಗೆ ಬಿಜೆಪಿ ವತಿಯಿಂದ ₹ 5 ಲಕ್ಷ ನೆರವು ನೀಡುತ್ತೇವೆ. ಶಾಸಕನ ನೆಲೆಯಲ್ಲಿ ನಾನು ಹೊಸ ಆಟೊರಿಕ್ಷಾ ಕೊಡಿಸುತ್ತೇನೆ’ ಎಂದು ಮಂಗಳೂರು ದಕ್ಷಿಣ ಶಾಸಕ ಡಿ.ವೇದವ್ಯಾಸ ಕಾಮತ್ ಭರವಸೆ ನೀಡಿದರು.

ಪುರುಷೋತ್ತಮ ಅವರನ್ನು ಮಂಗಳವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು. ‘ಹೊಸ ಟಿವಿಎಸ್ ಆಟೊರಿಕ್ಷಾವನ್ನು 12 ದಿನಗಳಲ್ಲೇ ಹಸ್ತಾಂತರಿಸಲಿದ್ದೇವೆ. ಆಗಲೇ ₹ 5 ಲಕ್ಷ ನೆರವನ್ನು ನೀಡುವವರಿದ್ದೇವೆ’ ಎಂದರು.

ಪುರುಷೋತ್ತಮ ಅವರ ಚಿಕಿತ್ಸೆ ವೆಚ್ಚವನ್ನು ಅವರ ಮಗಳ ಇಎಸ್‌ಐ ಹಣದಿಂದ ಭರಿಸಿರುವ ಬಗ್ಗೆ ಸ್ಪಷ್ಟೀಕರಣ ನೀಡಿದ ಅವರು, ‘ಆಸ್ಪತ್ರೆ ಬಿಲ್ ನೀವು ಕಟ್ಟಬೇಡಿ. ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ನೀಡಿದ್ದು ನಿಜ. ಆದರೆ, ಮಗಳ ಇಎಸ್‌ಐ ಸೌಲಭ್ಯ ವ್ಯರ್ಥ ಆಗುವುದು ಬೇಡ ಎಂಬ ಕಾರಣಕ್ಕೆ ಅವರಾಗಿಯೇ ಬಿಲ್ ಪಾವತಿ ಮಾಡಿದ್ದಾರೆ’ ಎಂದು ಹೇಳಿದರು.

ಸರ್ಕಾರದಿಂದ ಪರಿಹಾರ ನೀಡದಿರುವ ಕುರಿತು ಪ್ರತಿಕ್ರಿಯಿಸಿ, ‘ಇದು ಹೊಸ ರೀತಿ ಪ್ರಕರಣ. ಜಿಲ್ಲಾಧಿಕಾರಿ ಅವರು ಸಂಬಂಧಿಸಿದ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ ದ್ದಾರೆ. ಸಂಸದ ನಳಿನ್ ಕುಮಾರ್ ಕಟೀಲ್, ಜಿಲ್ಲಾ ಉಸ್ತುವಾರಿ ಸಚಿವ ವಿ.ಸುನಿಲ್ ಕುಮಾರ್ ಅವರು ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದು, ಪರಿಹಾರವೂ ಶೀಘ್ರದಲ್ಲೇ ಸಿಗಲಿದೆ‘ ಎಂದರು.

ಆಸ್ಪತ್ರೆಯಿಂದ ಬಿಡುಗಡೆಗೊಂಡ ಬಳಿಕ ಪುರುಷೋತ್ತಮ ಅವರು, ‘ಚಿಕಿತ್ಸಾ ವೆಚ್ಚವನ್ನು ಮಗಳ ಇಎಸ್‌ಐಯಿಂದ ಭರಿಸಿದ್ದು, ಸರ್ಕಾರದಿಂದ ಪರಿಹಾರ ತಲುಪಿಲ್ಲ’ ಎಂದಿದ್ದರು. ಈ ಕುರಿತ ವರದಿ ‘ಪ್ರಜಾವಾಣಿ’ ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು.



ರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಅವರು ಮಂಗಳವಾರ ಶಾಸಕ ವೇದವ್ಯಾಸ್ ಕಾಮತ್ ಅವರಿಗೆ ಕೈಯಲ್ಲಿನ ಸುಟ್ಟ ಗಾಯಗಳನ್ನು ತೋರಿಸಿದರು. –ಪ್ರಜಾವಾಣಿ ಚಿತ್ರ

ಮದ್ಯ: ವಯಸ್ಸಿನ ಮಿತಿ ಇಳಿಸದಿರಲು ತೀರ್ಮಾನ

ಬೆಂಗಳೂರು: ಮದ್ಯ ಖರೀದಿದಾರರ ಕನಿಷ್ಠ ವಯಸ್ಸಿನ ಮಿತಿಯನ್ನು 21 ವರ್ಷಗಳಿಂದ 18 ವರ್ಷಕ್ಕೆ ಇಳಿಸುವ ಪ್ರಸ್ತಾವದಿಂದ ರಾಜ್ಯದ ಅಬಕಾರಿ ಇಲಾಖೆ ಹಿಂದೆ ಸರಿದಿದೆ.

ಕರ್ನಾಟಕ ಅಬಕಾರಿ ಪರವಾನಗಿಗಳು (ಸಾಮಾನ್ಯ ಷರತ್ತುಗಳು) ನಿಯಮಗಳು–1967ಕ್ಕೆ ಹಲವು ತಿದ್ದುಪಡಿಗಳನ್ನು ತರಲು ಅಬಕಾರಿ ಇಲಾಖೆಯು ಇದೇ 9 ರಂದು ಕರಡು ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿತ್ತು. ಅದರಲ್ಲಿ, ಮದ್ಯ ಖರೀದಿದಾರರ ಕನಿಷ್ಠ ವಯಸ್ಸಿನ ಮಿತಿ ನಿಗದಿಪಡಿಸಿರುವ ಸೆಕ್ಷನ್ 10(1)(ಇ) ತಿದ್ದುಪಡಿ ಪ್ರಸ್ತಾವವೂ ಇದೆ. ಜನರಿಂದ ವ್ಯಾಪಕ ವಿರೋಧ ವ್ಯಕ್ತವಾಗುತ್ತಿರುವ ಕಾರಣದಿಂದ ವಯಸ್ಸಿನ ಮಿತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ ಮಾಡದಿರಲು ಅಬಕಾರಿ ಇಲಾಖೆ ನಿರ್ಧರಿಸಿದೆ.

‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅಬಕಾರಿ ಸಚಿವ ಕೆ. ಗೋಪಾಲಯ್ಯ, ‘ಜನರಿಂದ ವಿರೋಧ ವ್ಯಕ್ತವಾಗುತ್ತಿರುವುದರಿಂದ ಮದ್ಯ ಖರೀದಿದಾರರ ವಯಸ್ಸಿನ ಮಿತಿಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆ ಮಾಡದಂತೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ’ ಎಂದರು.

ಈ ಕುರಿತು ‘ಪ್ರಜಾವಾಣಿ’ಯ ಜ.12ರ ಸಂಚಿಕೆಯಲ್ಲಿ ‘ಮದ್ಯ: ವಯಸ್ಸಿನ ಮಿತಿ 18ಕ್ಕೆ ಇಳಿಕೆ’ ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.

ತಂತ್ರಜ್ಞಾನ





ಹವಾಮಾನ ವೈಪರೀತ್ಯವೂ ಗುಬ್ಬಿಗಳ ಗೋಳೂ

ಅಮೃತೇಶ್ವರಿ ಬಿ.

ಹವಾಮಾನ ವೈಪರೀತ್ಯ ಎಂದರೇನು? ಈ ಪ್ರಶ್ನೆ ತುಂಬಾ ಅಸಂಬದ್ಧ ಎನಿಸಬಹುದು ಈಗ. ಏಕೆಂದರೆ ಹವಾಮಾನ ಬದಲಾವಣೆ ಎನ್ನುವುದು ಸರ್ಕಾರ, ಪರಿಸರತಜ್ಞರು, ಚಿಂತಕರು, ಶಿಕ್ಷಕರು, ವಿದ್ಯಾರ್ಥಿಗಳೆಲ್ಲರ ಬಾಯಲ್ಲೂ ಸಾಮಾನ್ಯ ವಿಷಯವಾಗಿಬಿಟ್ಟಿದೆ. ಮಕ್ಕಳಿಂದ ಸರ್ಕಾರದವರೆಗೆ ಎಷ್ಟೇ ಭಾಷಣಗಳನ್ನು ಮಾಡಿಕೊಂಡು, ಯೋಜನೆಗಳನ್ನು ಹೂಡಿದರೂ, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಮಾತ್ರ ಕಿಂಚಿತ್ತೂ ತಡೆಗಟ್ಟಲಾಗುತ್ತಿಲ್ಲ. ನಮ್ಮ ಐಷಾರಾಮಿ ಜೀವನಕ್ಕಾಗಿ ಆಗಿರುವ ಆಧುನೀಕರಣವೇ ಇದಕ್ಕೆ ಕಾರಣವಾದರೂ ನಾವು ಮಾತ್ರ ನಮ್ಮ ಭದ್ರತೆಯನ್ನು ಕಾಪಾಡಿಕೊಂಡು ಇತರೆ ಜೀವಿಗಳ ಬಗ್ಗೆ ನಿರ್ಲಕ್ಷ್ಯ ತೋರಿದಂತಿದೆ. ಮೇಲ್ನೋಟಕ್ಕೆ ಇಡೀ ಜೀವಸಂಕುಲದ ರಕ್ಷಣೆಯ ಬಗ್ಗೆ ಗಮನ ಹರಿಸಿದರೂ, ಪಾಪ ಅದೆಷ್ಟೋ ಪುಟ್ಟ ಜೀವಿಗಳು ತಮ್ಮ ಅಳಿವು ಉಳಿವಿನ ಹೋರಾಟ ನಡೆಸುತ್ತಿವೆಯೋ ಬಲ್ಲವರಾರು? ಆದರೆ ಯಾವುದೇ ಆಧುನೀಕರಣಕ್ಕೂ ಬೇಗ ಬಲಿಯಾಗುವುದೇ ಈ ಗುಬ್ಬಚ್ಚಿಗಳು. ಮೊಬೈಲ್‌ಫೋನ್ ಬಂದಾಗಿನಿಂದ ಗುಬ್ಬಚ್ಚಿಗಳ ಸಂತತಿ ಕ್ಷೀಣಿಸುತ್ತಿದೆ ಎಂದು ನಾವೆಲ್ಲ ಕೇಳಿದ್ದೇವೆ. ಆದರೀಗ ಅವಕ್ಕೆ ಮತ್ತೊಂದು ಕಂಟಕ ಬಂದೊದಗಿದೆ. ಇದೋ ಆಸ್ಟ್ರೇಲಿಯಾದ ನ್ಯಾಷನಲ್ ಯೂನಿವರ್ಸಿಟಿಯ ಪರಿಸರ ವಿಜ್ಞಾನಿಗಳು 'ಫೇರಿ ರೆನ್ಸ್' ಎನ್ನುವ ಚಂದದ ಪುಟ್ಟ ಗುಬ್ಬಚ್ಚಿಗಳ ಬದುಕಿನಲ್ಲಿ ಹವಾಮಾನ ಬದಲಾವಣೆಯು ತಂದೊಡ್ಡಿರುವ ಅವ್ಯವಸ್ಥೆಯನ್ನು ಹಾಗೂ ಚಳಿಗಾಲದಲ್ಲಿಯೇ ಏಕೆ ಇವು ಹೆಚ್ಚು ಮರಣಿಸುತ್ತಿವೆ ಎನ್ನುವುದನ್ನೂ ಅಧ್ಯಯನ ಮಾಡಿದ್ದಾರೆ.

ಹೌದು. ಇದೊಂದು 27 ವರ್ಷಗಳ ಸುದೀರ್ಘ ಅಧ್ಯಯನ. ಲೀ ಎಲ್ವಿ, ಯಾಂಗ್ ಲಿಯೂ ಮತ್ತು ತಂಡದವರು ಅಧ್ಯಯನ ಮಾಡಿರುವ ಫೇರಿ ರೆನ್ಸ್ ಹಕ್ಕಿಗಳ ಸಂಶೋಧನೆಯು ಮೊನ್ನೆ ಸೈನ್ಸ್ ಅಡ್ವಾನ್ಸಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಫೇರಿ ರೆನ್ಸ್ ಗುಬ್ಬಚ್ಚಿಗಳು ಸಾಮಾನ್ಯವಾಗಿ ಎಲ್ಲೆಡೆ ಕಾಣಸಿಗುವ ಹಾಗೂ ಮೂಲತಃ ಕೀಟಗಳನ್ನು ತಿಂದು ಬದುಕುವ ಪುಟ್ಟ ಪಕ್ಷಿಗಳು. ಆದರೆ ಹವಾಮಾನ ವೈಪರೀತ್ಯದಿಂದಾಗಿ ಇವುಗಳಿಗಾಗುವ ಆಹಾರದ ಕೊರತೆ, ಅವುಗಳ ದೇಹದಲ್ಲಿ ನಡೆಯುವ ಜೈವಿಕ ಕ್ರಿಯೆಗಳು, ಅವುಗಳ ಸಂತಾನೋತ್ಪತ್ತಿಗಾಗುವ ತೊಂದರೆ ಹಾಗೂ ಅವು ಮಾಡಿಕೊಳ್ಳಬೇಕಾದ ಕೆಲವು ಮಾರ್ಪಾಡುಗಳು ಅವನ್ನು ಎಷ್ಟರ ಮಟ್ಟಿಗೆ ಬದುಕಗೊಡುತ್ತಿವೆ ಎನ್ನುವುದು ಈ ಸುದೀರ್ಘ ಅಧ್ಯಯನವು ತಿಳಿಸುತ್ತಿರುವ ವಿಷಯ.

ಚಳಿಗಾಲದಲ್ಲಿ ಎಲ್ಲ ಪ್ರಾಣಿ-ಪಕ್ಷಿಗಳ ದೇಹದಲ್ಲಿಯೂ ಸ್ವಾಭಾವಿಕವಾಗಿಯೇ ತಾಪವನ್ನು ನಿರ್ವಹಿಸುವ ಕೆಲವು ವಿಧಾನಗಳಿವೆ. ಆದರೆ ದೇಹದಿಂದ ಇದಕ್ಕಾಗಿ ಖರ್ಚಾಗುವ ಶಕ್ತಿ ಹೆಚ್ಚಾಗಿರುತ್ತದೆ. ಉದಾಹರಣೆಗೆ, ಕರಡಿಗಳು ದೀರ್ಘಕಾಲದ ನಿದ್ರೆಗೆ ಜಾರಿಕೊಳ್ಳುತ್ತವೆ. ನಾವು ಬಿಸಿಬಿಸಿ ಆಹಾರ ತಿಂದು, ಉಣ್ಣೆಯ ಬಟ್ಟೆಗಳನ್ನು ಧರಿಸಿ ಬೆಚ್ಚಗಿರುತ್ತೇವೆ. ಸ್ವಾಭಾವಿಕವಾಗಿಯೇ ಇತರೆ ಜೀವಿಗಳೂ ಒಂದೊಂದು ಉಪಾಯವನ್ನು ಕಂಡುಕೊಂಡಿರುತ್ತವೆ. ಆದರೆ ಸಮಶೀತೋಷ್ಣ ಪ್ರದೇಶಗಳಲ್ಲಿ ವಾಸಿಸುವ ಯಾವುದೇ ಜೀವಿಗಳಿಗೆ ಅತಿ ಶೀತ ಅಥವಾ ಅತಿಯಾದ ಬಿಸಿಲಿನಂತಹ ಬಿರುಸಿನ ವಾತಾವರಣವನ್ನು ತಡೆದುಕೊಳ್ಳಲಾಗುವುದಿಲ್ಲ. ಇಂತಹ ಪ್ರಾಣಿಗಳಿಗೆ ಶಕ್ತಿಯ ಅವಶ್ಯಕತೆ ಹೆಚ್ಚು ಇರುತ್ತದೆ. ಆದರೆ ಇದೇ ಸಮಯದಲ್ಲಿ ಆಹಾರದ ಕೊರತೆಯೂ ಉಲ್ಬಣಿಸಿಬಿಡುತ್ತದೆ. ಇದೇ ಈ ಫೇರಿ ರೆನ್ಸ್ ಗುಬ್ಬಚ್ಚಿಗಳಿಗೂ ಕಾಡುತ್ತಿರುವ ತೊಂದರೆ.

ಹವಾಮಾನ ಬದಲಾವಣೆಯು ಚಳಿಗಾಲದಲ್ಲಿಯೂ ವಾತಾವರಣದ ತಾಪಮಾನದಲ್ಲಿ ಏರಿಕೆಯನ್ನು ತರುವುದು, ಹಿಮಗಟ್ಟಿಸುವುದು ಅಥವಾ ಮಳೆಯನ್ನು ತರಿಸುವುದು. ಇದು ಇಡೀ ಜೀವಸಂಕುಲದ ಮೇಲೆ ಪ್ರಭಾವ ಬೀರುತ್ತಿದ್ದರೂ ಫೇರಿ ರೆನ್ಸ್ ಹಕ್ಕಿಗಳ ಜೀವವನ್ನೇ ಬಲಿತೆಗೆದುಕೊಳ್ಳುತ್ತಿದ್ದು, ಅದರಲ್ಲೂ ವಯಸ್ಸಿನ ಹಕ್ಕಿಗಳೇ ಹೆಚ್ಚು ಸಾಯುತ್ತಿವೆಯಂತೆ ಹಾಗೂ ಸಂತಾನೋತ್ಪತ್ತಿಯಲ್ಲಿಯೂ ವ್ಯತ್ಯಾಸವಾಗುತ್ತಿದೆಯಂತೆ. ಆದರೆ ಇವು ಯಾವ ಕ್ಷಣದಲ್ಲಿ ಸಾಯುತ್ತವೆ ಎನ್ನುವುದನ್ನು ಪತ್ತೆ ಹಚ್ಚುವುದು ಕಷ್ಟವಾಗಿತ್ತು. ವಿಜ್ಞಾನಿಗಳ ಪ್ರಕಾರ ಈ ಗುಬ್ಬಿಗಳು ಅವುಗಳ ಮಿಲನಸಮಯದ ಬಳಿಕ, ಅಂದರೆ ಚಳಿಗಾಲದಲ್ಲಿ ಹೆಚ್ಚು ಸಾಯುತ್ತಿದ್ದದನ್ನು ಗಮನಿಸಿದರು. ಇದನ್ನು ಪರೀಕ್ಷಿಸಲು ಲೀ ಎಲ್ವಿ ಮತ್ತು ಸಂಗಡಿಗರು ಅನುಸರಿಸಿದ್ದು 'ಪಾತ್ ಅನಾಲಿಸಿಸ್'. ಅಂದರೆ ವಿವಿಧ ದತ್ತಾಂಶಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಿ, ವಿಶ್ಲೇಷಿಸಿ ಆ ಮಾನದಂಡಗಳ ಪ್ರಕಾರ ಒಂದು ಘಟನೆಗೆ ಕಾರಣವನ್ನು ಪತ್ತೆ ಮಾಡುವುದು. ಇದಕ್ಕಾಗಿ ಇವರು ಕೆಲವು ಪಕ್ಷಿಗಳನ್ನು ಹಿಡಿದು ಅವುಗಳ ಕಾಲಿಗೆ ಕೆಲವು ಹಗುರವಾದ ವೈಜ್ಞಾನಿಕ ಮೀಟರುಗಳನ್ನು ಅಳವಡಿಸಿ ಅವುಗಳಿಂದ ಹೊರಡುವ ರೇಡಿಯೋ ಸಂಕೇತಗಳಿಂದ ನಿರಂತರವಾದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಹೀಗೆ ಇವರು 27 ವರ್ಷಗಳವರೆಗೆ ಪ್ರತಿ ವಾರವೂ ಹಕ್ಕಿಗಳ ಗಣತಿ ಮಾಡಿದ್ದಾರೆ. ಅವುಗಳ ಚಲನವಲನಗಳನ್ನು ಸೇರಿದಂತೆ ಎಲ್ಲಾ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಇದರಿಂದ ಹಕ್ಕಿಯು ಮರಣಿಸಿದ ದಿನವನ್ನು ಸುಲಭವಾಗಿ ಲೆಕ್ಕ ಹಾಕಬಹುದಾಗಿತ್ತು. ಹೀಗೆ ಇವರು ಹಿಂಬಾಲಿಸಿದ 1670 ಪ್ರೌಢ, ಅಂದರೆ ಒಂದು ವರ್ಷದ ಮೇಲ್ಪಟ್ಟ ಹಕ್ಕಿಗಳಲ್ಲಿ, ನೂರಕ್ಕೆ ಸುಮಾರು 59 ಹಕ್ಕಿಗಳು ಚಳಿಗಾಲದಲ್ಲಿಯೇ ಸಾಯುತ್ತಿದ್ದುವಂತೆ ಮತ್ತು ಸುಮಾರು ಪ್ರತಿಶತ 37 ಹಕ್ಕಿಗಳು ಅವುಗಳ ಮಿಲನಕಾಲ, ಅಂದರೆ ವಸಂತಕಾಲದಲ್ಲಿಯೇ ಮರಣಿಸುತ್ತಿದ್ದುವಂತೆ. ಈ ಎಲ್ಲಾ ವೈಪರೀತ್ಯಗಳನ್ನು ಸಹಿಸಿಕೊಂಡ ಕೆಲವೇ ಅಂದರೆ ಶೇ 4 ಹಕ್ಕಿಗಳು ಮಾತ್ರ ಇವರ ಪರೀಕ್ಷೆಯ ಕೊನೆಯ ಹಂತದವರೆಗೂ ಬದುಕಿದ್ದುವಂತೆ. ವಸಂತಕಾಲ, ಮಳೆಗಾಲ ಹಾಗೂ ಚಳಿಗಾಲದಲ್ಲಿ ವಾತಾವರಣದ ಉಷ್ಣತೆ, ಮಳೆ ಹಾಗೂ ಶೀತದ ಪ್ರಮಾಣದ ಅಂಕಿ-ಅಂಶಗಳ ವಿಶ್ಲೇಷಣೆಯ ಪ್ರಕಾರ ಹವಾಮಾನ ವೈಪರೀತ್ಯ ಹಾಗೂ ಫೇರಿ ರೆನ್ಸ್ ಹಕ್ಕಿಗಳ ಸಾವಿಗೂ ನೇರ ಸಂಬಂಧವಿತ್ತು. ವಸಂತಕಾಲದಲ್ಲಿ ಹಕ್ಕಿಗಳು ಹೆಚ್ಚಾಗಿ ಸಾಯದಿದ್ದರೂ ಆ ಸಮಯದಲ್ಲಾಗಿರುವ ಭೌತಿಕ ಹಾಗೂ ಜೈವಿಕ ಬದಲಾವಣೆಗಳು ಚಳಿಗಾಲದಲ್ಲಿ ಪರಿಣಾಮವನ್ನು ಬೀರುತ್ತಿವೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಬೇಸಿಗೆಯಲ್ಲಿ ಅತಿಯಾಗಿ ಹೊರಡುವ ಬಿಸಿಕಿರಣಗಳು ಅಥವಾ ಅಚಾನಕ್ಕಾಗಿ ಬೀಸುವ ಶೀತಗಾಳಿಯು ಈ ಪುಟ್ಟ ಹಕ್ಕಿಗಳ ದೇಹದಲ್ಲಿ ಉಷ್ಣತೆಯನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ಕುಗ್ಗಿಸಬಹುದು. ಅದು ಚಳಿಗಾಲದಲ್ಲಿ ಮತ್ತೆ ತನ್ನ ಉಷ್ಣತೆಯನ್ನು ಕಾಪಾಡಿಕೊಳ್ಳಲಾಗದೆ, ಜೊತೆಗೆ ಆಹಾರವೂ ಸಿಗದೆ ಮರಣಿಸುತ್ತಿರಬಹುದು ಎಂಬುದು ಲೀ ಎಲ್ವಿ ಮತ್ತು ತಂಡದವರ ಅಭಿಪ್ರಾಯ.

ಹೀಗೆ ಹವಾಮಾನ ತಾಪಮಾನದಲ್ಲಿ ಏರಿಕೆಯಾಗುತ್ತಿರುವುದು ವ್ಯತಿರಿಕ್ತ ಪರಿಣಾಮವನ್ನುಂಟುಮಾಡುತ್ತಿದೆ. ಚಳಿಗಾಲದಲ್ಲಿ ಇದ್ದಕ್ಕಿದಂತೆ ಬಿಸಿಯಾಗುವಿಕೆ ಅಥವಾ ಬೇಸಿಗೆಯಲ್ಲಿ ಬಿರುಬಿಸಿಲು ಅಥವಾ ಅತಿಯಾದ ಮಳೆ ಯಾವುದೂ ಜೀವಸಂಕುಲಕ್ಕೆ ಕ್ಷೇಮವಲ್ಲ. ದೈತ್ಯಪ್ರಾಣಿಗಳು ಹೇಗೋ ಇಂತಹ ವ್ಯತ್ಯಾಸಗಳನ್ನು ಸಹಿಸಿಕೊಂಡರೂ ಪರಿಸರದಲ್ಲಿ ಮುಖ್ಯ ಪಾತ್ರಗಳನ್ನು ನಿರ್ವಹಿಸುವ ಎಷ್ಟೋ ಪುಟ್ಟಜೀವಿಗಳು ಅದನ್ನು ತಡೆದುಕೊಳ್ಳಲಾರವು. ನಮ್ಮಂತೆ ದೀರ್ಘಾವಧಿಗೆ ಬೇಕಾಗುವಷ್ಟು ಆಹಾರಪದಾರ್ಥಗಳನ್ನು ಸಂಗ್ರಹಿಸಿಟ್ಟುಕೊಳ್ಳಲಾಗದ ಮತ್ತು ಬಿರುಸಿನ ಹವಾಗುಣಗಳಿಂದ ರಕ್ಷಿಸಿಕೊಳ್ಳಲಾಗದ ಜೀವಿಗಳು ಆಹಾರದ ಆಶ್ರಯಗಳಿಲ್ಲದೆ ಅದೆಷ್ಟು ಚಡಪಡಿಸುತ್ತಿವೆಯೋ ಕಾಣೆವು. ❖

ಇದು ಹೂವಲ್ಲ ಹವಳ



ಪೆನ್ನಾಟುಲ ಅಥವಾ ಸೀ ಪೆನ್ (ಚಿತ್ರ 1)




ಪೆನ್ನಾಟುಲಾ ಫಾಸ್ಫೊರಿಯ (ಚಿತ್ರ 3)

ಎಸ್. ಎನ್. ಹೆಗಡೆ

'ನಾಗಪುಷ್ಪ' ಎಂಬ ಹೆಸರಿನಲ್ಲಿ ಫೋಟೊ ಒಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಅತಿಯಾಗಿ ಹರಿದಾಡುತ್ತಿದೆ (ನೋಡಿ:ಚಿತ್ರ 1). 'ಇದು ನಾಗಪುಷ್ಪ, 36 ವರ್ಷಗಳಿಗೊಮ್ಮೆ ಅರಳುತ್ತದೆ. ಎಲ್ಲರಿಗೂ ಶೇರ್ ಮಾಡಿ, ನೋಡಿ ಸಂತುಷ್ಟರಾಗಲಿ' ಎಂದೋ, 'ಹಿಮಾಲಯದಲ್ಲಿ ಮಾತ್ರ ಕಾಣಬರುವ ಅಪರೂಪದ ಈ ಹೂವನ್ನು ನೋಡಿದವರಿಗೆ ಪುಣ್ಯ ಬರುತ್ತದೆ, ಶೇರ್ ಮಾಡಿ' ಎಂದೋ ಈ ಪೋಸ್ಟ್‌ಗಳು ಹರಿದಾಡುತ್ತಿವೆ. 'ಶೇರ್ ಮಾಡದಿದ್ದರೆ ನೀವು ಅಪಾರ ಕಷ್ಟನಷ್ಟ ಅನುಭವಿಸಬೇಕಾಗುತ್ತದೆ' ಎಂಬ ಬೆದರಿಕೆಯೂ ಇರುವುದುಂಟು! ಆದರೆ ಇದು ನಾಗಪುಷ್ಪ ಎಂಬುದು ಅಪ್ಪಟ ಸುಳ್ಳು. ಯಾರೋ ಕಿಡಿಗೇಡಿಗಳು ಅಮಾಯಕರನ್ನು ಯಾಮಾರಿಸುವುದಕ್ಕೆ ಮಾಡಿದ ತಂತ್ರ ಇದು ಅಷ್ಟೆ. ಮೂಲತಃ ಇದು ಸಸ್ಯವೇ ಅಲ್ಲ. ಇದು 'ಪೆನ್ನಾಟುಲ' ಎಂಬ ಹವಳಪ್ರಾಣಿ.

ಪೆನ್ನಾಟುಲದ ಸಾಮಾನ್ಯ ಹೆಸರು 'ಸೀ ಪೆನ್' ಅಥವಾ 'ಕಡಲ ಲೇಖನಿ'. ಈ ಪೆನ್ನು ಬರೆಯಲಿಕ್ಕೆ ಬಾರದು! ಪೆನ್ನು ಅಥವಾ ಲೇಖನಿಯ ಹಾಗೂ ಕಾಗದದ ಆವಿಷ್ಕಾರವಾಗುವ ಮುಂಚೆ ಹಕ್ಕಿಯ ಗರಿಯನ್ನು ಬಳಸಿ ತಾಳೆಯ ಎಲೆಯ ಮೇಲೆ ಬರೆಯುತ್ತಿದ್ದರಷ್ಟೇ? ವರ್ಣರಂಜಿತವಾದ ಹಕ್ಕಿಯ ಗರಿಯನ್ನು ಹೋಲುವುದರಿಂದ ಕಡಲಲ್ಲಿ ವಾಸಿಸುವ ಈ ಜೀವಿಗೆ 'ಕಡಲ ಲೇಖನಿ' ಎಂಬ ಹೆಸರು ಬಂದಿದೆ. ಇದು ಉಷ್ಣ ಹಾಗೂ ಸಮಶೀತೋಷ್ಣವಲಯದ ಸಮುದ್ರ ಮಹಾಸಾಗರಗಳ ನೀರಿನ ತಳದಲ್ಲಿ ಕಂಡುಬರುತ್ತದೆ. ತೀರದಿಂದ ಕಡಲಿನ 6100 ಮೀಟರ್ ಆಳದವರೆಗೂ ಇವು ಕಂಡುಬರುತ್ತವೆ. ಭಾರತದ ಮೂರು ದಿಕ್ಕಿನಲ್ಲಿ ಆವರಿಸಿರುವ ಪರಿಸರ ಹಾಗೂ ದ್ವೀಪಗಳಲ್ಲಿಯೂ ಕಡಲ ಲೇಖನಿಗಳಿವೆ. ಪ್ರಾಣಿಪ್ರಪಂಚದ ಅಕಶೇರುಕಗಳ ಪೈಕಿ 'ಸೀಲಂಟಿರೇಟಾ' ಅಥವಾ 'ಕುಟುಕುಕಣವಂತ'ಗಳೆಂಬ ಗುಂಪಿಗೆ ಸೇರುವ ಈ ಪ್ರಾಣಿಗಳು ಮೃದು ಹವಳಗಳು, ಆಂತೊಜೋವ ವರ್ಗದ ಪೆನ್ನಾಟುಲೇಸಿಯ ಕುಟುಂಬಕ್ಕೆ ಸೇರುತ್ತವೆ.



ಕಡಲ ಲೇಖನಿಯ ಪಾಲಿಪ್ (ಚಿತ್ರ 2)

ಕಡಲ ಲೇಖನಿಗಳು ಸಮೂಹ ಜೀವಿಗಳು. ಚಿತ್ರದಲ್ಲಿ ಕಾಣುವುದು ಹಲವಾರು ಜೀವಿಗಳ ಇಂಥದೊಂದು ಸಮೂಹ. ಪ್ರತಿಯೊಂದು ಸಮೂಹದಲ್ಲಿ ನೂರಾರು ಬಿಡಿ ಜೀವಿಗಳಿದ್ದು, ಪ್ರತಿಯೊಂದು ಬಿಡಿ ಜೀವಿಯನ್ನು 'ಪಾಲಿಪ್' ಎನ್ನುತ್ತಾರೆ (ಚಿತ್ರ 2). ಒಂದು ಸಮೂಹದಲ್ಲಿ ವಿವಿಧ ಬಗೆಯ ಪಾಲಿಪ್‌ಗಳಿರುತ್ತವೆ. ಆಹಾರವನ್ನು ಸೇವಿಸುವುದಕ್ಕೆ, ರಕ್ಷಣೆಗೆ, ಪುನರುತ್ಪಾದನೆಗೆ ಪ್ರತ್ಯೇಕವಾದ ಪಾಲಿಪ್‌ಗಳಿರುತ್ತವೆ. ಒಂದೊಂದು ಗುಂಪಿನ ಪಾಲಿಪ್‌ಗಳನ್ನು 'ಜೂವಾಯಿಡ್' ಎನ್ನುತ್ತಾರೆ.

ಕಡಲ ಲೇಖನಿಗಳು ನಿಶ್ಚಲಜೀವಿಗಳು; ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಲಾರವು. ಇವು ಬೆಳವಣಿಗೆಯಾಗುವಾಗ ಒಂದು ಪಾಲಿಪ್ ನೆಲದಲ್ಲಿ ಆಶ್ರಯ ಪಡೆದು ಅದರಿಂದ ಅನೇಕ ಪಾಲಿಪ್‌ಗಳು ಬೆಳೆಯುತ್ತವೆ. ಮೊದಲ ಪಾಲಿಪ್ ತನ್ನ ಗ್ರಹಣಾಂಗಗಳನ್ನು ಕಳೆದುಕೊಂಡು ಕಾಂಡವಾಗಿ ಮಾರ್ಪಾಡಾಗುತ್ತದೆ. ಈ ಕಾಂಡವು ಸಮುದ್ರದ ತಳದಲ್ಲಿ ಮರಳಲ್ಲಿ ಹೂತು ಮಾಲ್ಭಾಗದಲ್ಲಿ ಹೊಸ (ಮರಿ) ಪಾಲಿಪ್‌ಗಳನ್ನು ಉತ್ಪಾದಿಸುತ್ತದೆ. ನೂರಾರು ಪಾಲಿಪ್‌ಗಳು ಬೆಳೆದು ನಿಶ್ಚಿತ ರೂಪ ಪಡೆಯುತ್ತವೆ. ಪ್ರತಿಯೊಂದು ಪಾಲಿಪ್ ತನ್ನ ಸುತ್ತ ಮೃದುವಾದ ಕವಚವೊಂದನ್ನು ನಿರ್ಮಿಸುತ್ತದೆ. ಈ ಕವಚದ ಮೂಲಕ ಹಲವು ಪಾಲಿಪ್‌ಗಳು ಕೂಡಿಕೊಂಡಿರುತ್ತವೆ.

ನೀರಿನೊಂದಿಗೆ ತೇಲಿಬರುವ ಬ್ಯಾಕ್ಟೀರಿಯಗಳು, ಏಕಕೋಶಜೀವಿಗಳು, ಸೂಕ್ಷ್ಮ ತೇಲುಜೀವಿಗಳು ಇವುಗಳ ಆಹಾರ. ಪಾಲಿಪ್‌ಗಳ ಮೇಲ್ಭಾಗದಲ್ಲಿ ಬಾಯಿ ಇದ್ದು, ಅದರ ಸುತ್ತ ಬೆರಳಿನಾಕಾರದ ಏಳೆಂಟು ಸ್ಪರ್ಶಾಂಗಗಳಿರುತ್ತವೆ. ಈ ಸ್ಪರ್ಶಾಂಗಗಳ ಮೇಲೆ ವಿಷವನ್ನು ಸ್ರವಿಸುವ ಕೋಶಗಳಿದ್ದು ನೀರಿನಲ್ಲಿ ತೇಲಿಬರುವ ಸೂಕ್ಷ್ಮಜೀವಿಗಳನ್ನು ಹಿಡಿದು ವಿಷವನ್ನು ಚುಚ್ಚಿ ಅವುಗಳನ್ನು ಜೀರ್ಣಿಸಿಕೊಳ್ಳುತ್ತವೆ. ಕಡಲ ಲೇಖನಿಗಳನ್ನು ತಿಂದು ಬದುಕುವ ಕೆಲವು ಜೀವಿಗಳು ಕೂಡ ಇವೆ. ಪಾಲಿಪ್‌ಗಳು ಬಗೆಬಗೆಯ ಬಣ್ಣದ ವಸ್ತುಗಳನ್ನು ಸಂಶ್ಲೇಷಿಸುತ್ತವೆ. ಅದರಿಂದ ಕಡಲ ಲೇಖನಿಗಳು ವರ್ಣರಂಜಿತವಾಗಿರುತ್ತವೆ. ಕೆಲವು ವರ್ಣರಂಜಿತ ಸೂಕ್ಷ್ಮಜೀವಿಗಳು ಇವುಗಳೊಂದಿಗೆ ಸಹಜೀವನ ನಡೆಸುತ್ತಿದ್ದು ಲೇಖನಿಗಳು ಇನ್ನಷ್ಟು ಆಕರ್ಷಕವಾಗಿ ಕಾಣುತ್ತವೆ. ಇದುವರೆಗೆ ಸುಮಾರು ಇನ್ನೂರು ಪ್ರಭೇದಗಳನ್ನು ಗುರುತಿಸಲಾಗಿದೆ.

ಅವು ನಿರ್ಲಿಂಗ ಹಾಗೂ ಲೈಂಗಿಕವಾಗಿ ಪ್ರಜನನ ಮಾಡಬಲ್ಲವು. ನಿರ್ಲಿಂಗ ಪ್ರಜನನದಲ್ಲಿ ಪಾಲಿಪ್‌ಗಳು ಕವಲೊಡೆದು ಹೊಸ ಪಾಲಿಪ್ ಹುಟ್ಟುತ್ತದೆ. ಲೈಂಗಿಕ ಪ್ರಜನನದಲ್ಲಿ ಅಂಡಾಣು ವೀರ್ಯಾಣುಗಳು ಬೆಳೆದು ಅವುಗಳ ಸಂಯೋಗದಿಂದ ಉದ್ಭವಿಸುವ ಯುಗ್ಮಕೋಶದಿಂದ ಹೊಸ ಜೀವಿ ಬೆಳೆಯುತ್ತದೆ. ಲೈಂಗಿಕ ಪ್ರಜನನದ ಕಾರಣದಿಂದ ಹೊಸಸಮೂಹಗಳು ಬೆಳೆದು ಅವು ಸಮುದ್ರದ ವಿವಿಧ ಭಾಗಗಳಿಗೆ ಪ್ರಸಾರವಾಗುತ್ತವೆ. ಕಡಲ ಲೇಖನಿಗಳ ಪ್ರಭೇದಗಳು ಕೇವಲ ಹತ್ತು ಸೆಂ.ಮೀ.ನಿಂದ ಒಂದು ಮೀಟರ್ ಎತ್ತರದವರೆಗೆ ಬೆಳೆಯುತ್ತವೆ. ಎರಡು ಮೀಟರ್ ಬೆಳೆಯುವ ಪ್ರಭೇದವೂ ಇದೆ. ಕೆಲವು ಕಡಲ ಲೇಖನಿಗಳು ಕೆಲವು ಮೀನುಗಳಿಗೆ ಹಾಗೂ ಜೀವಿಗಳಿಗೆ ಆಶ್ರಯವನ್ನೂ ಒದಗಿಸುತ್ತವೆ! ಕಡಲ ಪರಿಸರದಲ್ಲಿ ಸಮತೋಲನವನ್ನು ಕಾಪಾಡುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಈ ಜೀವಿಗಳು ಅತ್ಯಂತ ಪ್ರಾಚೀನ ಜೀವಿಗಳೆಂದೂ, ಸುಮಾರು 45 ಕೋಟಿ ವರ್ಷಗಳಿಗಿಂತ ಹಿಂದೆ ಭೂಮಿಯ ಮೇಲೆ ಕಾಣಿಸಿಕೊಂಡವು ಎಂದು ಹೇಳಲಾಗುತ್ತಿದೆ. ಆದರೆ ಕಡಲ ಪರಿಸರದ ಮಾಲಿನ್ಯದಿಂದ ಕೆಲವು ಪ್ರಭೇದಗಳು ವಿನಾಶದ ಅಂಚಿನಲ್ಲಿವೆ ಎಂಬುದು ಅತ್ಯಂತ ವಿಷಾದದ ಸಂಗತಿ. ಕಡಲ ಲೇಖನಿ ಕುತೂಹಲಕರವಾದ ಒಂದು ವಿಶಿಷ್ಟವಾದ ಜೀವಿ. ಕಡಲ ಪರಿಸರದ ಮಾಲಿನ್ಯವನ್ನು ತಡೆದು ಈ ಜೀವಿಗಳನ್ನು ಸಂರಕ್ಷಿಸಬೇಕಾದುದು ಅಗತ್ಯ. ಜೊತೆಗೆ ಇಂಥ ಜೀವಿಗಳನ್ನು ಜಾಲತಾಣಗಳಲ್ಲಿ ಕುಚೋದ್ಯಗಳಿಗೆ ಬಳಸಿಕೊಳ್ಳುವುದೂ ನಾವು ನಿಸರ್ಗಕ್ಕೆ ಬಗೆಯುವ ದ್ರೋಹ ಎಂದೇ ಹೇಳಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

2) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

7) ಸುರಪುರದಲ್ಲಿ ಆಂತರಿಕ ಕ್ಷೋಭೆ ಯಾವ ಕಾರಣಕ್ಕಾಗಿ ಉಂಟಾಗಿದ್ದವು?

ಉತ್ತರ:- ವೆಂಕಟಪ್ಪ ನಾಯಕನ ತಂದೆ ಕೃಷ್ಣಪ್ಪ ನಾಯಕನ ಮರಣಾನಂತರ ಪಟ್ಟಕ್ಕೆ ಬಂದನು. 1834ರಲ್ಲಿ ಜನಿಸಿದ ಇವನು ತನ್ನ ಅಪ್ರಾಪ್ತ ವಯಸ್ಸಿಗೆ ಪಟ್ಟಕ್ಕೆ ಬಂದನು. ಆದರೆ ಕೃಷ್ಣಪ್ಪ ನಾಯಕನ ಸೋದರನಾಗಿದ್ದ ಪೆದ್ದ ನಾಯಕ ಎಂಬುವವನು ತಗಾದೆ ಮಾಡಿದ ಪರಿಣಾಮ ಸುರಪುರದ ಆಂತರಿಕ ರಾಜಕೀಯ ಚಟುವಟಿಕೆಗಳು ಕ್ಷೋಭೆಗೊಂಡವು.

8) ಸತ್ಯಶೋಧಕ ಸಮಾಜವು ಹುಟ್ಟಿಕೊಂಡ ಹಿನ್ನೆಲೆ ಏನು?

ಉತ್ತರ:- ಭಾರತದ ಉಳಿದ ಭಾಗಗಳಲ್ಲಿ ಇದ್ದಂತೆ ಮಹಾರಾಷ್ಟ್ರದಲ್ಲಿ ಜಾತಿ ಮತ್ತು ಲಿಂಗ ನೆಲೆಗಳ ಶೋಷಣೆಗಳು ವ್ಯಾಪಕವಾಗಿದ್ದವು. ಬ್ರಿಟಿಷ್ ವಸಾಹತುಶಾಹಿ ಕಾಲಘಟ್ಟದಲ್ಲಿ ಈ ಬಗೆಯ ಶೋಷಣೆಗಳ ವಿರುದ್ಧ ಅನೇಕ ಚಳವಳಿಗಳು ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ 1873ರಲ್ಲಿ ಹುಟ್ಟಿದ ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಚಳವಳಿಯನ್ನು ಪ್ರಾರಂಭಿಸಿತು. ಅಥವಾ

ರಾಮಕೃಷ್ಣ ಪರಮಹಂಸರು ತಮ್ಮ ಬದುಕಿನ ಉದಾಹರಣೆಯ ಮೂಲಕ ಏನನ್ನು ತೋರಿಸಿಕೊಟ್ಟರು?

ಉತ್ತರ:- ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಬೇಕೆಂದು ತಮ್ಮ ಬದುಕಿನ ಉದಾಹರಣೆಯ ಮೂಲಕ ತೋರಿಸಿಕೊಟ್ಟರು `ಎಲ್ಲಾ ಪಥಗಳು ಸಮಾನವಾದವು, ಯಾವ ದೇವರು, ಯಾವ ಪಂಥಗಳು ಎನ್ನುವುದಕ್ಕಿಂತಲೂ ಆಧ್ಯಾತ್ಮದ ಸಾಕ್ಷಾತ್ಕಾರವು ಮುಖ್ಯವಾದವು' ಎಂದು ಇವರು ಸಾರಿದ್ದರು

9) ಎಲೆ ಉದುರುವ ಮಾನ್ಸೂನ್ ಅರಣ್ಯಗಳ ಬಗ್ಗೆ ವಿವರವಾಗಿ ಬರೆಯಿರಿ

ಉತ್ತರ:- ಈ ಪ್ರಕಾರದ ಅರಣ್ಯಗಳು ಭಾರತದಲ್ಲಿ ಅತಿಹೆಚ್ಚು ವಿಸ್ತಾರವಾಗಿ ಹರಡಿವೆ. ಇವುಗಳು 75 ರಿಂದ 250 ಸೆಂ.ಮೀ. ಮಳೆ ಪಡೆಯುವ ಪ್ರದೇಶಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿವೆ. ಇದು ಭಾರತದ ಶೇ 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿವೆ. ಭಾರತವು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಈ ಬಗೆಯ ಅರಣ್ಯಗಳು ವ್ಯಾಪಕವಾಗಿ ಹಂಚಿಕೆಯಾಗಿವೆ. ಇವುಗಳು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಯುದುರಿಸುವುದನ್ನು ರೂಢಿಸಿಕೊಂಡಿವೆ. ಹೀಗಾಗಿ ಇವುಗಳನ್ನು ಎಲೆ ಉದುರುವ ಮಾನ್ಸೂನ್ ಅರಣ್ಯಗಳು ಎನ್ನುವರು

ಅಥವಾ

ಕಾಲುವೆ ನೀರಾವರಿ ಬಗ್ಗೆ ಬರೆಯಿರಿ

ಉತ್ತರ : ಭಾರತದಲ್ಲಿ ರೂಢಿಯಲ್ಲಿರುವ ನೀರಾವರಿ ಪದ್ಧತಿಗಳಲ್ಲಿ ಕಾಲುವೆ ನೀರಾವರಿಯು ಪ್ರಮುಖವಾದುದು.

ಜಗತ್ತಿನಲ್ಲಿ ಕಾಲುವೆ ನೀರಾವರಿಯನ್ನು ಹೊಂದಿದ ದೇಶಗಳಲ್ಲಿ ಭಾರತವೂ ಸಹ ಮುಖ್ಯವಾದುದು. ವಿಸ್ತಾರವಾದ ಸಾಗುವಳಿ ಭೂಮಿಗೆ ಕಾಲುವೆ ನೀರಾವರಿಯನ್ನು ಒದಗಿಸಬಹುದಾಗಿದೆ. ಭಾರತವು ಸುಮಾರು 16.5 ದಶಲಕ್ಷ ಹೆಕ್ಟೇರ್ ಪ್ರದೇಶವು ಕಾಲುವೆ ನೀರಾವರಿ ಕ್ಷೇತ್ರವನ್ನು ಹೊಂದಿದೆ. ಇದು ದೇಶದಲ್ಲಿ ಬಾವಿಯ ನಂತರ ಎರಡನೆಯ ಮುಖ್ಯ ನೀರಾವರಿಯ ಮೂಲವಾಗಿದೆ. ಇದರಲ್ಲಿ ಎರಡು ಪ್ರಕಾರಗಳಿವೆ. (1) ಪ್ರವಾಹಕಾಲುವೆ (2) ಸರ್ವಕಾಲಿಕ ಕಾಲುವೆ.

10) 'ವಿಶ್ವ ಧರ್ಮ ಸಮ್ಮೇಳನಗಳ ಮತ್ತು ಸ್ವಾಮಿ ವಿವೇಕಾನಂದ' ಈ ಕುರಿತು ಏನು ಹೇಳುವಿರಿ?

ಉತ್ತರ:- 1893ರಲ್ಲಿ ಸ್ವಾಮಿ ವಿವೇಕಾನಂದರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಣುತೆ, ಸಕಲಧರ್ಮಗಳು ಸತ್ಯ ಎಂದು ಪ್ರತಿಪಾದಿಸಿ ಭಾರತದ ಹಿರಿಮೆಯನ್ನು ಜಗತ್ತಿಗೇ ಸಾರಿದರು. ದಮನಕಾರಿ ರಿಲಿಜನ್‌ಗಳಿಗೆ ಅಪವಾದವೆಂಬಂತೆ ಹಿಂದೂ ಧರ್ಮವು ಹೇಗೆ ವಿಶ್ವಭ್ರಾತೃತ್ವವನ್ನು ಸಾರಿದೆ ಎಂಬುದನ್ನು ವಿವರಿಸಿ ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು.

ಅಥವಾ

ಯಾವ ಕಾರಣಕ್ಕಾಗಿ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು?

ಉತ್ತರ:- 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯವನ್ನು ಸಾಧಿಸುವ ಜೊತೆಜೊತೆಯಲ್ಲಿ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜನರನ್ನು ತಮ್ಮ ಹಿತಾಸಕ್ತಿಗಳಿಗಾಗಿ ಶೋಷಿಸಲು ತೊಡಗಿದರು. ಈ ಶೋಷಣೆಗಳು ಕರ್ನಾಟಕವೂ ಸೇರಿದಂತೆ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು. ದೇಶೀ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸತೊಡಗಿದರು. ಇದರಿಂದ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು. ಉದಾ:- ಧೋಂಡಿಯವಾಘನ ಹೋರಾಟ, ಹಲಗಲಿಯ ಬೇಡರಹೋರಾಟ, ವೆಂಕಟಪ್ಪ ನಾಯಕನ ಹೋರಾಟ,ಮೊದಲಾದವು ಕರ್ನಾಟಕದಲ್ಲಿ ನಡೆದವು.

11) ಭಾರತದಲ್ಲಿ ವ್ಯವಸಾಯದಪ್ರಾಮುಖ್ಯತೆ ಏನು?

ಉತ್ತರ: ವ್ಯವಸಾಯವು ಮಾನವನಅತ್ಯಂತ ಪ್ರಮುಖ ಹಾಗೂ ಪ್ರಾಚೀನವಾದವೃತ್ತಿಗಳಲ್ಲಿ ಒಂದಾಗಿದೆ. ಭಾರತವು ಕೃಷಿಪ್ರಧಾನವಾದ ದೇಶ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. 59 ಭಾಗವುಕೃಷಿ ಆಧರಿಸಿದೆ. ದೇಶದಆರ್ಥಿಕಾಭಿವೃದ್ಧಿಯೂ ಕೃಷಿಯ ಪ್ರಗತಿಯನ್ನಾಧರಿಸಿದೆ. ಭಾರತದಲ್ಲಿ ಕೃಷಿಯು ಜೀವನಾಧಾರಿತ ಪ್ರಮುಖ ಮೂಲವಾಗಿದೆ. ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿ.

ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ. ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತುಮುಂತಾದವುಗಳಿಗೆ ನೆರವಾಗುತ್ತದೆ.ಇದು ಹಲವು ಕೈಗಾರಿಕೆಗಳಪ್ರಗತಿಗೂ ನೆರವಾಗುವುದು.ವ್ಯವಸಾಯವು ಪರೋಕ್ಷವಾಗಿಯೂಹಲವಾರು ಕೈಗಾರಿಕೆಗಳನ್ನುಪೋಷಿಸುತ್ತದೆ. ಉದಾ: ರಾಸಾಯನಿಕಗೊಬ್ಬರ, ಕ್ರಿಮಿ-ಕೀಟನಾಶಕಗಳು,ಯಂತ್ರೋಪಕರಣ ಕೈಗಾರಿಕೆಗಳುಇತ್ಯಾದಿ.ವ್ಯವಸಾಯವು ಸಂಚಾರ ಸಾರಿಗೆ ವ್ಯಾಪಾರಮೊದಲಾದ ಹಲವಾರು ತೃತೀಯ ಆರ್ಥಿಕಉದ್ಯೋಗಗಳನ್ನು ಪೋಷಿಸಿದೆ.


ಭೌತವಿಜ್ಞಾನ

ಪಿಯುಸಿ

ಮಾದರಿ ಪ್ರಶ್ನೋತ್ತರ


45) ಹೈಗನ್‌ನ ತತ್ವ ವಿವರಿಸಿ

ಉತ್ತರ:- (........ಹಿಂದಿನ ಸಂಚಿಕೆಯಿದ) ಸಮಾನವಾಗಿ ಎಲ್ಲಾ ದಿಕ್ಕುಗಳಲ್ಲೂತರಂಗವನ್ನು ಹೊರಸೂಸುವ ಬಿಂದು ಆಕರವೊಂದಿದ್ದರೆ, ಆಗ ಒಂದೇ ಪಾರ ಮತ್ತು ಒಂದೇ ಪ್ರಾವಸ್ಥೆಯಲ್ಲಿ ಕಂಪಿಸುವ ಬಿಂದುಗಳ ಪಥವು ಗೋಳಗಳಾಗಿದ್ದು (ಮೇಲಿನ ಚಿತ್ರದಲ್ಲಿರುವಂತೆ) ಗೋಳೀಯ ತರಂಗಗಳು ಉಂಟಾಗುತ್ತವೆ.




ಆಕರದಿಂದ ತುಂಬಾ ದೂರದಲ್ಲಿ, ಗೋಳದ ಮೇಲಿನ ಒಂದು ಸಣ್ಣ ಭಾಗವನ್ನು ಒಂದು ಸಮತಲ ಎಂದು ಪರಿಗಣಿಸಿದಾಗ ಅದನ್ನು ಸಮತಲ ತರಂಗ (ಮೇಲಿನ ಚಿತ್ರ ದಲ್ಲಿರುವಂತೆ) ಎನ್ನುವರು.

ಈಗ $t = 0$ ದಲ್ಲಿ ನಾವು ತರಂಗ ಮುಖದ ಆಕಾರವನ್ನು ತಿಳಿದುಕೊಂಡಿದ್ದರೆ, ಹೈಗನ್‌ನ ತತ್ವವು ನಂತರದ ಸಮಯದಲ್ಲಿ ತರಂಗ ಮುಖದ ಆಕಾರವನ್ನು ತಿಳಿಯಲು ಸಹಾಯ ಮಾಡುತ್ತದೆ. ಈರೀತಿಯಾಗಿ ಹೈಗನ್ ತತ್ವವು ಒಂದು ಜ್ಯಾಮಿತೀಯ ರಚನೆಯಾಗಿದ್ದುಯಾವುದೇ ನಂತರದ ಸಮಯದಲ್ಲಿತರಂಗ ಮುಖದ ಆಕಾರವನ್ನುತಿಳಿದುಕೊಳ್ಳಲು ಸಹಾಯಕವಾಗಿದೆ.ಒಂದು ಬಿಂದುವಿನಿಂದ ಅಪಸರಣಗೊಳ್ಳುವ ಒಂದು ತರಂಗವನ್ನು ತೆಗೆದುಕೊಳ್ಳಿ ಮತ್ತು F1F ಗೋಳೀಯ ತರಂಗ ಮುಖದ ಒಂದು ಸಣ್ಣ ಭಾಗವನ್ನು $t = o$ದಲ್ಲಿ ಸೂಚಿಸುತ್ತದೆ. (ಕೆಳಗಿನ ಚಿತ್ರ) ಈಗಹೈಗನ್‌ನ ತತ್ವದ ಪ್ರಕಾರ ತರಂಗಮುಖದ ಮೇಲಿನ ಎಲ್ಲಾ ಬಿಂದುಗಳೂ ಕ್ಷೋಭೆಯ ಆಕರಗಳಾಗಿ ವರ್ತಿಸುತ್ತವೆ ಮತ್ತು ಎಲ್ಲಾ ದಿಕ್ಕಿನಲ್ಲೂ ದ್ವಿತೀಯ ತರಂಗಗಳನ್ನು ಉತ್ಪಾದಿಸುತ್ತವೆ ಮತ್ತು ಈ ತರಂಗ ಮುಖಗಳು ಮೂಲ ಜವದೊಂದಿಗೆ ಎಲ್ಲಾ ದಿಕ್ಕಿಗೆ ಹರಡುತ್ತವೆ. ಇವುಗಳನ್ನು ದ್ವಿತೀಯಕ ತರಂಗಗಳೆಂದು ಕರೆಯುತ್ತಾರೆ. ಈಗ ನಾವು ಈ ಎಲ್ಲಾ ಗೋಳಗಳಿಗೆ ಸಾಮಾನ್ಯ ಸ್ಪರ್ಶಕವನ್ನು ಎಳೆದರೆ ನಮಗೆ ತರಂಗ ಮುಖದ ಹೊಸ ಸ್ಥಾನವು $t =$ ದಲ್ಲಿ ಸಿಗುತ್ತದೆ.



ಮೇಲಿನ ಮಾದರಿಯು ನ್ಯೂನತೆಯೊಂದನ್ನು ಹೊಂದಿದೆ :

(ಮೇಲಿನ ಚಿತ್ರದಲ್ಲಿರುವಂತೆ) D1D2 ಎಂದು ತೋರಿಸುವ ಹಿಮ್ಮುಖ ತರಂಗವೂ ಇರುತ್ತದೆ. ದ್ವಿತೀಯಕ ತರಂಗಗಳ ಪಾರವು ಗರಿಷ್ಟವಾಗಿದ್ದು ಹಿಮ್ಮುಖ ದಿಕ್ಕಿನಲ್ಲಿ ಶೂನ್ಯವಾಗಿರುತ್ತದೆಂದು ಹೈಗನ್‌ನು ತರ್ಕಿಸಿದನು ; ಮತ್ತು ಈ ತಾತ್ಕಾಲಿಕಪರಿಕಲ್ಪನೆಯಿಂದ, ಅವನು ಹಿಮ್ಮುಖತರಂಗವು ಅಸ್ತಿತ್ವದಲ್ಲಿಲ್ಲವೆಂದುವಿವರಿಸಲು ಶಕ್ತನಾದನು ಆದರೆ, ಈ ತಾತ್ಕಾಲಿಕಪರಿಕಲ್ಪನೆಯು ತೃಪ್ತಿಕರವಲ್ಲ ಮತ್ತು ಹಿಮ್ಮುಖ ತರಂಗದಇಲ್ಲದಿರುವಿಕೆಯನ್ನು ಸುಧಾರಿತ ತರಂಗಸಿದ್ಧಾಂತವು ಪುಷ್ಟೀಕರಿಸಿತು.



ಇದೇ ರೀತಿ, ಮಾಧ್ಯಮವೊಂದರಲ್ಲಿ ಚಲಿಸುವಸಮತಲ ತರಂಗದ ತರಂಗ ಮುಖದಆಕಾರವನ್ನು ತಿಳಿಯಲು ಹೈಗನ್ತತ್ವವನ್ನು ಬಳಸಬಹುದು**(ಮೇಲಿನಚಿತ್ರದಲ್ಲಿರುವಂತೆ)**

46) ಯಂಗ್ ದ್ವಿ ಸೀಳು-ಗಂಡಿಪ್ರಯೋಗದಲ್ಲಿನ ವ್ಯತಿಕರಣಪಟ್ಟಿಯಲ್ಲಿ ಕೆಳಗಿನ ಪ್ರತಿಯೊಂದುಕ್ರಿಯೆ ಉಂಟಾಗುವ ಪರಿಣಾಮವೇನು?

(a) ಸೀಳುಗಂಡಿಯ ಸಮತಲದಿಂದಪರದೆಯನ್ನು ದೂರಕ್ಕೆತೆಗೆದುಕೊಂಡು ಹೋದಾಗ.

(b) ಒಂದು ಆಕರದ(ಏಕವರ್ಣೀಯ)ವನ್ನು ಇನ್ನೊಂದುಕಡಿಮೆ ತರಂಗಾಂತರ ಆಕರ (ಏಕವರ್ಣೀಯ) ದಿಂದ ಬದಲಾಯಿಸಿದಾಗ.

(c) ಎರಡು ಸೀಳು ಗಂಡಿಗಳಅಂತರವನ್ನು ಹೆಚ್ಚಿಸಿದಾಗ

(d) ಆಕರ ಗಂಡಿಯನ್ನು ದ್ವಿ ಸಮತಲಗಂಡಿಯ ಹತ್ತಿರ ತಂದಾಗ

(e) ಆಕರ ಗಂಡಿಯ ಅಗಲವನ್ನುಹೆಚ್ಚಿಸಿದಾಗ

(f) ಏಕವರ್ಣೀಯ ಬೆಳಕಿನ ಆಕರವನ್ನುಬಿಳಿಯ ಬಣ್ಣದ ಆಕರವಾಗಿ ಬದಲಾಯಿಸಿದಾಗ(ಪ್ರತಿಯೊಂದು ಘಟನೆಯಲ್ಲಿಯೂ ಬದಲಾಗದೇ ಇರುವ, ನಿರ್ದಿಷ್ಟವಾಗಿ ಹೇಳಿದಪಾರಾ ಮೀಟರ್‌ನ್ನು ಹೊರತುಪಡಿಸಿ ಎಲ್ಲಾ ಪಾರಾಮೀಟರ್‌ಗಳನ್ನು ತೆಗೆದುಕೊಳ್ಳಿ)

ಉತ್ತರ:-(a) ಫ್ರಿಂಜ್‌ಗಳ ಕೊನೆಯಅಂತರವು ಸ್ಥಿರವಾಗಿರುತ್ತದೆ.

(= /d) ನಿಜವಾದ ಫ್ರಿಂಜ್‌ಗಳ ಅಂತರವು ದ್ವಿ-ಸೀಳುಗಂಡಿಗಳ ಸಮತಲದಿಂದ ಪರದೆಗೆಇರುವ ದೂರಕ್ಕೆ ಅನುಪಾತವಾಗಿಹೆಚ್ಚಾಗುತ್ತದೆ.

(b) ಫ್ರಿಂಜ್‌ಗಳ ಅಂತರವು (ಕೋನೀಯಅಂತರ ಕೂಡಾ) ಕಡಿಮೆಯಾಗುತ್ತದೆ. ಹಾಗಿದ್ದರೂ ಕೆಳಗೆ ನೀಡಿರುವ ನಿಬಂಧನೆ d ಯನ್ನು ನೋಡಿ.

(c) ಫ್ರಿಂಜ್‌ಗಳ ಅಂತರವು (ಕೋನೀಯಅಂತರ ಕೂಡಾ) ಕಡಿಮೆಯಾಗುತ್ತದೆ. ಹಾಗಿದ್ದರೂ ಕೆಳಗೆ ನೀಡಿರುವ ನಿರ್ಬಂಧನೆ d ಯನ್ನು ನೋಡಿ.

(d) ಆಕರದ ಗಾತ್ರವಾಗಿರಲಿ ಮತ್ತು S ದ್ವಿಸೀಳು ಗಂಡಿಗಳ ಸಮತಲದಿಂದಅದಕ್ಕಿರುವ ದೂರ ವ್ಯತಿಕರಣ ಪಟ್ಟಿಯುಕಂಡುಬರಲು $s/S <$ /d ಆಗಿರಬೇಕು.ಅಥವಾ ಆಕರದ ಬೇರೆ ಬೇರೆ ಭಾಗದಿಂದಉಂಟಾದ ವ್ಯತಿಕರಣ ಪಟ್ಟೆಯು ಅಧಿವ್ಯಾಪಿಸಿದರೆ ಪ್ರಿಂಜ್‌ಗಳು ಕಂಡುಬರುವುದಿಲ್ಲ. ಈ ರೀತಿಯಾಗಿ S ಕಡಿಮೆಯಾದಂತೆ (ಅಂದರೆ ಆಕರಗಂಡಿ ಹತ್ತಿರ ತಂದಂತೆ) ವ್ಯತಿಕರಣ ಪಟ್ಟೆಗಳು ಕಡಿಮೆಯಾಗಿ ಕಡಿಮೆ ಶಾರ್ಪ್‌ಆಗುತ್ತದೆ. ಮತ್ತು ಆಕರವನ್ನು ತುಂಬಾ ಹತ್ತಿರ ತಂದಾಗ ಫ್ರಿಂಜ್‌ಗಳು ಮಾಯವಾಗುತ್ತವೆ. ಇದು ಆಗುವವರೆಗೆ ಫ್ರಿಂಜ್-ಅಂತರ ಸ್ಥಿರವಾಗಿರುತ್ತದೆ.

(ಮುಂದುವರಿಯುವುದು.......)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ದಯಾ ಮರಣ: ಮಾರ್ಗಸೂಚಿ ಪರಿಷ್ಕರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ದಯಾ ಮರಣಕ್ಕೆ ಸಂಬಂಧಿಸಿದಂತೆ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ಕುರಿತ ಮಾರ್ಗಸೂಚಿಯನ್ನು ಮಾರ್ಪಡಿಸಲು ಮಂಗಳವಾರ ಒಪ್ಪಿಗೆ ನೀಡಿದೆ.



ದಿ 'ಇಂಡಿಯನ್ ಸೊಸೈಟಿ ಫಾರ್ ಕ್ರಿಟಿಕಲ್ ಕೇರ್' ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ನ್ಯಾಯಪೀಠವು ವಿಚಾರಣೆಗೆ ಒಳಪಡಿಸಿತು.

'ಮಾರ್ಗಸೂಚಿ ಪರಿಷ್ಕರಣೆಯ ಮನವಿಯನ್ನು ನಾವು ಪರಿಗಣಿಸಿದ್ದೇವೆ. ಈ ವಿಚಾರದಲ್ಲಿ ನ್ಯಾಯಾಲಯದ ಇತಿಮಿತಿ ಏನು ಎಂಬುದರ ಅರಿವೂ ನಮಗಿದೆ. ವೈದ್ಯಕೀಯ ವಿಚಾರದಲ್ಲಿ ನಾವ್ಯಾರೂ ಪರಿಣತರಲ್ಲ' ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ್ ಬೋಸ್, ಹೃಷಿಕೇಶ್ ರಾಯ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ತಿಳಿಸಿತು.

'ಸದ್ಯ ಅಸ್ತಿತ್ವದಲ್ಲಿರುವ ವ್ಯವಸ್ಥೆ ಪ್ರಕಾರ ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಯು ಗುಣಮುಖವಾಗುವ ಸಾಧ್ಯತೆಯೇ ಇಲ್ಲ ಅಥವಾ ಆತನ ಮಿದುಳು ನಿಷ್ಕ್ರಿಯವಾಗಿದೆ ಎಂಬುದನ್ನು ವೈದ್ಯಕೀಯ ಮಂಡಳಿ ಮೊದಲು ಘೋಷಿಸಬೇಕು. ಈ ಸಂಬಂಧ ಎರಡನೇ ಅಭಿಪ್ರಾಯ ಪಡೆಯಲು ಜಿಲ್ಲಾಧಿಕಾರಿಗಳು ಸ್ವತಂತ್ರ ವೈದ್ಯಕೀಯ ಮಂಡಳಿ ಸ್ಥಾಪಿಸಬೇಕು. ನಂತರ ಈ ವಿಚಾರವನ್ನು ಜುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗೆ ವರ್ಗಾಯಿಸಬೇಕಾಗುತ್ತದೆ. ಈ ಪ್ರಕ್ರಿಯೆಯು ತುಂಬಾ ಜಟಿಲವಾಗಿದೆ' ಎಂದು ಅರ್ಜಿದಾರರ ಪರ ವಕೀಲರು ಸಾಂವಿಧಾನಿಕ ಪೀಠಕ್ಕೆ ತಿಳಿಸಿದರು. 'ಈಗಿರುವ ವ್ಯವಸ್ಥೆಯಿಂದ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಅನ್ನು ಹೊರಗಿಡಬೇಕು' ಎಂದೂ ಅವರು ಹೇಳಿದರು. ವಾದ ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ಜಾರ್ಖಂಡ್: ದೂರು ನೀಡಲು ರಾತ್ರಿ 17 ಕಿ.ಮೀ. ನಡೆದ ವಿದ್ಯಾರ್ಥಿನಿಯರು !

ಚಾಯಿಬಾಸಾ, ಜಾರ್ಖಂಡ್ (ಪಿಟಿಐ): ಹಾಸ್ಟೆಲ್ ವಾರ್ಡನ್ ವಿರುದ್ಧ ಜಾತಿ ನಿಂದನೆ ಹಾಗೂ ತಾರತಮ್ಯದ ಕುರಿತು ಜಿಲ್ಲಾಧಿಕಾರಿಗೆ ದೂರು ನೀಡುವ ಸಲುವಾಗಿ ಚಾಯಿಬಾಸಾ ಜಿಲ್ಲೆಯ ವಸತಿಶಾಲೆಯೊಂದರ 60ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ರಾತ್ರಿ ಹೊತ್ತಿನಲ್ಲಿ 17 ಕಿ.ಮೀ ದೂರ ನಡೆದ ಘಟನೆ ಜಾರ್ಖಂಡ್‌ನಲ್ಲಿ ವರದಿಯಾಗಿದೆ.

ಚಾಯಿಬಾಸಾ ಜಿಲ್ಲೆಯ ಖುಂಟ್‌ಪಾನಿಯ ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ಶಾಲೆಯ 11ನೇ ತರಗತಿ ವಿದ್ಯಾರ್ಥಿನಿಯರು ದೂರು ನೀಡಿದವರು. ರಾತ್ರಿಯಿಡೀ ನಿರ್ಜನ ರಸ್ತೆಗಳಲ್ಲಿ ಕಾಲ್ನಡಿಗೆಯಲ್ಲೇ ತೆರಳಿದ ವಿದ್ಯಾರ್ಥಿನಿಯರು ಸೋಮವಾರ ಬೆಳಿಗ್ಗೆ 7 ಗಂಟೆಗೆ ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲಾಧಿಕಾರಿ ಅನನ್ಯ ಮಿತ್ತಲ್ ಅವರ ಬಳಿ ತಲುಪಿ, ವಾರ್ಡನ್ ವಿರುದ್ಧ ದೂರು ನೀಡಿದ್ದಾರೆ.

ವಿದ್ಯಾರ್ಥಿನಿಯರ ಕುಂದುಕೊರತೆ ಆಲಿಸಿದ ಜಿಲ್ಲಾಧಿಕಾರಿ ಅನನ್ಯ ಅವರು ಜಿಲ್ಲೆಯ ಹಿರಿಯ ಶಿಕ್ಷಣಾಧಿಕಾರಿಗೆ (ಡಿಎಸ್‌ಇ) ಸೂಚನೆ ನೀಡಿದರು. ವಿದ್ಯಾರ್ಥಿನಿಯರ ಅಹವಾಲು ಆಲಿಸಿದ ಶಿಕ್ಷಣಾಧಿಕಾರಿ ಅಭಯ್ ಕುಮಾರ್ ಶೀಲ್ ಅವರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ವಿದ್ಯಾರ್ಥಿನಿಯರನ್ನು ವಾಹನಗಳಲ್ಲಿ ಮರಳಿ ವಸತಿಶಾಲೆಗೆ ತಲುಪಿಸಲಾಯಿತು.

ಹಳಸಿದ ಆಹಾರ ತಿನ್ನಲು ಒತ್ತಾಯ: 'ಹಾಸ್ಟೆಲ್ ವಾರ್ಡನ್ ನಮಗೆ ಹಳಸಿದ ಆಹಾರ ತಿನ್ನಲು ಒತ್ತಾಯಿಸುತ್ತಾರೆ. ಶೌಚಾಲಯಗಳನ್ನು ತೊಳೆಯಲು ಹೇಳುತ್ತಾರೆ. ಕೆಳಜಾತಿಯ ವಿದ್ಯಾರ್ಥಿನಿಯರಿಗೆ ಚಾಪೆಯ ಮೇಲೆ, ನೆಲದ ಮೇಲೆ ಮಲಗುವಂತೆ ಸೂಚಿಸುತ್ತಾರೆ. ಇದನ್ನು ವಿರೋಧಿಸಿದವರನ್ನು ವಾರ್ಡನ್ ಥಳಿಸಿದ್ದಾರೆ' ಎಂದು ವಿದ್ಯಾರ್ಥಿನಿಯರು ಡಿಎಸ್‌ಇ ಅವರಿಗೆ ದೂರು ನೀಡಿದ್ದಾರೆ.

'ಶಿಕ್ಷಣಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ ಅವರ ಬಳಿ ಸುಳ್ಳು ಹೇಳುವಂತೆಯೂ ವಾರ್ಡನ್ ಒತ್ತಾಯಿಸಿದ್ದಾರೆ' ಎಂದೂ ದೂರಿದ್ದಾರೆ.

ಈ ಬಗ್ಗೆ ತನಿಖೆ ಕೈಗೊಂಡು, ವಾರ್ಡನ್ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಡಿಎಸ್‌ಇ ಭರವಸೆ ನೀಡಿದ್ದಾರೆ. ಚಾಯಿಬಾಸಾಕ್ಕೆ ತಲುಪುತ್ತಿದ್ದಂತೆಯೇ ವಿದ್ಯಾರ್ಥಿನಿಯರು ಕಾಂಗ್ರೆಸ್ ಸಂಸದೆ ಗೀತಾ ಕೋಡಾ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿಗೆ ಕರೆ ಮಾಡಿ ಗೀತಾ ಮಾಹಿತಿ ನೀಡಿದ್ದರು.

30ರವರೆಗೆ ಸಿಐಡಿ ಕಸ್ಟಡಿಗೆ ಸ್ಯಾಂಟ್ರೊ ರವಿ, ಸಹಚರರು

ಮೈಸೂರು: ಅತ್ಯಾಚಾರ, ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ನ್ಯಾಯಾಂಗ ಬಂಧನದಲ್ಲಿರುವ ಕೆ.ಎಸ್. ಮಂಜುನಾಥ ಅಲಿಯಾಸ್ ಸ್ಯಾಂಟ್ರೊ ರವಿ ಹಾಗೂ ಸಹಚರರಾದ ಪ್ರಕಾಶ್‌ಜಿ, ಶ್ರುತೇಶ್ ಅವರನ್ನು ಜ.30ರವರೆಗೆ ಸಿಐಡಿ ವಶಕ್ಕೆ ಒಪ್ಪಿಸಲಾಗಿದೆ.

ಇಲ್ಲಿನ 6ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ಕೋರ್ಟ್ ಮಂಗಳವಾರ ಆದೇಶಿಸಿತು. ಆರೋಪಿಗಳನ್ನು ವಶಕ್ಕೆ ಪಡೆದ ಸಿಐಡಿ ಅಧಿಕಾರಿಗಳು, ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ಮಾಹಿತಿ ಪಡೆದರು. ಈ ನಡುವೆ, ಸಂತ್ರಸ್ತೆಯು ಸೋಮವಾರ ರಾತ್ರಿ ಇಲ್ಲಿನ ದೇವರಾಜ ಠಾಣೆಗೆ ದೂರು ನೀಡಿದ್ದಾರೆ. ದೇವರಾಜ ಮಾರುಕಟ್ಟೆ ಬಳಿ ನಿಲ್ಲಿಸಿದ್ದ ವಾಹನದಲ್ಲಿದ್ದ ಚೆಕ್ ಪುಸ್ತಕ ಕಳುವಾಗಿದೆ. ಆರೋಪಿ ರವಿ, ಸಹಚರ ಪ್ರಕಾಶ್ ಕಾರಣ ಎಂದು ದೂರಿದ್ದಾರೆ.


'ಹೆಚ್ಚುವರಿ ಶಿಕ್ಷಕರ ವರ್ಗಾವಣೆ ನೀತಿ ಕೈಬಿಡಿ'

ಹುಬ್ಬಳ್ಳಿ: 'ಪ್ರಾಥಮಿಕ ಶಾಲೆ ಹೆಚ್ಚುವರಿ ಶಿಕ್ಷಕರ ವರ್ಗಾವಣೆ ನೀತಿ ಹಿಂದೆ ಪಡೆಯಬೇಕು. ಈ ಬಗ್ಗೆ 20ರಂದು ಬೆಂಗಳೂರಿನಲ್ಲಿ ನಡೆಯುವ ಉನ್ನತ ಸಭೆಯಲ್ಲೂ ಸರ್ಕಾರಕ್ಕೆ ಸೂಚಿಲಿದ್ದೇನೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆಗೆ ಶಿಕ್ಷಣ ಇಲಾಖೆ 250ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಯಲ್ಲಿನ ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ಮುಂದಾಗಿದೆ. ಇದು, ಅವೈಜ್ಞಾನಿಕ ಕ್ರಮ' ಎಂದರು.

'ಸರ್ಕಾರ ಈಗ ಕಣ್ಮುಚ್ಚಿ ಕುಳಿತುಕೊಳ್ಳಬಾರದು. ಬೆಂಗಳೂರಿನ ಸಭೆಯಲ್ಲಿ ವಾಪಸ್ ಕುರಿತು ನಿರ್ಧರಿಸದಿದ್ದರೇ, ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡ್ತೇವೆ' ಎಂದರು.

'ಮಕ್ಕಳ ಸಂಖ್ಯೆ ಕಡಿಮೆ ಇದ್ದರೂ, ಹೆಚ್ಚಿಗೆ ಇದ್ದರೂ ಶಿಕ್ಷಕರನ್ನು ವರ್ಗಾಯಿಸಲಾಗುತ್ತಿದೆ. ಶಿಕ್ಷಣ ಇಲಾಖೆ ಆಯುಕ್ತರಿಗೆ ಕನಿಷ್ಠ ಬುದ್ಧಿ ಇಲ್ಲದಂತಾಗಿದೆ. ಇಂತಹ ಅಧಿಕಾರಿಗಳಿಂದಲೇ ಕನ್ನಡ ಶಾಲೆಗಳು ಮುಚ್ಚುತ್ತಿರುವುದು' ಎಂದು ಅಸಮಾಧಾನ ವ್ಯಕ್ತಪಡಿಸಿದರು.



❦ ಸುಭಾಷಿತ ❦
ಭ್ರಷ್ಟರೆಲ್ಲ ಸೇರಿ ಒಂದು ಶಕ್ತಿಯಾಗುವಾಗ, ಪ್ರಾಮಾಣಿಕರೆಲ್ಲ ಹಾಗೆಯೇ ಒಂದುಗೂಡಿ ಒಂದು ಪ್ರಬಲ ಶಕ್ತಿಯಾಗಬೇಕು.
–ಲಿಯೊ ಟಾಲ್‌ಸ್ಟಾಯ್

ಜನಗಣತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿರುವುದು ದುರದೃಷ್ಟಕರ

ಪ್ರತೀ ಹತ್ತು ವರ್ಷಕ್ಕೆ ಒಮ್ಮೆ ನಡೆಸುವ ಜನಗಣತಿಯು 2021ರಲ್ಲಿ ನಡೆಯಬೇಕಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಇದು ನಡೆಯಲಿಲ್ಲ. ಈಗ, ಜನಗಣತಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಅದಕ್ಕೆ ತಪ್ಪು ಕಾರಣಗಳನ್ನು ನೀಡಲಾಗಿದೆ ಮತ್ತು ಈ ಕಾರಣಗಳು ಮನವರಿಕೆ ಆಗುವ ರೀತಿಯಲ್ಲಿಯೂ ಇಲ್ಲ. 1911ರಿಂದ ಈತನಕ ಒಮ್ಮೆಯೂ ತಪ್ಪದಂತೆ ಜನಗಣತಿ ನಡೆಸಲಾಗಿದೆ. ಗಣತಿ ಮಾಡುವವರು ಮನೆಮನೆಗೆ ತೆರಳಿ ಜನರ ಹತ್ತಿರಕ್ಕೆ ಹೋಗಿ ಮಾಹಿತಿ ಸಂಗ್ರಹಿಸಬೇಕು. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಹೇರಲಾಗಿದ್ದ ಲಾಕ್‌ಡೌನ್ ಮತ್ತು ಸೋಂಕಿನಿಂದ ರಕ್ಷಣೆ ಪಡೆಯಲು ಅಂತರ ಕಾಯ್ದುಕೊಳ್ಳಬೇಕಾಗಿದ್ದುದರಿಂದ ಆಗ ಗಣತಿ ನಡೆಸುವುದು ಸಾಧ್ಯವಿರಲಿಲ್ಲ. ಸಾಂಕ್ರಾಮಿಕದ ಅಬ್ಬರವು ತಗ್ಗಿದ ಬಳಿಕವೂ ಗಣತಿ ನಡೆಸಲು ಬೇಕಾದ ಸಿದ್ಧತೆಗಳನ್ನು ಸರ್ಕಾರ ಮಾಡಿಕೊಳ್ಳಲಿಲ್ಲ. ಜನಗಣತಿ ನಡೆಸುವ ಹೊಣೆಗಾರಿಕೆ ಹೊತ್ತಿರುವ ಭಾರತದ ರಿಜಿಸ್ಟ್ರಾರ್ ಜನರಲ್ ಕಚೇರಿಯು ಮನೆಗಳ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿಲ್ಲ. ಆಡಳಿತ ಘಟಕಗಳ ಗಡಿ ನಿಗದಿ ಮಾಡುವ ಕೆಲಸದ ಗಡುವನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದೆ. ಈ ಕೆಲಸ ಪೂರ್ಣಗೊಂಡು ಕೆಲವು ತಿಂಗಳ ಬಳಿಕವೇ ಗಣತಿ ನಡೆಸಬೇಕಾಗುತ್ತದೆ. ಹಾಗಾಗಿ, ಜನಗಣತಿಯು ಸದ್ಯಕ್ಕೆ ನಡೆಯುವ ಸಾಧ್ಯತೆ ಇಲ್ಲ.



ಜನಗಣತಿ ಪ್ರಕ್ರಿಯೆಯನ್ನು ತಕ್ಷಣವೇ ಆರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕು

ಜನಗಣತಿಯಲ್ಲಿ ದೊರೆಯುವ ಪ್ರಾಥಮಿಕ ದತ್ತಾಂಶಗಳು ಆಡಳಿತದ ವಿವಿಧ ಉದ್ದೇಶಗಳಿಗೆ ಅತ್ಯಗತ್ಯ. ಹಾಗಾಗಿ, ಜನಗಣತಿಯ ಮಹತ್ವವನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಜನರ ಜೀವನದ ಎಲ್ಲ ವಿಚಾರಗಳ ಸ್ಪಷ್ಟ ಚಿತ್ರಣವನ್ನು ಗಣತಿಯು ನೀಡುತ್ತದೆ. ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಇರುವ ಜನಸಂಖ್ಯೆ ಎಷ್ಟು ಎಂಬುದರ ಮಾಹಿತಿ ದೊರೆಯುವುದು ಒಂದು ಪ್ರಯೋಜನ ಮಾತ್ರ. ಯಾವ ವಯೋಮಾನದ ಎಷ್ಟು ಜನರಿದ್ದಾರೆ, ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳೇನು ಎಂಬೆಲ್ಲ ಮಾಹಿತಿಯು ನೀತಿ ನಿರೂಪಣೆಗೆ ಅಗತ್ಯವಾಗಿದೆ. ವಸತಿ, ಶಿಕ್ಷಣ, ಆರೋಗ್ಯ, ಫಲವಂತಿಕೆ, ಸಾಕ್ಷರತೆಯ ಸ್ಥಿತಿಗತಿ ಮತ್ತು ಇವುಗಳ ಹಂಚಿಕೆಯು ರಾಜ್ಯ, ಪ್ರಾಂತ್ಯ ಮತ್ತು ಜಿಲ್ಲೆಗಳ ಮಟ್ಟದಲ್ಲಿ ಯಾವ ರೀತಿ ಇದೆ ಎಂಬ ದತ್ತಾಂಶಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಬೇಕು. ಸ್ಥಳೀಯ ಮಟ್ಟದ ಯೋಜನೆಗಳನ್ನು ರೂಪಿಸುವುದಕ್ಕೂ ಇಂತಹ ದತ್ತಾಂಶಗಳು ಬೇಕು. ಒಂದು ಪ್ರದೇಶದಲ್ಲಿ ಶಾಲೆ ಅಥವಾ ಆಸ್ಪತ್ರೆಯ ಅಗತ್ಯ ಇದೆಯೇ ಎಂಬುದನ್ನು ಆ ಪ್ರದೇಶದ ನಿರ್ದಿಷ್ಟ ದತ್ತಾಂಶಗಳ ಆಧಾರದಲ್ಲಿ ನಿರ್ಧರಿಸಬೇಕಾಗುತ್ತದೆ. ನಗರೀಕರಣ ಮತ್ತು ಜನರ ವಲಸೆಯ ಮಾಹಿತಿಯು ಹಲವು ವಿಚಾರಗಳ ಕುರಿತು ನಿರ್ಧಾರ ಕೈಗೊಳ್ಳಲು ನಿರ್ಣಾಯಕ. ಜನಕಲ್ಯಾಣ ಯೋಜನೆಗಳನ್ನು ರೂಪಿಸಲು ಜನರ ಕುರಿತ ದತ್ತಾಂಶಗಳು ಬಹಳ ಮುಖ್ಯ. ವಸತಿ, ಸ್ವಚ್ಛ ಭಾರತ ಅಭಿಯಾನ ಮುಂತಾದ ಯೋಜನೆಗಳ ಯಶಸ್ಸಿನ ಕುರಿತು ಸರ್ಕಾರವು ಹೇಳಿಕೊಳ್ಳುತ್ತಿರುವುದು ಸರಿಯಾಗಿದೆಯೇ ಎಂಬುದನ್ನು ಕಂಡುಕೊಳ್ಳುವುದಕ್ಕೂ ಜನಗಣತಿಯ ದತ್ತಾಂಶಗಳು ಬೇಕಾಗುತ್ತವೆ.

ಈಗ ನಮ್ಮಲ್ಲಿ ಇರುವುದು 2011ರ ಜನಗಣತಿಯ ದತ್ತಾಂಶಗಳು. ಅವು ಹಳೆಯವಾಗಿವೆ. ಸರ್ಕಾರವು ಜನಗಣತಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ದುರದೃಷ್ಟಕರ. ದತ್ತಾಂಶ ಕುರಿತ ಸರ್ಕಾರದ ನೀತಿಯು ಈ ಹಿಂದೆಯೂ ಸಮರ್ಪಕವಾಗಿ ಇರಲಿಲ್ಲ. ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಗೆ ಮೊದಲು ಜನಗಣತಿ ನಡೆಸಲು ಸರ್ಕಾರ ಸಿದ್ಧವಿಲ್ಲ. ಇದಕ್ಕೆ ರಾಜಕೀಯವಾದ ಕಾರಣಗಳಷ್ಟೇ ಇವೆ. ಇದು ತಪ್ಪು. ಸರ್ಕಾರ ಬಯಸಿದರೆ ಈಗಲೂ ಜನಗಣತಿ ನಡೆಸಲು ಸಾಧ್ಯ. ಜನಗಣತಿಯು ದೇಶದ ಚಿತ್ರಣವನ್ನು ಕಾಲಕಾಲಕ್ಕೆ ನೀಡುತ್ತದೆ. ಇಂತಹ ಚಿತ್ರಣವು ಇಲ್ಲದಂತೆ ಆಗುವುದು ಸರಿಯಲ್ಲ.

ದಿನದ ಟ್ವೀಟ್


ಅಂತೂ ಇಂತೂ ಸಾಧ್ಯವಾಯಿತು



ಪಾಕಿಸ್ತಾನದ ಪ್ರಜೆ ಮತ್ತು ಲಷ್ಕರ್- ಎ- ತಯ್ಯಬಾದ ನಾಯಕ ಹಫೀಜ್ ಸಯೀದ್‌ನ ಸಂಬಂಧಿ ಅಬ್ದುಲ್ ರೆಹಮಾನ್ ಮಕ್ಕಿಯನ್ನು ವಿಶ್ವಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಭಯೋತ್ಪಾದಕರ ಪಟ್ಟಿಗೆ ಕೊನೆಗೂ ಸೇರಿಸಲಾಗಿದೆ. ಆತ, ಮುಂಬೈ ಮೇಲೆ 26/11ರಂದು ದಾಳಿ ನಡೆಸಿ ನೂರಾರು ನಾಗರಿಕರನ್ನು ಹತ್ಯೆ ಮಾಡಿದ್ದರ ಹೊಣೆಗಾರ. ಚೀನಾ ತನ್ನ ಪಟ್ಟು ಸಡಿಲಿಸಿತು, ಭಾರತಕ್ಕೆ ಭರ್ಜರಿ ಜಯ ಆಯಿತು!

ಶೇಷಪಾಲ್ ವೈದ್, ನಿವೃತ್ತ ಡಿಜಿಪಿ, ಜಮ್ಮು ಮತ್ತು ಕಾಶ್ಮೀರ

ಕಿಡಿನುಡಿ



ಆಕ್ಸ್‌ಫ್ಯಾಮ್ ಸಿದ್ಧಪಡಿಸಿರುವ ಅಸಮಾನತೆ ಕುರಿತ ವಾರ್ಷಿಕ ವರದಿಯು ಮನಸ್ಸನ್ನು ಕಲಕುವಂತಿದೆ. ಕಳೆದ ಎರಡು ವರ್ಷಗಳಲ್ಲಿ ಅಸಮಾನತೆಯು ತೀವ್ರವಾಗಿ ಹೆಚ್ಚಾಗಿದೆ. ಭಾರತದ ಶೇಕಡ 1ರಷ್ಟು ಜನ ಈಗ ದೇಶದ ಶೇಕಡ 40.5ರಷ್ಟು ಸಂಪತ್ತಿನ ಒಡೆತನ ಹೊಂದಿದ್ದಾರೆ. ಇದನ್ನು ಸರಿಪಡಿಸುವಂತಹ ಹಣಕಾಸು ನೀತಿಯೊಂದು ನಮಗೆ ಬೇಕು.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

25 ವರ್ಷಗಳ ಹಿಂದೆ

ಭಾನುವಾರ, 18-1-1998

• **ಬಿಜೆಪಿ ವಿರುದ್ಧ ಎಚ್ಚರಕ್ಕೆ ಸೋನಿಯಾ ಕರೆ**

ಪಣಜಿ, ಜ. 17– ‘ಅನಾದಿ ಕಾಲದಿಂದಲೂ ಕಾಪಾಡಿಕೊಂಡಿರುವ ಮೂಲಭೂತ ಮೌಲ್ಯ, ಸಿದ್ಧಾಂತ ಹಾಗೂ ಜಾತ್ಯತೀತತೆ ಒಂದು ಕಡೆ ಹಾಗೂ ಧಾರ್ಮಿಕ ಭಾವನೆಗಳ ದುರುಪಯೋಗ ಇನ್ನೊಂದು ಕಡೆ ಪ್ರಸಕ್ತ ಚುನಾವಣೆಯಲ್ಲಿ ಮುಖಾಮುಖಿ ಸಂಘರ್ಷಕ್ಕೆ ಇಳಿದಿವೆ. ಆದಕಾರಣ ದೇಶದ ಭವಿಷ್ಯದ ದೃಷ್ಟಿಯಿಂದ ಈ ಚುನಾವಣೆ ಅತ್ಯಂತ ಕ್ಲಿಷ್ಟಕರ’ ಎಂದು ಕಾಂಗ್ರೆಸ್ ಪಕ್ಷದ ಪ್ರಚಾರದ ಪ್ರಮುಖರಾದ ಸೋನಿಯಾ ಗಾಂಧಿ ಹೇಳಿದ್ದಾರೆ.

‘ಸೌಹಾರ್ದ ವಾತಾವರಣ ಹಾಗೂ ಅಭಿವೃದ್ಧಿ ಬಯಸುವ ಸುಭದ್ರತೆ ಪರವಾದ ಶಕ್ತಿಗಳು ಹಾಗೂ ಧಾರ್ಮಿಕ ಭಾವನೆಗಳ ಕಿಚ್ಚು ಹಬ್ಬಿಸಿ ಯಾವುದೇ ರೀತಿಯಿಂದಾದರೂ ಸರಿಯೆ ಅಧಿಕಾರ ಹಿಡಿಯಬೇಕೆಂಬ ಶಕ್ತಿಗಳ ನಡುವೆ ಜನರು ಆಯ್ಕೆ ಮಾಡಿಕೊಳ್ಳಬೇಕಿದೆ. ಈ ಶಕ್ತಿಗಳ ಬಗ್ಗೆ ಜನರು ಎಚ್ಚರ ವಹಿಸಬೇಕು’ ಎಂದು ಇಲ್ಲಿನ ಆಜಾದ್ ಮೈದಾನದ ತಮ್ಮ ಚುನಾವಣಾ ಪ್ರಚಾರ ಭಾಷಣದಲ್ಲಿ ಸೋನಿಯಾ ನುಡಿದರು.

‘ಕನಿಷ್ಠ ಮೂಲಭೂತ ಅಗತ್ಯಗಳಾದ ನೀರು, ವಿದ್ಯುತ್ ಮತ್ತು ಆಹಾರ ದೊರಕುವ ವಾತಾವರಣ ಕಲ್ಪಿಸುವ ಮಾನವಂತ ಬದುಕು ಭಾರತದ ಬಡವರ ಹಕ್ಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿದ್ಯೆ, ಉದ್ಯೋಗ, ಆರೋಗ್ಯ ಮತ್ತು ಆರ್ಥಿಕ ಪ್ರಗತಿ ಎಲ್ಲರ ಹಕ್ಕು’ ಎಂದು ಪ್ರತಿಪಾದಿಸಿದರು.

• **ಸಂಪನ್ಮೂಲ ಸದ್ಬಳಕೆಗೆ ಕಲಾಂ ಕರೆ**

ಧಾರವಾಡ, ಜ. 17– ನೈಸರ್ಗಿಕ ಸಂಪನ್ಮೂಲಗಳು ಮತ್ತು ಬೌದ್ಧಿಕ (ಮಾನವ) ಶಕ್ತಿಗಳನ್ನು ಯೋಜಿತವಾಗಿ ಬಳಸಿದರೆ ಮುಂದಿನ ಎರಡು ದಶಕಗಳಲ್ಲಿ ಭಾರತ ‘ಆರ್ಥಿಕ ಶಕ್ತಿ’ಯಾಗಿ ಹೊರಹೊಮ್ಮುವ ದೃಢ ವಿಶ್ವಾಸವನ್ನು ಕೇಂದ್ರ ಸರ್ಕಾರದ ರಕ್ಷಣಾ ಸಲಹೆಗಾರ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ವ್ಯಕ್ತಪಡಿಸಿದರು.

ಧಾರವಾಡದಲ್ಲಿ ಇಂದು ನಡೆದ ಕರ್ನಾಟಕ ವಿಶ್ವವಿದ್ಯಾಲಯದ 48ನೇ ಘಟಿಕೋತ್ಸವ ಭಾಷಣ ಮಾಡಿದ ಅವರು, ತಂತ್ರಜ್ಞಾನ ಅಭಿವೃದ್ಧಿ, ಔದ್ಯೋಗಿಕ ಅವಕಾಶ ಮತ್ತು ಸೌಲಭ್ಯಗಳು, ಆರ್ಥಿಕ ಬೆಳವಣಿಗೆ, ಸಾಮಾಜಿಕ ಏಕತೆ, ನೆಮ್ಮದಿ ಮತ್ತು ಸುಖ ಸಂತೋಷಗಳಿಂದ ತುಂಬಿ ತುಳುಕುವ ನಾಳಿನ ಭಾರತವನ್ನು ನಿರ್ಮಾಣ ಮಾಡುವ ದೊಡ್ಡ ಹೊಣೆಗಾರಿಕೆ ನಮ್ಮೆಲ್ಲರ ಮೇಲೆ ಇದೆ ಎಂದು ನುಡಿದರು.

50 ವರ್ಷಗಳ ಹಿಂದೆ

ಗುರುವಾರ, 18-1-1973

• **ಜಮೀನು ಹೊಂದಿರಲು ವಾಸ ಮತ್ತು ಆದಾಯ ಮಿತಿ ನಿರ್ಬಂಧ ಇಲ್ಲ: ಕಾಂಗ್ರೆಸ್ ತೀರ್ಮಾನ**

ಬೆಂಗಳೂರು, ಜ. 17– ಸ್ವಂತ ವ್ಯವಸಾಯ ಮಾಡುವವರು ಜಮೀನಿನ 16 ಕಿಲೊ ಮೀಟರ್ ಒಳಗೆ ವಾಸಿಸಬೇಕೆಂಬ ನಿರ್ಬಂಧವನ್ನು ಕೈಬಿಡಲು ಇಂದು ನಡೆದ ವಿಧಾನಮಂಡಲದ ಕಾಂಗ್ರೆಸ್ ಪಕ್ಷದ ಸಭೆ ಸರ್ವಾನುಮತದಿಂದ ತೀರ್ಮಾನಿಸಿತೆಂದು ತಿಳಿದುಬಂದಿದೆ.

ವಾರ್ಷಿಕ ಆದಾಯ 12,000 ರೂಪಾಯಿಗಿಂತ ಹೆಚ್ಚು ಇರುವ ಜನರು ಜಮೀನು ಪಡೆಯಲು ಇದ್ದ ನಿರ್ಬಂಧವನ್ನು ಮಾರ್ಪಡಿಸಿ, ಈ ನಿರ್ಬಂಧ ಮುಂದೆ ಜಮೀನು ಪಡೆಯುವ ಸಂದರ್ಭಗಳಿಗೆ ಅನ್ವಯಿಸಬೇಕೆಂದು ತೀರ್ಮಾನಿಸಿತೆಂದು ಗೊತ್ತಾಗಿದೆ.

• **ಆಂಧ್ರ ಸಂಪುಟ ರಾಜೀನಾಮೆ**

ಹೈದರಾಬಾದ್, ಜ. 17– ಆಂಧ್ರ ಮುಖ್ಯಮಂತ್ರಿ ಪಿ.ವಿ. ನರಸಿಂಹ ರಾವ್ ಅವರು ಇಂದು ಸಂಜೆ ರಾಜ್ಯಪಾಲರಿಗೆ ತಮ್ಮ ಸಂಪುಟದ ರಾಜೀನಾಮೆ ಸಲ್ಲಿಸಿದರು.


ಆದರೆ ಬದಲಿ ವ್ಯವಸ್ಥೆ ಮಾಡುವವರೆಗೂ ಅಧಿಕಾರದಲ್ಲಿರುವಂತೆ ರಾಜ್ಯಪಾಲರು ರಾವ್ ಅವರನ್ನು ಪ್ರಾರ್ಥಿಸಿದರು.

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರವನ್ನು ಇದಕ್ಕೆ ಮುಂಚೆ ರಾವ್ ಅವರು ಸಂಪುಟದ ಸಭೆಯಲ್ಲಿ ಪ್ರಕಟಿಸಿದರು.

ನವದೆಹಲಿ ವರದಿ: ಆಂಧ್ರಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಗುರುವಾರ ಅಧಿಕೃತವಾಗಿ ಘೋಷಿಸುವ ನಿರೀಕ್ಷೆ ಇದೆ.

ನೆರೆಯ ಶ್ರೀಲಂಕಾ ಮತ್ತು ಪಾಕಿಸ್ತಾನದ ಸದ್ಯದ ಪರಿಸ್ಥಿತಿಯಲ್ಲಿ ನಮಗೂ ಪಾಠವಿದೆ

ಪಾಕಿಸ್ತಾನದ ದಿವಾಳಿ ಸನ್ನಿಹಿತವೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರ ನಸೀಬು ಸರಿ ಇದ್ದಂತಿಲ್ಲ. ಹಿಂದಿನ ಏಪ್ರಿಲ್ ತಿಂಗಳಿನಲ್ಲಿ ಪಾಕಿಸ್ತಾನದ ರಾಜಕೀಯ ವಲಯದಲ್ಲಿ ಕ್ಷಿಪ್ರ ನಾಟಕೀಯ ಬೆಳವಣಿಗೆಗಳು ನಡೆದು, ಇಮ್ರಾನ್ ಖಾನ್ ಪ್ರಧಾನಿ ಪಟ್ಟದಿಂದ ಕೆಳಗಿಳಿದು ಶಹಬಾಜ್ ಷರೀಫ್ ಅವರಿಗೆ ದಾರಿ ಮಾಡಿಕೊಟ್ಟದ್ದೇನೋ ಖರೆ. ಆದರೆ ಮಾಜಿ ಕ್ರಿಕೆಟಿಗ, ವೇಗದ ಬೌಲರ್ ಇಮ್ರಾನ್ ಖಾನ್ ರಾಜಕೀಯವಾಗಿ ಶಹಬಾಜ್ ಅವರತ್ತ ರಭಸದಿಂದ ಚೆಂಡನ್ನು ತೂರಿಬಿಡುತ್ತಲೇ ಬಂದರು.

ಅವೆಲ್ಲವೂ ಒಂದು ಹಂತಕ್ಕೆ ಮುಗಿಯಿತು ಎನ್ನುವಷ್ಟರಲ್ಲಿ ಅಪ್ಪಳಿಸಿದ ಪ್ರಕೃತಿ ವಿಕೋಪವು ಕೈಗೆ ಬರಬೇಕಿದ್ದ ಬೆಳೆಯನ್ನು ನುಂಗಿಹಾಕಿತು. ಆಹಾರದ ಅಭಾವ ಕಾಡತೊಡಗಿತು. ಎಷ್ಟರಮಟ್ಟಿಗೆ ಎಂದರೆ, ಇದೀಗ ಅಲ್ಲಿನ ಬಡವರು ಒಂದಿಷ್ಟು ಗೋಧಿ ಸಿಕ್ಕರೆ ಸಾಕು, ಪಾವು ಬೇಳೆ ಸಿಕ್ಕರೆ ನಾಲ್ಕು ದಿನ ಬದುಕು ನಡೆದೀತು ಎಂದು ಕಾದು ನಿಂತಿದ್ದಾರೆ. ಗೋಧಿ ಮೂಟೆಗಳನ್ನು ಹೊತ್ತ ಸರ್ಕಾರಿ ವಾಹನ ಬರುತ್ತಿದ್ದಂತೆಯೇ ಅದಕ್ಕೆ ಮುತ್ತಿಗೆ ಹಾಕುತ್ತಿದ್ದಾರೆ. ಒಂದು ಮೂಟೆಗೆ ಹತ್ತಾರು ಕೈಗಳು ಸೇರಿ ಜಟಾಪಟಿ ನಡೆಯುತ್ತಿರುವ ಚಿತ್ರಗಳು ಪ್ರಕಟವಾಗುತ್ತಿವೆ. ಪ್ರಧಾನಿ ಷರೀಫ್ ಮತ್ತು ಸೇನಾ ಮುಖ್ಯಸ್ಥ ಸೈಯದ್ ಮುನೀರ್ ಗೋಣು ಬಗ್ಗಿಸಿ ಸಹಾಯಕ್ಕಾಗಿ ಇಸ್ಲಾಮಿಕ್ ರಾಷ್ಟ್ರಗಳ ಕದ ಬಡಿಯುತ್ತಿದ್ದಾರೆ.


ಹಾಗಂತ ಪಾಕಿಸ್ತಾನ ಆರ್ಥಿಕವಾಗಿ ದುಃಸ್ಥಿತಿಗೆ ತಲುಪಿರುವುದು ಇದು ಮೊದಲೇನಲ್ಲ. ಈ ಎಪ್ಪತ್ತೈದು ವರ್ಷಗಳಲ್ಲಿ ಅದು ಇತರ ದೇಶಗಳ ಸಹಾಯಧನಕ್ಕಾಗಿ ನಾಲ್ಕಾರು ಬಾರಿ ಕೈವೊಡ್ಡಿ ನಿಂತಿದೆ. ದಿವಾಳಿ ಅಂಚಿಗೆ ಹೋಗಿದ್ದೂ ಇದೆ. ಸೌದಿ ಅರೇಬಿಯಾ ಒಂದಿಷ್ಟು ವರ್ಷಗಳ ಕಾಲ ಪಾಕಿಸ್ತಾನದ ಕಿಸೆ ಬರಿದಾಗದಂತೆ ನೋಡಿಕೊಂಡಿತು. ತರಬೇತಿ ಹೊಂದಿದ ಸೇನೆಯ ಜೊತೆಗೆ ಅಣ್ವಸ್ತ್ರವನ್ನು ಹೊಂದಿರುವ ಪಾಕಿಸ್ತಾನ ತನ್ನ ರಕ್ಷಣೆಗೆ ಬೇಕಾದೀತು ಎಂಬ ಲೆಕ್ಕಾಚಾರದ ಜೊತೆಗೆ, ಇಸ್ಲಾಮಿಕ್ ರಾಷ್ಟ್ರ ಎಂಬ ಮತೀಯ ಮಮಕಾರದಿಂದ ಪಾಕಿಸ್ತಾನದ ಆರ್ಥಿಕತೆ ಕುಸಿದಾಗಲೆಲ್ಲಾ ಆಸರೆಗೆ ಸೌದಿ ಅರೇಬಿಯಾ ತನ್ನ ಭುಜ ಒಡ್ಡಿತ್ತು.

ಯಾವಾಗ ಅಮೆರಿಕದ ಅವಳಿ ಕಟ್ಟಡದ ಮೇಲೆ ದಾಳಿ ನಡೆದು ಆ ದೇಶ ‘ಭಯೋತ್ಪಾದನೆಯ ವಿರುದ್ಧ ಸಮರ’ ಘೋಷಿಸಿ ಅಫ್ಗಾನಿಸ್ತಾನಕ್ಕೆ ಬಂದಿಳಿಯಿತೋ, ಆಗ ಪಾಕಿಸ್ತಾನಕ್ಕೆ ಡಾಲರ್ ಥೈಲಿ ಕಾಣಿಸಿತು. ಪಶ್ಚಿಮ ದೇಶಗಳಿಂದ ಪಡೆದಿದ್ದ ಸಾಲ ಮನ್ನಾ ಆಯಿತು. ಬಿನ್ ಲಾಡೆನ್‌ನನ್ನು ತನ್ನ ಒಡಲಿನಲ್ಲಿ ಪೋಷಿಸುತ್ತಲೇ, ಭಯೋತ್ಪಾದನೆಯ ವಿರುದ್ಧದ ಸಮರಕ್ಕೆ ಸಹಕಾರ ನೀಡುವ ನೆಪದಲ್ಲಿ ಅಮೆರಿಕದ ಡಾಲರ್ ಗಂಟನ್ನು ಪಾಕಿಸ್ತಾನ ಕರಗಿಸತೊಡಗಿತು. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ಬಳಿಕ ಪಾಕಿಸ್ತಾನದ ಈ ತಂತ್ರಕ್ಕೆ ಕಡಿವಾಣ ಬಿತ್ತು. ಅಫ್ಗಾನಿಸ್ತಾನದ ಉಸಾಬರಿ ಸಾಕು ಎಂದು ಅಮೆರಿಕ ನಿರ್ಧರಿಸಿದಾಗ ಪಾಕಿಸ್ತಾನಕ್ಕೆ ಮತ್ತೊಮ್ಮೆ ದಾರಿ ಕಾಣದಾಯಿತು.

ಹಾಗಾದರೆ ಪಾಕಿಸ್ತಾನದ ಈ ದೈನೇಸಿ ಸ್ಥಿತಿಗೆ ಕಾರಣವೇನು? ಭಾರತ ದ್ವೇಷವನ್ನು ಉಚ್ಛ್ವಾಸ ನಿಶ್ವಾಸ ಮಾಡುತ್ತಾ, ತನ್ನ ಸೇನೆಗೆ ಶಕ್ತಿ ತುಂಬುವ ಕಡೆಗೆ ಗಮನ ಕೊಟ್ಟ ಪಾಕಿಸ್ತಾನವು ನೇರ ಹಣಾಹಣಿಯಲ್ಲಿ ಹಿನ್ನಡೆಯಾದಾಗ ಭಯೋತ್ಪಾದನೆ ಎಂಬ ಅಡ್ಡದಾರಿ ಹಿಡಿಯಿತು ಮತ್ತು ತನ್ನೆಲ್ಲಾ ಶಕ್ತಿಯನ್ನು ಆ ದಿಸೆಯಲ್ಲಿ ಬಳಸಿತು. ಆರ್ಥಿಕ ಶಿಸ್ತು ರೂಢಿಸಿಕೊಳ್ಳುವುದನ್ನು, ಅಗತ್ಯ ವಸ್ತುಗಳ ವಿಷಯದಲ್ಲಿ ಸ್ವಾವಲಂಬನೆ ಸಾಧಿಸುವುದನ್ನು ಮರೆಯಿತು. ಆಮದು ಮಾಡಿಕೊಳ್ಳುವ ಉತ್ಪನ್ನಗಳ ದೇಶೀಯ ಲಭ್ಯತೆಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅಧಿಕಾರಕ್ಕೆ ಬಂದ ಪಕ್ಷಗಳು ಕಲ್ಯಾಣ ಯೋಜನೆಗಳ ಮೂಲಕ ಜನರ ಒಲವು ಹಿಡಿದಿಟ್ಟುಕೊಳ್ಳಲು ಸಬ್ಸಿಡಿಗಳನ್ನು ಹೆಚ್ಚಿಸಿದವು. ಖಜಾನೆಯ ಮೇಲೆ ಹೊರೆ ಅಧಿಕಗೊಂಡಿತು.

ಈ ನಡುವೆ ಪ್ರಾಂತೀಯ ಹಿತಾಸಕ್ತಿಯ ದೃಷ್ಟಿಯಿಂದ ಪಾಕಿಸ್ತಾನದ ಮೂಗಿಗೆ ಚೀನಾ ತುಪ್ಪ ಸವರಿತು. ಮೂಲಸೌಕರ್ಯ ಯೋಜನೆಯ ಅಭಿವೃದ್ಧಿಗೆ ಸಾಲವನ್ನು ಮೊಗೆಮೊಗೆದು ನೀಡಿತು. ವರಮಾನ ತರದ ಸೇತುವೆಗಳು, ರೈಲ್ವೆ ಲೈನ್ ಯೋಜನೆಗಳು ಆರಂಭವಾದವು. ಅಭಿವೃದ್ಧಿಯ ಗುಂಗಿನಲ್ಲಿ ಸಾಲ ತಂದು ಈ ಯೋಜನೆಗಳನ್ನು ಆರಂಭಿಸಿದ ಪಾಕಿಸ್ತಾನ, ಇವುಗಳಿಂದ ಗಳಿಸಬಹುದಾದ ವರಮಾನ ಎಷ್ಟು ಎಂದು ಅಂದಾಜಿಸುವ ಕೆಲಸ ಮಾಡಲಿಲ್ಲ. ಚೀನಾ-ಪಾಕಿಸ್ತಾನ ಎಕನಾಮಿಕ್ ಕಾರಿಡಾರ್ (ಸಿಪಿಇಸಿ) ಯೋಜನೆ ಸಾಲದ ಹೊರೆಯನ್ನು ಇನ್ನಷ್ಟು ಹೆಚ್ಚಿಸಿತು. ಪಾಕಿಸ್ತಾನದ ಒಟ್ಟು ಸಾಲದ ಪೈಕಿ ಚೀನಾದಿಂದ ಪಡೆದ ಸಾಲ ಶೇಕಡ 30 ದಾಟಿತು.

ಪರಿಸ್ಥಿತಿ ಬಿಗಡಾಯಿಸಿದಾಗ ಇಮ್ರಾನ್ ಖಾನ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ (ಐಎಂಎಫ್) ಪಾರುಗಾಣಿಕೆಗೆ ಕೈ ಒಡ್ಡಿದರು. ಮೊದಲ ಕಂತಿನ ಹಣ ಬಂತು. ಆದರೆ ಅದರೊಂದಿಗೆ ಕೆಲವು ಷರತ್ತುಗಳೂ ಬಂದವು. ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ ಕ್ರಮ ಕೈಗೊಳ್ಳಬೇಕು, ಬ್ಯಾಂಕಿಂಗ್ ಮತ್ತು ತೆರಿಗೆ ನೀತಿಗಳಲ್ಲಿ ಸುಧಾರಣೆ ತರಬೇಕು, ವಿದ್ಯುತ್ ಸಬ್ಸಿಡಿಗಳನ್ನು ಹಂತಹಂತವಾಗಿ ತೆಗೆಯಬೇಕು ಎಂಬ ಷರತ್ತನ್ನು ಐಎಂಎಫ್ ವಿಧಿಸಿತು. ಆ ಷರತ್ತುಗಳನ್ನು ಪಾಲಿಸಲು ಪಾಕಿಸ್ತಾನ ತಿಣುಕುತ್ತಿರುವಾಗಲೇ ಕೊರೊನಾದ ಹೊಡೆತ ಬಿತ್ತು.



ಪಾಕಿಸ್ತಾನದಿಂದ ರಫ್ತಾಗುವ ಸಿಮೆಂಟ್, ಜವಳಿ, ಚರ್ಮ ಮತ್ತು ಕ್ರೀಡಾ ಸಾಮಗ್ರಿಗಳಿಗೆ ಬೇಡಿಕೆ ಕುಸಿಯಿತು. ಬಹುತೇಕ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಮತ್ತು ಅನಿವಾರ್ಯವಲ್ಲದ ವಸ್ತುಗಳನ್ನು ರಫ್ತು ಮಾಡುವ ಕಾರಣದಿಂದ, ರಫ್ತು ಮತ್ತು ಆಮದಿನ ನಡುವಿನ ಅಂತರ ಹೆಚ್ಚಿತು. ಫೈನಾನ್ಶಿಯಲ್ ಆ್ಯಕ್ಷನ್ ಟಾಸ್ಕ್ ಫೋರ್ಸ್ ಪಾಕಿಸ್ತಾನವನ್ನು ಕಂದುಪಟ್ಟಿಯಲ್ಲಿ ಇಟ್ಟ ಕಾರಣದಿಂದ ಆ ದೇಶವು ವಿದೇಶಿ ಹೂಡಿಕೆಯಿಂದ ವಂಚಿತವಾಯಿತು. ಹಳೆಯ ಸಾಲವನ್ನು ತೀರಿಸಲು ಹೊಸ ಸಾಲ ಮಾಡುತ್ತಾ, ಆ ಸಾಲವನ್ನು ತೀರಿಸಲು ಮತ್ತೊಂದು ಸಾಲದ ಮೂಲ ಹುಡುಕುತ್ತಾ ಸಾಲದ ಸುಳಿಗೆ ಸಿಲುಕಿತು.

ವ್ಯಾಪಾರದ ಕೊರತೆ ಮತ್ತು ಹೂಡಿಕೆಯ ಕುಸಿತದಿಂದ ವಿದೇಶಿ ವಿನಿಮಯ ಸಂಗ್ರಹ ಕರಗುತ್ತಾ ಬಂದಿತು. ವಿವಿಧ ದೇಶಗಳಿಂದ ಆಮದಾಗಿ ಬಂದರುಗಳಿಗೆ ಬಂದಿಳಿದ ಸಾಮಗ್ರಿಗಳಿಗೆ ಹಣ ಪಾವತಿಸುವುದು ಕಷ್ಟವಾಗತೊಡಗಿತು. ಆಹಾರದ ಅಭಾವ ಮತ್ತು ಜೀವರಕ್ಷಕ ಔಷಧಿಗಳ ಕೊರತೆ ಜನಜೀವನವನ್ನು ಕಷ್ಟಕ್ಕೆ ನೂಕಿತು. ವಿದ್ಯುತ್ ಅಭಾವ ನೀಗಿಸಲು ವ್ಯಾಪಾರ ಕೇಂದ್ರ, ಮದುವೆ ಛತ್ರ ಮತ್ತು ಹೋಟೆಲ್‌ಗಳು ರಾತ್ರಿ 10ಕ್ಕೆ ಚಟುವಟಿಕೆ ಸ್ಥಗಿತಗೊಳಿಸಬೇಕು ಎಂಬ ಆದೇಶವನ್ನು ಸರ್ಕಾರ ಹೊರಡಿಸಿತು.

ಇದೀಗ ಪ್ರಧಾನಿ ಶಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಸೈಯದ್ ಮುನೀರ್ ವಿವಿಧ ದೇಶಗಳಿಗೆ ಭೇಟಿಯಿತ್ತು, ಆರ್ಥಿಕ ಸಹಾಯ ಕೇಳುತ್ತಿದ್ದಾರೆ. ಜನವರಿ 9ರಂದು ಜಿನೀವಾದಲ್ಲಿ ವಿಶ್ವಸಂಸ್ಥೆಯ ಸಹಭಾಗಿತ್ವದಲ್ಲಿ ನಡೆದ ಸಭೆಯಲ್ಲಿ ಪ್ರಧಾನಿ ಶಹಬಾಜ್ ಮತ್ತೊಮ್ಮೆ ಸಹಾಯಕ್ಕಾಗಿ ಮೊರೆಯಿಟ್ಟಿದ್ದಾರೆ. ಜರ್ಮನಿ, ಫ್ರಾನ್ಸ್, ಕೆನಡಾ, ಡೆನ್ಮಾರ್ಕ್, ಐರೋಪ್ಯ ಒಕ್ಕೂಟ, ಚೀನಾ ಸೇರಿದಂತೆ ಹಲವು ದೇಶಗಳು ಸಹಾಯ ಮಾಡುವ ಭರವಸೆ ನೀಡಿವೆ. ಆದರೆ ಪರಿಸ್ಥಿತಿ ಸುಲಭವಿಲ್ಲ. ಮಾರ್ಚ್ ಮುಗಿಯುವುದರೊಳಗೆ ಪಾಕಿಸ್ತಾನ 8.3 ಶತಕೋಟಿ ಡಾಲರ್ ಸಾಲವನ್ನು ಮರುಪಾವತಿಸಬೇಕಿದೆ. ಇಲ್ಲವಾದರೆ ಶ್ರೀಲಂಕಾದ ಸ್ಥಿತಿಗೆ ಪಾಕಿಸ್ತಾನ ತಲುಪಲಿದೆ.

ಹಾಗಾದರೆ ಮುಂದೇನು? ಪಾಕಿಸ್ತಾನ ಬದಲಾಗಲೇ ಬೇಕಾದ ಅನಿವಾರ್ಯಕ್ಕೆ ಸಿಲುಕಿದೆ. ಭಾರತ ದ್ವೇಷವನ್ನು ಇನ್ನಾದರೂ ತ್ಯಜಿಸಿ, ವಾಣಿಜ್ಯಿಕ ಸಂಬಂಧವನ್ನು ಭಾರತದೊಂದಿಗೆ ಗಟ್ಟಿ ಮಾಡಿಕೊಳ್ಳಬೇಕಿದೆ. ಮಿಲಿಟರಿ ಮತ್ತು ಭಯೋತ್ಪಾದನಾ ಚಟುವಟಿಕೆಗೆ ಹಣ ಸುರಿಯುವುದನ್ನು ನಿಲ್ಲಿಸಬೇಕಿದೆ. ಅಗತ್ಯ ವಸ್ತುಗಳನ್ನು ರಫ್ತು ಮಾಡಬಲ್ಲ ಸಾಮರ್ಥ್ಯ ಬೆಳೆಸಿಕೊಳ್ಳಬೇಕಿದೆ. ಆರ್ಥಿಕ ಶಿಸ್ತು ರೂಪಿಸಿಕೊಳ್ಳಬೇಕಿದೆ. ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಂಡರಷ್ಟೇ ವಿದೇಶಿ ಬಂಡವಾಳ ಬರುತ್ತದೆ. ಆದರೆ ಚುನಾವಣೆ ಎದುರಿರುವಾಗ ಭಾರತದೊಂದಿಗೆ ಸ್ನೇಹ ಮತ್ತು ಆರ್ಥಿಕ ಶಿಸ್ತುಕ್ರಮಗಳನ್ನು ಪಾಕಿಸ್ತಾನದಿಂದ ನಿರೀಕ್ಷಿಸಲು ಸಾಧ್ಯವೇ?

ಅದಿರಲಿ, ನಮ್ಮ ನೆರೆಯ ಶ್ರೀಲಂಕಾ ಮತ್ತು ಪಾಕಿಸ್ತಾನದ ಸದ್ಯದ ಪರಿಸ್ಥಿತಿಯಲ್ಲಿ ನಮಗೂ ಪಾಠವಿದೆ. ಚುನಾವಣೆಯ ಹೊಸ್ತಿಲಿನಲ್ಲಿ ಹೊರಡುವ ಸಬ್ಸಿಡಿ ಹೆಚ್ಚಳದ, ಉಚಿತ ಕೊಡುಗೆಗಳ ಆಶ್ವಾಸನೆಗಳನ್ನು, ಅಭಿವೃದ್ಧಿಯ ವ್ಯಾಖ್ಯಾನವನ್ನು ನಾವು ಎಚ್ಚರಿಕೆಯಿಂದಲೇ ನೋಡಬೇಕಿದೆ.

ಚುರುಮುರಿ



ವಿಮಾನ ಯಾ(ತ)ನ

• ಆನಂದ

‘**ದೆಹಲೀಗೆ** ವಿಮಾನದಲ್ಲೇ ಹೋಗಬೇಕಾ? ರೈಲಿನಲ್ಲಿ ಹೋಗಿ, ಸೇಫಾಗಿರುತ್ತೆ’.

‘ರೈಲು? ಮೈ ಗಾಡ್! 36 ಗಂಟೆ ಪ್ರಯಾಣ. ಕೊಟ್ಟದ್ದು ತಿನ್ನಬೇಕು. ಪ್ಲೇನ್ ಹಿಡಿದರೆ ಜುಂ ಅಂತ ಮೂರು ತಾಸು ಸಾಕು’.

‘ಆದರೆ ಇತ್ತೀಚೆಗೆ ಪ್ಲೇನ್ ಪ್ರಯಾಣ ರಿಸ್ಕಿ’.

‘ನನಗೂ ಗೊತ್ತು. ಆದರೆ ಇಂಪಾರ್ಟೆಂಟ್ ಮೀಟಿಂಗ್ ಅಂದ ಮೇಲೆ ಹೋಗಲೇಬೇಕಲ್ಲವೆ? ರೈಲಿನಲ್ಲಿ ಯಾಕೆ ಬಂದೆ ಅಂತ ಕೇಳ್ತಾರೆ’.

‘ಅದ್ಸರಿ. ಈ ಸಲ ನಾನು ಹೇಳಿದ ಹಾಗೆ ನಡಕೊಳ್ಳಿ’.

‘ಸರಿ ಹೇಳು...’

‘ಏರ್‌ಪೋರ್ಟಿಗೆ ಎಂಟರ್ ಆಗುವಾಗ ಸೆಕ್ಯುರಿಟಿ ಜತೆ ಹಿಂದೀಲೇ ಮಾತನಾಡಿ. ಇಲ್ಲದಿದ್ದರೆ ಅವರು ‘ನೀನು ಇಂಡಿಯನ್ನಾ?’ ಅಂತ ಕೇಳ್ತಾರೆ. ಹಾಗೇ ಸೆಕ್ಯುರಿಟಿ ಚೆಕ್ ಸಮಯದಲ್ಲಿ ಅಂಗಿ, ಸಾಕ್ಸು ಬಿಚ್ಚು ಅಂದರೆ ಬಿಚ್ಚಿ. ವಾದ ಮಾಡೋದಿಕ್ಕೆ ಹೋಗಬೇಡಿ’.

‘ಆಗಲಿ’.

‘ಆಮೇಲೆ ಫ್ಲೈಟ್ ಹತ್ತಿರ ಹೋಗುವಾಗ ಸರಿಯಾದ ಶಟಲ್ ಹತ್ತಿ. ಮೊನ್ನೆ ನೋಡಿ, ವ್ಯಾನ್‌ನಲ್ಲಿದ್ದರೂ ವಿಮಾನ ಹತ್ತೋದಿಕ್ಕೆ ಆಗಲೇ ಇಲ್ಲ. ಫ್ಲೈಟಿನಲ್ಲಿ ರೈನ್ ಕೋಟ್ ಹಾಕಿಕೊಂಡೇ ಇರಿ. ಹೇಳೋದಿಕ್ಕೆ ಆಗದು, ಯಾರಾದರೂ ಕೊ-ಪ್ಯಾಸೆಂಜರ್ ಟೈಟಾಗಿದ್ದು ಟಾಯ್ಲೆಟ್‌ಗೆ ಹೋಗೋ ಬದಲು ನಿಮ್ಮ ಕಡೆ ಬಂದರೆ?’.

‘ನಿಜ ನಿಜ...’

‘ಇತ್ತೀಚೆಗೆ ಪ್ಲೇನಿನೊಳಗೆ ಹೊಡೆದಾಟ ಬೇರೆ ಆಗ್ತಿದೆ. ಮೊನ್ನೆ ವಾಟ್ಸ್‌ಆ್ಯಪ್‌ನಲ್ಲಿ ನೋಡಿದ್ರಲ್ಲಾ ಹೇಗೆ ಹೊಡೀತಾ ಇದ್ದರು. ಪೊಲೀಸಿನವರು ಬಾಯಿ ಬಿಡಿಸೋದಿಕ್ಕೆ ಸ್ಟೇಶನ್ನಿನಲ್ಲಿ ಹೊಡೀತಾರಲ್ಲ ಹಾಗೇ ಇತ್ತು, ಅಲ್ವೆ? ಮತ್ತೆ ನೀವು ಅಂತಹ ಜಗಳ ತಂದೊಕೋಬೇಡಿ’.

‘ಇಲ್ಲ ಖಂಡಿತ ಇಲ್ಲ’.

‘ಅಂತಹ ಮಾರಾಮಾರಿ ಆಗ್ತಾ ಇದ್ದರೆ ನೀವು ಬಿಡಿಸೋದಿಕ್ಕೂ ಹೋಗ್ಬೇಡಿ’.

‘ನನಗ್ಯಾಕೆ ಅದರ ಉಸಾಬರಿ ಅಂತ ಇದ್ದುಬಿಡ್ತೇನೆ’.

‘ದೂರದಲ್ಲಿದ್ದರೆ ಮೊಬೈಲಿನಲ್ಲಿ ಅದನ್ನು ಸೆರೆಹಿಡೀರಿ. ಆಮೇಲೆ ನಾವು ವಾಟ್ಸ್‌ಆ್ಯಪ್‌ನಲ್ಲಿ ಶೇರ್ ಮಾಡಬಹುದು’.

‘ಓಕೆ’.

ಸಂಗತ

ರಸ್ತೆ ಸುರಕ್ಷೆ: ನಿರ್ಲಕ್ಷ್ಯ ಸಲ್ಲದು

ರಸ್ತೆ ಅಪಘಾತ ತಪ್ಪಿಸಲು ಮೂಲ ಸೌಕರ್ಯ ಹೇಗೆ ಮುಖ್ಯವೋ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವುದೂ ಅಷ್ಟೇ ಮುಖ್ಯ

• ಡಾ. ಕೆ.ಎಸ್.ಚೈತ್ರಾ


ಬೆಳಗಾವಿ ಬಳಿ ರಸ್ತೆ ಅಪಘಾತದಲ್ಲಿ ಮೂವರು ತರುಣರ ಮರಣ, ತುಮಕೂರಿನಿಂದ ತಿಪಟೂರಿಗೆ ಹೋಗುವ ಹೆಗ್ಗೆರೆ ವಲಯದಲ್ಲಿ ಭೀಕರ ಅಪಘಾತದಲ್ಲಿ ಮಡಿದ ಬೈಕ್ ಸವಾರರು... ಹೀಗೆ ಪತ್ರಿಕೆಗಳಲ್ಲಿ ನಿತ್ಯವೂ ಇಂತಹ ಒಂದಲ್ಲ ಒಂದು ಸುದ್ದಿ ಇರುವುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ವಿಶ್ವದಲ್ಲಿ ಅತಿ ಹೆಚ್ಚು ರಸ್ತೆ ಅಪಘಾತ ಸಂಭವಿಸುವ ದೇಶಗಳಲ್ಲಿ ಭಾರತವೂ ಒಂದು. ಅದರಲ್ಲೂ 2021ರ ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ನಮ್ಮ ಕರ್ನಾಟಕಕ್ಕೆ ಮೂರನೇ ಸ್ಥಾನ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ವಿಶ್ವದಾದ್ಯಂತ ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುವ ಹತ್ತು ಜನರಲ್ಲಿ ಒಬ್ಬರಾದರೂ ಭಾರತೀಯರಾಗಿರುತ್ತಾರೆ. ಈ ಅಪಘಾತಗಳಲ್ಲಿ ಸಾವಿಗೀಡಾದ ಹೆಚ್ಚಿನವರು ಹದಿನೆಂಟರಿಂದ ನಲವತ್ತು ವರ್ಷ ವಯಸ್ಸಿನವರು ಮತ್ತು ದ್ವಿಚಕ್ರ ವಾಹನ ಸವಾರರು ಎನ್ನುವುದೂ ಗಮನಾರ್ಹ! ಇದರ ತೀವ್ರತೆಯನ್ನು ಮನಗಂಡು ದೇಶದಾದ್ಯಂತ ರಸ್ತೆ ಸುರಕ್ಷತಾ ಕಾರ್ಯಕ್ರಮಗಳು ನಡೆಯುತ್ತವೆ. ಇದೇ ತಿಂಗಳ 11ರಿಂದ 17ರವರೆಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲಾಗಿದೆ. ಹೀಗಿದ್ದರೂ ಅಪಘಾತ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದಕ್ಕೆ ಕಾರಣಗಳು ನೂರಾರಿದ್ದರೂ ಪ್ರಮುಖ ಕಾರಣ ಅತಿವೇಗ!

ಯುವಜನರಿಗೆ ದ್ವಿಚಕ್ರ ವಾಹನಗಳು ಅಗತ್ಯದ ಜತೆಗೆ ಪ್ರತಿಷ್ಠೆಯೂ ಆಗಿವೆ. ಹರೆಯದ ಹುಮ್ಮಸ್ಸು, ಶಕ್ತಿ ತೋರುವ ಸಾಧನವೂ ಆಗಿವೆ. ಹೀಗಾಗಿ ಅತಿ ವೇಗವಾಗಿ ಗಾಡಿ ಚಲಾಯಿಸಿ ಇತರರ ಕಣ್ಣಲ್ಲಿ ದೊಡ್ಡವರಾಗುವ ಹಂಬಲ ಕೆಲವರಲ್ಲಿ ಇರುತ್ತದೆ. ಇದರ ಫಲವಾಗಿ ಹೆದ್ದಾರಿಗಳಲ್ಲಿ ವಿವಿಧ ರೀತಿಯ ಸ್ಟಂಟ್ ಮಾಡುತ್ತಾ, ಅದನ್ನು ಇತರರಿಂದ ಮೊಬೈಲ್ ಮೂಲಕ ದಾಖಲಿಸುವ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಆದರೆ ಥ್ರಿಲ್, ಲೈಕ್ ಪಡೆಯುವ ಭರದಲ್ಲಿ ರಸ್ತೆ ನಿಯಮ, ಸುರಕ್ಷಾ ಕ್ರಮಗಳನ್ನು ಗಾಳಿಗೆ ತೂರಿ ತಮ್ಮ ಬದುಕಿನ ಜತೆ ಇತರರ ಬಾಳಿನ ಜತೆಯೂ ಚೆಲ್ಲಾಟ ಆಡುತ್ತಿರುವುದು ದುಃಖಕರ.

ಇದರೊಂದಿಗೆ ನಗರಗಳಲ್ಲಿ ಕಂಡುಬರುವ ದ್ವಿಚಕ್ರ ವಾಹನ ಸವಾರರ ಅಪಾಯಕಾರಿ ವರ್ತನೆಯೆಂದರೆ ಲೇನ್ ಬದಲಾವಣೆ. ಎರಡು– ಮೂರು ಲೇನ್‌ಗಳಿರುವ ಪ್ರಮುಖ ರಸ್ತೆಗಳಲ್ಲಿ ಗಾಡಿ ಸಾಗುತ್ತಿರುತ್ತದೆ. ಹಿಂದೆ ಮುಂದೆ ನೋಡದೆ ಇನ್ನೊಂದು ಲೇನಿಗೆ ವಾಹನ ನುಗ್ಗಿಸುತ್ತಾರೆ. ಇದನ್ನು ಒಂದು ರೀತಿಯಲ್ಲಿ ಲೇನ್ ಹಾರುವಿಕೆ ಎನ್ನುವುದು ಸರಿ! ಹೀಗೆ ಮಾಡುವಾಗ ಇತರ ವಾಹನಗಳ ಗತಿ ಏನು?

ಇವೆಲ್ಲದರ ಪರಿಣಾಮ ಅಪಘಾತಗಳು. ಇತ್ತೀಚೆಗೆ ಹೆಚ್ಚುತ್ತಿರುವ ಮತ್ತೊಂದು ಪ್ರವೃತ್ತಿ ಆಂಬುಲೆನ್ಸ್ ಹಿಂಬಾಲಿಸುವುದು. ರಸ್ತೆ ನಿಯಮಗಳ ಪ್ರಕಾರ, ದೀಪಗಳನ್ನು ಬೆಳಗಿಸುತ್ತಾ, ಸೈರನ್ ಮೊಳಗಿಸುತ್ತಾ ಆಂಬುಲೆನ್ಸ್ ದಾರಿಯಲ್ಲಿ ಬಂದರೆ ಅದು ಆರೋಗ್ಯದ ತುರ್ತು ಪರಿಸ್ಥಿತಿಯನ್ನು ಸೂಚಿಸುತ್ತದೆ. ಹೀಗಾಗಿ ರಸ್ತೆಯಲ್ಲಿರುವ ಇತರ ವಾಹನಗಳು ಪಕ್ಕಕ್ಕೆ ಸರಿದುನಿಂತು ಆ ವಾಹನದ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಸಾಮಾನ್ಯವಾಗಿ ಬಹುಪಾಲು ಮಂದಿ ಇದನ್ನು ಮಾಡುತ್ತಾರೆ. ಏಕೆಂದರೆ ಅದು ಜೀವನ್ಮರಣದ ಪ್ರಶ್ನೆ. ದ್ವಿಚಕ್ರ ವಾಹನ ಸವಾರರೂ ಇದಕ್ಕೆ ಹೊರತಲ್ಲ. ಆದರೆ ಅದು ದಾಟಿ ಹೋಗುತ್ತಿದ್ದಂತೆ ಅದರ ಹಿಂದೆಯೇ ತಾವೂ ಹೋಗುವ ಸಕಲ ಪ್ರಯತ್ನಗಳನ್ನೂ ಕೆಲವರು ಮಾಡುತ್ತಾರೆ. ಕಾರಣ ಇಷ್ಟೇ, ಹೇಗೂ ಇತರರು ಜಾಗ ಬಿಟ್ಟಿದ್ದಾರಲ್ಲ, ತಾವೂ ಬೇಗ ತಲುಪಬಹುದು! ಆದರೆ ಎದುರಿನಿಂದ ಬರುವ, ಹಿಂದೆ ಇರುವ ವಾಹನಗಳು ಇದನ್ನು ನಿರೀಕ್ಷಿಸದೇ ಅನೇಕ ಬಾರಿ ಅಪಘಾತಗಳು ನಡೆಯುತ್ತಿವೆ. ಆಂಬುಲೆನ್ಸ್ ಅನ್ನು ಹಿಂಬಾಲಿಸುತ್ತಾ ಅದರೊಳಗೆ ಮಲಗುವ ಪರಿಸ್ಥಿತಿ ಎದುರಾಗಬಹುದು ಎನ್ನುವ ಎಚ್ಚರ ಮುಖ್ಯ.



ರಸ್ತೆ ಅಪಘಾತಗಳಲ್ಲಿ ತಲೆಗೆ ಪೆಟ್ಟು ಬೀಳುವ ಸಾಧ್ಯತೆ ಅತಿ ಹೆಚ್ಚು. ಹೀಗಾಗಿಯೇ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ಆದರೆ ಕೂದಲು ಹಾಳಾಗುತ್ತದೆ, ತಲೆಗೆ ಭಾರ, ಲುಕ್ ಇರುವುದಿಲ್ಲ ಎಂಬಂಥ ಕಾರಣ ನೀಡಿ, ಒಳ್ಳೆಯ ಗುಣಮಟ್ಟದ ಹೆಲ್ಮೆಟ್ ಬಿಟ್ಟು ಕೇವಲ ಅಲಂಕಾರಿಕ ವಸ್ತುವಿನಂತೆ ಹೆಲ್ಮೆಟ್ ಬಳಕೆ, ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸುವವರಲ್ಲಿ ಯುವಜನರೇ ಹೆಚ್ಚಿನವರು. ಇದರ ಜತೆಗೆ ವಾಹನ ಚಲಾಯಿಸುವಾಗ ಮೊಬೈಲ್‌ಗಳ ಬಳಕೆಯಂತೂ ಇದ್ದದ್ದೇ. ಅಕಸ್ಮಾತ್ ಸಂಚಾರ ಪೊಲೀಸರು ಕಣ್ಣಿಗೆ ಬಿದ್ದರೆ ಅವರಿಂದ ಹೇಗಾದರೂ ತಪ್ಪಿಸಿಕೊಳ್ಳಲು ಮತ್ತಷ್ಟು ವೇಗವರ್ಧನೆ, ಹಠಾತ್ತಾಗಿ ನಿಲ್ಲಿಸುವಿಕೆ ಇವೆಲ್ಲವೂ ಅಪಘಾತಕ್ಕೆ ಕಾರಣಗಳೇ!

ಅಸಮರ್ಪಕ ರಸ್ತೆಗಳು, ಅವೈಜ್ಞಾನಿಕ ರಸ್ತೆ ಉಬ್ಬುಗಳು, ಹೆಚ್ಚಿದ ಟ್ರಾಫಿಕ್, ಕಾಣದ ಟ್ರಾಫಿಕ್ ಚಿಹ್ನೆ, ಕಠಿಣವಾಗಿರದ ಕಾನೂನು ಇವೆಲ್ಲವೂ ರಸ್ತೆ ಅಪಘಾತಕ್ಕೆ ಕಾರಣ. ಹಾಗಾಗಿ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎನ್ನುವುದು ನ್ಯಾಯಯುತ ಬೇಡಿಕೆ. ಆದರೆ ವಾಹನ ಚಲಾಯಿಸುವವರೂ ತಮ್ಮ ಮತ್ತು ಇತರರ ಹಿತದೃಷ್ಟಿಯಿಂದ ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕು. ರಸ್ತೆಯಲ್ಲಂತೂ ನಿಧಾನವೇ ಪ್ರಧಾನ ಎಂಬುದನ್ನು ಯುವಜನ ಅರಿಯಬೇಕು.

ವಾಚಕರ ವಾಣಿ

ಸಂವಿಧಾನದ ಮೌಲ್ಯ ಎತ್ತಿಹಿಡಿಯಲಿ

ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ ರಾಜ್ಯಪಾಲ ಮತ್ತು ಆಡಳಿತಾರೂಢ ಪಕ್ಷದ ನಡುವಿನ ಸಂಘರ್ಷ ವಿಪರೀತಕ್ಕೆ ಹೋಗಿದೆ. ರಾಜ್ಯಪಾಲ ಮತ್ತು ಆಡಳಿತ ಪಕ್ಷದ ಮುಖಂಡರ ನಡುವೆ ಸಾಮರಸ್ಯ ಮಾಯವಾಗಿ ಮಾತುಗಳ ವಾಗ್ಯುದ್ಧವೇ ನಡೆಯುತ್ತಿದೆ. ಶಾಸನಸಭೆಯ ಅಂಗೀಕಾರ ಪಡೆದ ಕೆಲವು ಮಸೂದೆಗಳು ರಾಜ್ಯಪಾಲರ ಅಂಕಿತಕ್ಕಾಗಿ ತಿಂಗಳುಗಟ್ಟಲೆ ಕಾಯುವಂತಾಗಿರುವುದು ದುರದೃಷ್ಟಕರ ಬೆಳವಣಿಗೆ. ತಮಿಳುನಾಡು, ಪಶ್ಚಿಮ ಬಂಗಾಳ, ರಾಜಸ್ಥಾನ, ದೆಹಲಿ, ತೆಲಂಗಾಣದಂತಹ ರಾಜ್ಯಗಳಲ್ಲಿ ರಾಜ್ಯಪಾಲರು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ತಮ್ಮ ಅಧಿಕಾರದ ಎಲ್ಲೆಯನ್ನು ಮೀರಿದ್ದಾರೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ನಾಯಕರ ಮುಖವಾಣಿಯಂತೆ ಕಾರ್ಯನಿರ್ವಹಿಸುತ್ತಿರುವುದು ಸರಿಯಲ್ಲ. ರಾಜ್ಯಪಾಲರು ಸಾಂವಿಧಾನಿಕ ಮೌಲ್ಯವನ್ನು ಎತ್ತಿಹಿಡಿಯಬೇಕು.

ಪ.ಚಂದ್ರಕುಮಾರ ಗೌನಹಳ್ಳಿ, ಹಿರಿಯೂರು

ಒಂಟಿ ಮನೆ ಯೋಜನೆ: ಸುಳ್ಳು ಭರವಸೆ ಬೇಡ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಸ್ವಂತ ನಿವೇಶನ ಹೊಂದಿದವರು ಒಂಟಿ ಮನೆ ಯೋಜನೆಯಡಿ ₹ 5 ಲಕ್ಷ ಪಡೆಯಲು ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ. ಇದನ್ನೇ ನಂಬಿ ತಮ್ಮ ಗುಡಿಸಲು ಇಲ್ಲವೇ ಇರುವ ಸೂರನ್ನು ಒಡೆದುಹಾಕಿ ಪಾಯವನ್ನೋ ಬಾಗಿಲಿನವರೆಗೆ ಕಟ್ಟಡವನ್ನೋ ಸಾಲ ಸೋಲ ಮಾಡಿ ನಿರ್ಮಿಸಿ ಸುಮಾರು 3-4 ವರ್ಷಗಳಿಂದ ಹಣಕ್ಕಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿರುವವರು ಇದ್ದಾರೆ. ಅವರಿಗೆ ಬರಬೇಕಾದ ಹಣವೇ ಇನ್ನೂ ಬಿಡುಗಡೆ ಆಗಿಲ್ಲ, ಇನ್ನು ಹೊಸ ಅರ್ಜಿ ಪಡೆಯುವುದಾದರೂ ಏಕೆ? ಅದಕ್ಕಾಗಿ ಅವಧಿಯನ್ನು ವಿಸ್ತರಿಸುವುದಾದರೂ ಏಕೆ?

ಪೂರ್ತಿ ಸಾಲ ಮಾಡಿ ಮನೆ ಕೆಲಸ ಮುಗಿಸೋಣ ಎಂದುಕೊಂಡರೆ ಬಿಬಿಎಂಪಿ ನಿಯಮಗಳು ಒಪ್ಪುವುದಿಲ್ಲ. ಮನೆ ಕಟ್ಟಿಕೊಂಡರೆ ಎಲ್ಲಿ ಸಾಲ ಕೊಡುವುದಿಲ್ಲವೋ ಎಂಬ ಭಯ ಬೇರೆ. ಈ ಸಹಾಯಧನವನ್ನು ಪಡೆಯಲು ಲಂಚ ಕೊಡಬೇಕಾಗಿದೆ ಎಂಬ ಅರ್ಜಿದಾರರ ನೋವಿಗೆ ಸರ್ಕಾರ ಸ್ಪಂದಿಸಬೇಕಾಗಿದೆ. ಈಗಾಗಲೇ ಅರ್ಜಿ ಸಲ್ಲಿಸಿದವರ ಮನೆ ನಿರ್ಮಾಣಕ್ಕೆ ಬಿಬಿಎಂಪಿ ಮೊದಲು ಸಹಾಯಧನ ನೀಡಬೇಕು ಮತ್ತು ಅಮಾಯಕರಿಗೆ ಸುಳ್ಳು ಭರವಸೆ ನೀಡುವುದನ್ನು ಬಿಡಬೇಕು.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಉದ್ಯೋಗ ಅವಕಾಶಕ್ಕೆ ಸಿಗಲಿ ಆದ್ಯತೆ

ಶಿರಸಿಯಲ್ಲಿ ಪರಿಸರ ವಿಶ್ವವಿದ್ಯಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ತಮ್ಮ ಇತ್ತೀಚೆಗಿನ ಶಿರಸಿ ಪ್ರವಾಸದಲ್ಲಿ ಭರವಸೆ ನೀಡಿರುವುದು ಶ್ಲಾಘನೀಯ ಹೆಜ್ಜೆ. ಆದರೆ ಇದಕ್ಕೂ ಮೊದಲು, ಅಭಿವೃದ್ಧಿಯಲ್ಲಿ ನಾಲ್ಕು ದಶಕಗಳಷ್ಟು ಹಿಂದುಳಿದಿರುವ ಶಿರಸಿಯಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು ಸ್ಥಾಪನೆ ಆದ್ಯತೆಯಲ್ಲಿ ಆಗಬೇಕಾಗಿದೆ. ಉದ್ಯೋಗ ಅವಕಾಶ ಇಲ್ಲದೇ ಯುವಕರು ಹಿಂಡು ಹಿಂಡಾಗಿ ದೇಶ ವಿದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಶಿರಸಿ ಮತ್ತು ಸುತ್ತಲಿನ ಪ್ರದೇಶಗಳು ವೃದ್ಧಾಶ್ರಮಗಳು ಆಗುವುದನ್ನು ತಡೆಯಲು ಸಾಫ್ಟ್‌ವೇರ್ ಪಾರ್ಕುಗಳನ್ನು ಮತ್ತು ಹೊಸ ಉದ್ಯಮಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಶಿರಸಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು.

ರಮಾನಂದ ಶರ್ಮಾ, ಬೆಂಗಳೂರು

ಇಷ್ಟುದಿನ ಇರಲಿಲ್ಲವೇ ನೈತಿಕತೆಯ ಅಂಶ?

ಶಾಲೆಗಳಲ್ಲಿ ಮಕ್ಕಳಿಗೆ ನೈತಿಕ ಶಿಕ್ಷಣ ಬೋಧಿಸುವ ಕುರಿತು ಇತ್ತೀಚೆಗೆ ವಿಪರೀತ ಚರ್ಚೆಗಳು ನಡೆಯುತ್ತಿವೆ. ನೈತಿಕ ಶಿಕ್ಷಣದ ಬೋಧನೆಗೆ ಕೆಲ ಧರ್ಮಗ್ರಂಥಗಳ ತುಣುಕುಗಳನ್ನು ಬೋಧಿಸಿ ಮಕ್ಕಳಲ್ಲಿ ಅರಿವು ಮೂಡಿಸಬೇಕು ಎಂಬ ಮಾತು ಕೇಳಿಬರುತ್ತಿದೆ. ಹಾಗಿದ್ದರೆ ಇಷ್ಟುದಿನ ನಾವೆಲ್ಲಾ ಕಲಿತ ಶಿಕ್ಷಣದಲ್ಲಿ ನೈತಿಕತೆಯನ್ನು ಸಾರುವ ಅಂಶಗಳು ಇರಲಿಲ್ಲವೇ? ಅಥವಾ ಇದ್ದರೂ ಅದಕ್ಕೆ ಹೆಚ್ಚು ಒತ್ತು ಕೊಡಲಿಲ್ಲವೇ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಪ್ರತಿಯೊಂದು ವಿಷಯದಲ್ಲೂ ನೈತಿಕತೆಯನ್ನು ಸಾರುವಂತಹ ಅಂಶಗಳು ಇವೆ. ಅವುಗಳನ್ನು ಮಕ್ಕಳಿಗೆ ಬಿಡಿಸಿ ಹೇಳುವಂತಹ ಶಿಕ್ಷಕರು ಬೇಕೆ ವಿನಾ ಪ್ರತ್ಯೇಕ ನೈತಿಕ ಶಿಕ್ಷಣದ ಅಗತ್ಯವಿಲ್ಲ.

ಸಂತೋಷ್ ಕುಮಾರ್ ಎಲ್., ಹಿರಿಯೂರು

ಸಮಸ್ಯೆಗಳ ಮೂಲ ಮನಗಾಣಬೇಕು

ಬುಡಕಟ್ಟು ಸಮುದಾಯದ ಮಹಿಳೆಯರು ಹೆಚ್ಚು ಮಕ್ಕಳನ್ನು ಹೆರುವುದನ್ನು ಉತ್ತೇಜಿಸಲು ಸಿಕ್ಕಿಂ ರಾಜ್ಯದ ಮುಖ್ಯಮಂತ್ರಿ ಪ್ರೋತ್ಸಾಹಧನ ಘೋಷಿಸಿದ್ದಾರೆ ಎಂಬುದಾಗಿ ವರದಿಯಾಗಿದೆ (ಪ್ರ.ವಾ., ಜ. 17). ಈ ಹಿಂದೆ, ಹಿಂದೂ ಮಹಿಳೆಯರು ಹೆಚ್ಚು ಹೆಚ್ಚು ಮಕ್ಕಳನ್ನು ಹೆರುವಂತೆ, ಸಂಸಾರ ಪರಿತ್ಯಾಗಿಗಳಾದ ಹಿಂದೂ ಸಾಧು-ಸಂತರು ಕರೆ ಕೊಟ್ಟಿದ್ದು ವರದಿಯಾಗಿತ್ತು. ಕೆಲವರಿಗೆ ತಮ್ಮ ಬುಡಕಟ್ಟಿನ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಧಾವಂತವಿದ್ದರೆ, ಇನ್ನು ಕೆಲವರಿಗೆ ತಮ್ಮ ಧರ್ಮದ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಆತುರ.

ಇನ್ನು ಕೆಲವೇ ವರ್ಷಗಳಲ್ಲಿ ಭಾರತವು ಜನಸಂಖ್ಯೆಯಲ್ಲಿ ಚೀನಾ ದೇಶವನ್ನು ಹಿಂದಿಕ್ಕುವ ವರದಿಗಳು ಪ್ರಕಟವಾಗಿವೆ. ಜನರಿಗೆ ಆಹಾರ, ನೀರು, ಉದ್ಯೋಗ, ವಸತಿ, ಶಿಕ್ಷಣ, ವೈದ್ಯಕೀಯ ಸೌಲಭ್ಯದಂತಹ ಜೀವನ ಅವಶ್ಯಕ ಅಗತ್ಯಗಳನ್ನು ಪೂರೈಸಲು ಸರ್ಕಾರ ಪರದಾಡುತ್ತಿರುವಾಗ, ಹೆಚ್ಚು ಮಕ್ಕಳನ್ನು ಹೆರುವಂತೆ ಕರೆ ಕೊಡುವ ಅಗತ್ಯ ಖಂಡಿತ ಇಲ್ಲ. ಎಲ್ಲ ಸಮಸ್ಯೆಗಳ ಮೂಲ ಕಾರಣ ಜನಸಂಖ್ಯೆಯ ಹೆಚ್ಚಳ ಎಂಬುದನ್ನು ಮನಗಂಡು, ಬಹಳ ಹಿಂದಿನಿಂದಲೇ, ‘ಚಿಕ್ಕ ಸಂಸಾರ ಸುಖಿ ಸಂಸಾರ’ ಎಂಬ ಘೋಷವಾಕ್ಯವನ್ನು ಮುಂದಿಟ್ಟು, ಜನಸಂಖ್ಯೆ ನಿಯಂತ್ರಣಕ್ಕೆ ಸರ್ಕಾರ ಕೋಟ್ಯಂತರ ರೂಪಾಯಿಯನ್ನು ಖರ್ಚು ಮಾಡುತ್ತಿದೆ. ಹೀಗಿರುವಾಗ, ಈಗ ಇಂತಹ ಕರೆ ಕೊಡುವುದು ಅಥವಾ ಪ್ರೋತ್ಸಾಹಧನ ಘೋಷಿಸುವುದು ಒಂದು ಅಪರಾಧವೇ ಸರಿ. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಒಂದು ‘ಸಮಗ್ರ ರಾಷ್ಟ್ರೀಯ ಜನಸಂಖ್ಯಾ ನೀತಿ’ಯನ್ನು ರೂಪಿಸಿ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ವಿಮಾನ ಅವಘಡಗಳಿಂದ ನಲುಗಿದ ನೇಪಾಳ

ಪ್ರಜಾವಾಣಿ ವಾರ್ತೆ

ನೇಪಾಳದಲ್ಲಿ ಇದೇ ಭಾನುವಾರ ಅಪಘಾತಕ್ಕೀಡಾದ ಯೇತಿ ವಿಮಾನಯಾನ ಸಂಸ್ಥೆಯ ಎಟಿಆರ್72–500 ವಿಮಾನದಲ್ಲಿ ಪ್ರಯಾಣಿಸುತ್ತಿದ್ದ 72 ಜನರಲ್ಲಿ 70 ಜನರು ಮೃತಪಟ್ಟಿದ್ದಾರೆ. ಇದು 1992ರ ಬಳಿಕ ನೇಪಾಳದಲ್ಲಿ ನಡೆದ ಅತ್ಯಂತ ಭೀಕರ ವೈಮಾನಿಕ ಅವಘಡ ಎಂದು ದಾಖಲಾಗಿದೆ. ಈ ಅಪಘಾತ ನೇಪಾಳದ ಮಟ್ಟಿಗೆ ಹೊಸದೂ ಅಲ್ಲ, ಸುದೀರ್ಘ ಸಮಯದ ನಂತರ ನಡೆದದ್ದೂ ಅಲ್ಲ ಎಂಬುದು ವಾಸ್ತವ. ಕೇವಲ ಎಂಟು ತಿಂಗಳ ಹಿಂದೆಯಷ್ಟೇ ತಾರಾ ಏರ್ ಸಂಸ್ಥೆಯ ವಿಮಾನವು ಪತನವಾಗಿತ್ತು.

1946ರಿಂದ ಇಲ್ಲಿಯವರೆಗೆ 69 ವೈಮಾನಿಕ ಅವಘಡಗಳಿಗೆ ಹಿಮಾಲಯದ ಈ ಪುಟ್ಟ ದೇಶ ಸಾಕ್ಷಿಯಾಗಿದೆ. ಇವುಗಳಲ್ಲಿ 40 ಅಪಘಾತಗಳಲ್ಲಿ ಪ್ರಾಣಾಪಾಯ ಸಂಭವಿಸಿದೆ. ಉಳಿದ ಅವಘಡಗಳಲ್ಲಿ ಪ್ರಾಣಾಪಾಯ ಕೂದಲೆಳೆ ಅಂತರದಲ್ಲಿ ತಪ್ಪಿದೆ. ಆದರೆ, ವಿಮಾನಗಳು ಹಾಗೂ ವಿಮಾನ ನಿಲ್ದಾಣದ ರನ್‌ವೇಗಳು ಹಾನಿಗೊಂಡಿವೆ. ದೇಶದಲ್ಲಿ ಕಳೆದ 30 ವರ್ಷಗಳಲ್ಲಿ 27 ವಿಮಾನ ಅಪಘಾತಗಳು ಸಂಭವಿಸಿವೆ. ಈ ಪೈಕಿ 20 ಅಪಘಾತಗಳು ಕಳೆದ 10 ವರ್ಷಗಳಲ್ಲಿ ನಡೆದಿವೆ. ವಿಮಾನ ಅವಘಡಗಳಲ್ಲಿ ಇಲ್ಲಿಯವರೆಗೆ ನೇಪಾಳದ ಸುಮಾರು 600 ಮಂದಿ ಮೃತಪಟ್ಟಿದ್ದಾರೆ. 2000ನೇ ಇಸ್ವಿಯ ಬಳಿಕ ಮೃತಪಟ್ಟವರ ಸಂಖ್ಯೆ 350 ದಾಟಿದೆ.

1998ರಲ್ಲಿ ಸ್ಥಾಪನೆಯಾದ ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರವು ದೇಶದ ವಿಮಾನಯಾನ ವ್ಯವಸ್ಥೆಯನ್ನು ನಿರ್ವಹಿಸುತ್ತದೆ. ವಿಮಾನ ಪ್ರಯಾಣ ಸುರಕ್ಷತೆಗೆ ಹೆಚ್ಚು ಶ್ರಮ ವಹಿಸಿದ್ದರೂ ಅಂತರರಾಷ್ಟ್ರೀಯ ವಿಮಾನಯಾನ ಸುರಕ್ಷತಾ ಮಾನದಂಡಗಳನ್ನು ತಲುಪಲು ಆಗುತ್ತಿಲ್ಲ ಎಂಬುದು ವಾಸ್ತವ.


ಅತ್ಯಂತ ಅಪಾಯಕಾರಿ ರೀತಿಯಲ್ಲಿರುವ ಲುಕ್ಲಾ ವಿಮಾನ ನಿಲ್ದಾಣದ ರನ್‌ವೇ

ವೈಮಾನಿಕ ಸುರಕ್ಷತೆಯ ಕಾರಣ ಒಡ್ಡಿ, ತಮ್ಮ ವಾಯುಗಡಿ ಪ್ರವೇಶಿಸದಂತೆ ಐರೋಪ್ಯ ಒಕ್ಕೂಟ ದೇಶಗಳು ನೇಪಾಳದಿಂದ ಕಾರ್ಯಾಚರಣೆ ನಡೆಸುವ ವಿಮಾನಗಳಿಗೆ 2013ರಲ್ಲೇ ನಿರ್ಬಂಧ ವಿಧಿಸಿದ್ದವು. ಇಲ್ಲಿಯವರೆಗೂ ಈ ನಿರ್ಬಂಧವನ್ನು ತೆರವು ಮಾಡಿಸಲು ನೇಪಾಳದ ನಾಗರಿಕ ವಿಮಾನಯಾನ ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ಹಲವು ಬಾರಿ ಮನವಿ ಮಾಡಿದ್ದರೂ ಫಲ ಸಿಕ್ಕಿಲ್ಲ. ಸುರಕ್ಷತೆಯ ಮಾನದಂಡಗಳನ್ನು ಪೂರೈಸದ ಕಾರಣ, ಈ ನಿರ್ಬಂಧ ಮುಂದುವರಿದಿದೆ.

ರಾಜಧಾನಿ ಕಠ್ಮಂಡುವಿನಿಂದ ಪ್ರವಾಸಿ ನಗರ ಪೊಖರಾಗೆ ತೆರಳುವ ಮಾರ್ಗದಲ್ಲಿ ಪತನವಾದ ಯೇತಿ ಸಂಸ್ಥೆಯ ವಿಮಾನವು 15 ವರ್ಷಗಳಿಂದ ಸೇವೆಯಲ್ಲಿದೆ. ಕಾರ್ಯಾಚರಣೆಗೆ ಯೋಗ್ಯವಾಗಿದ್ದರೂ ಅಪಘಾತಕ್ಕೆ ಒಳಗಾಗಿರುವುದು ನಿರ್ವಹಣೆಯಲ್ಲಿರುವ ನ್ಯೂನತೆಯನ್ನು ತೋರಿಸುತ್ತದೆ. ಬಹುತೇಕ ವಿಮಾನ ಅಪಘಾತಗಳಲ್ಲಿ ನಿರ್ವಹಣೆಯ ಲೋಪವೇ ಎದ್ದು ಕಾಣುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

‘ಗಿರಿ–ಕಂದರಗಳದ್ದೇ ಸಮಸ್ಯೆ’

ಅತಿ ಹೆಚ್ಚು ವಿಮಾನ ಅಪಘಾತಗಳು ನಡೆದ ದೇಶಗಳಲ್ಲಿ ನೇಪಾಳ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ವಿಶ್ವದ ಅತ್ಯಂತ ಎತ್ತರದ 14 ಶಿಖರಗಳಲ್ಲಿ ಎಂಟು ಶಿಖರಗಳು ನೇಪಾಳದಲ್ಲೇ ಇವೆ. ಇವಲ್ಲದೆ, ಹಿಮದಿಂದ ಆವೃತವಾದ ಸಾವಿರಾರು ಪರ್ವತಗಳು ಮತ್ತು ಕಣಿವೆಗಳು ವಿಶ್ವದ ಎಲ್ಲೆಡೆಯಿಂದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಭೂಮಿ ಮೇಲಿನ ಸ್ವರ್ಗವೆಂಬಂತೆ ಕಾಣುವ ಈ ಗಿರಿ–ಕಂದರಗಳು, ವಿಮಾನಗಳು ಹೆಚ್ಚು ಅಪಘಾತಕ್ಕೆ ಈಡಾಗುವ ದೇಶ ಎಂಬ ಕುಖ್ಯಾತಿಯನ್ನೂ ನೇಪಾಳಕ್ಕೆ ತಂದುಕೊಟ್ಟಿವೆ. ನೇಪಾಳದಲ್ಲಿ ವಿಮಾನಯಾನ ಕಾರ್ಯಾಚರಣೆಯ ಸವಾಲುಗಳನ್ನು ಟ್ರಾವೆಲ್‌ನೇಪಾಳ್ ಸಂಸ್ಥೆಯ ಸುರಕ್ಷತಾ ಪರಿಶೋಧನಾ ವರದಿಯಲ್ಲಿ ದಾಖಲಿಸಲಾಗಿದೆ.

ನೇಪಾಳದ ಬಹುತೇಕ ನಗರಗಳು ಹಿಮಪರ್ವತಗಳ ಕಣಿವೆ ಪ್ರದೇಶಗಳಲ್ಲಿ ಇವೆ. ಇಕ್ಕಟ್ಟಾದ ಪ್ರದೇಶದಲ್ಲಿನ ವಿಮಾನ ನಿಲ್ದಾಣಗಳ ರನ್‌ವೇ ಬಹಳ ಚಿಕ್ಕವು. ದೊಡ್ಡ ವಿಮಾನಗಳು ಲ್ಯಾಂಡ್ ಆಗಲು ಮತ್ತು ಟೇಕ್‌ಆಫ್ ಆಗಲು ಅಗತ್ಯವಿರುವಷ್ಟು ದೊಡ್ಡ ರನ್‌ವೇಗಳ ನಿರ್ಮಾಣ ಸಾಧ್ಯವಿಲ್ಲ. ದೇಶದಲ್ಲೇ ಅತ್ಯಂತ ದೊಡ್ಡ ವಿಮಾನ ನಿಲ್ದಾಣ ಎನಿಸಿರುವ ಕಠ್ಮಂಡು ಮತ್ತು ಪೊಖರಾ ವಿಮಾನ ನಿಲ್ದಾಣಗಳಲ್ಲೂ ದೊಡ್ಡ ವಿಮಾನಗಳನ್ನು ಇಳಿಸಲು ಸಾಧ್ಯವಿಲ್ಲ. ಹೀಗಾಗಿ ನೇಪಾಳದ ಯಾವ ವಿಮಾನಯಾನ ಸಂಸ್ಥೆಯೂ ದೊಡ್ಡ ವಿಮಾನಗಳನ್ನು ಹೊಂದಿಲ್ಲ ಎಂಬುದನ್ನು ವರದಿಯಲ್ಲಿ ಗುರುತಿಸಲಾಗಿದೆ.

ನೇಪಾಳದ ಪ್ರತಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗುವ ಮುನ್ನ ವಿಮಾನಗಳು ಯಾವುದಾದರೂ ಒಂದು ಗಿರಿ–ಕಂದರದ ಮೂಲಕವೇ ಪ್ರವೇಶಿಸಬೇಕು. ಟೇಕ್‌ಅಫ್ ಸಂದರ್ಭದಲ್ಲೂ ಗಿರಿ–ಕಂದರಗಳ ಮೂಲಕವೇ ಆಗಸಕ್ಕೆ ಏರಬೇಕು. ಇಂತಹ ಗಿರಿ ಕಂದರಗಳು ತೀರಾ ನೇರವಾಗಿ ಏನೂ ಇಲ್ಲ. ಬದಲಿಗೆ ಲ್ಯಾಂಡ್ ಮತ್ತು ಟೇಕ್‌ಆಫ್ ಸಂದರ್ಭದಲ್ಲಿ ಕಂದರಗಳಲ್ಲೇ ವಿಮಾನಗಳು ಪದೇ–ಪದೇ ದಿಕ್ಕು ಬದಲಿಸಬೇಕಾಗುತ್ತದೆ. ಜೆಟ್ ಎಂಜಿನ್‌ನ ದೊಡ್ಡ ವಿಮಾನಗಳ ವೇಗ ಹೆಚ್ಚು ಇರುವುದರಿಂದ ಮತ್ತು ಅವುಗಳ ಗಾತ್ರ ದೊಡ್ಡದಿರುವ ಕಾರಣ ಅವುಗಳ ದಿಕ್ಕನ್ನು ಹೀಗೆ ಪದೇ ಪದೇ ಬದಲಿಸಲು ಸಾಧ್ಯವಿಲ್ಲ. ಈ ಸ್ವರೂಪದ ಹಾರಾಟ ಟರ್ಬೊಪ್ರಾಪ್ ಎಂಜಿನ್ ಇರುವ ಸಣ್ಣ ವಿಮಾನಗಳಿಂದ ಮಾತ್ರ ಸಾಧ್ಯ. ಹೀಗಾಗಿಯೇ ನೇಪಾಳದ ವಿಮಾನಯಾನ ಕಂಪನಿಗಳು ಸಣ್ಣ ವಿಮಾನಗಳನ್ನೇ ಖರೀದಿಸುತ್ತವೆ. ಕ್ಲಿಷ್ಟ ಸ್ವರೂಪದ ಹಾರಾಟಕ್ಕೆ ಇಂತಹ ವಿಮಾನಗಳು ಹೇಳಿಮಾಡಿಸಿದ್ದಾದರೂ ಅತ್ಯಾಧುನಿಕವಾದ ವ್ಯವಸ್ಥೆಗಳು ಇಂತಹ ವಿಮಾನಗಳಲ್ಲಿ ಇರುವುದಿಲ್ಲ. ಕ್ಲಿಷ್ಟವಾದ ಕಾರ್ಯಾಚರಣೆ ವೇಳೆ ಎಂಜಿನ್ ವೈಫಲ್ಯದಂತಹ ಸಮಸ್ಯೆಗಳು ಸಾಮಾನ್ಯ. ಇಂತಹ ವಿಮಾನಗಳ ಎಂಜಿನ್‌ಗೆ ಹಕ್ಕಿಗಳು ಬಡಿದರೂ ಅವು ವಿಫಲವಾಗಿ ಬಿಡುತ್ತವೆ. ಹೀಗಾಗಿ ಅಪಾಯದ ಸಾಧ್ಯತೆ ಹೆಚ್ಚು. ಆದರೆ, ನೇಪಾಳದಂತಹ ಭೌಗೋಳಿಕ ಪ್ರದೇಶಕ್ಕೆ ಇಂತಹ ವಿಮಾನಗಳೇ ಅನಿವಾರ್ಯ ಎಂದು ವರದಿಯಲ್ಲಿ ಹೇಳಲಾಗಿದೆ.

ನೇಪಾಳದ ಪಟ್ಟಣಗಳು ಮತ್ತು ವಿಮಾನ ನಿಲ್ದಾಣಗಳು ಸಮುದ್ರಮಟ್ಟದಿಂದ ಸರಾಸರಿ 2,600 ಮೀಟರ್ ಎತ್ತರದಲ್ಲಿವೆ. ಇಷ್ಟು ಎತ್ತರದ ಪ್ರದೇಶದಲ್ಲಿ ವಾತಾವರಣ ದಿಢೀರ್ ಬದಲಾವಣೆಯಾಗುತ್ತದೆ. ಇದರ ಜತೆಯಲ್ಲಿ ಐದಾರು ಸಾವಿರ ಮೀಟರ್ ಎತ್ತರದ ಪರ್ವತಗಳು ಇಂತಹ ಪಟ್ಟಣ–ವಿಮಾನ ನಿಲ್ದಾಣಗಳನ್ನು ಸುತ್ತುವರಿದಿವೆ. ಹೀಗಾಗಿ ಟೇಕ್‌ಆಫ್ ಆದ ವಿಮಾನ ನಿಲ್ದಾಣದ ಬಳಿ ಇದ್ದ ವಾತಾವರಣವು, ಲ್ಯಾಂಡ್ ಆಗುತ್ತಿರುವ ವಿಮಾನ ನಿಲ್ದಾಣದ ಬಳಿ ಇರುವುದಿಲ್ಲ. ವೇಗವಾಗಿ ಬೀಸುವ ಗಾಳಿ, ದಟ್ಟಮಂಜು–ಮೋಡ ಮುಸುಕಿದ ವಾತಾವರಣಗಳ ಕಾರಣ ವಿಮಾನದ ಏವಿಯಾನಿಕ್ಸ್ (ಎತ್ತರ, ವೇಗ, ದಿಕ್ಕು ಮೊದಲಾದ ಮಾಹಿತಿಗಳನ್ನು ನಿಖರವಾಗಿ ಒದಗಿಸುವ ವ್ಯವಸ್ಥೆ) ವ್ಯವಸ್ಥೆ ಕರಾರುವಾಕ್ಕಾಗಿ ಕೆಲಸ ಮಾಡುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಪೈಲಟ್‌ಗಳು ತಮ್ಮ ಕಣ್ಣಿಗೆ ಕಾಣುವ ದೃಶ್ಯಗಳ ಆಧಾರದಲ್ಲೇ ವಿಮಾನವನ್ನು ಹಾರಿಸಬೇಕಾಗುತ್ತದೆ. ಪೈಲಟ್‌ನ ಕಡೆಯಿಂದ ಆಗುವ ಸಣ್ಣ ತಪ್ಪು ದೊಡ್ಡ ಅಪಘಾತಗಳಿಗೆ ಕಾರಣವಾದ ನಿದರ್ಶನಗಳಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಎಟಿಆರ್–72 ಪತನವಾಗಿದ್ದೇಕೆ?

ಪೊಖರಾ ವಿಮಾನ ನಿಲ್ದಾಣದ ಬಳಿ ಎಟಿಆರ್–72 ವಿಮಾನವು ಪತನವಾಗಲು ಕಾರಣವಾದ ಅಂಶವನ್ನು ಇನ್ನಷ್ಟೇ ಪತ್ತೆ-ಮಾಡಬೇಕಿದೆ. ವಿಮಾನದ ಕಪ್ಪುಪೆಟ್ಟಿಗೆ (ಬ್ಲ್ಯಾಕ್‌ಬಾಕ್ಸ್) ಪತ್ತೆಯಾಗಿದೆ. ಅದರ ವಿಶ್ಲೇಷಣೆಯ ನಂತರ ಪತನಕ್ಕೆ ನಿಜವಾದ ಕಾರಣ ಏನು ಎಂಬುದು ಪತ್ತೆಯಾಗಲಿದೆ. ಆದರೆ, ಕೆಲವು ತಜ್ಞರು ಅಪಘಾತವನ್ನು ವಿಶ್ಲೇಷಿಸಲು ಯತ್ನಿಸಿದ್ದಾರೆ.

‘ಎಟಿಆರ್–72 ವಿಮಾನವು ಪತನವಾಗುವ ಮುನ್ನ, ದಿಢೀರ್ ನೆಲದತ್ತ ಕುಸಿದಿದೆ. ಹಾರಾಟದ ವೇಳೆ ಎಂಜಿನ್ ಏಕಾಏಕಿ ಸ್ಥಗಿತವಾದರೆ ಮಾತ್ರ ವಿಮಾನಗಳು ಹೀಗೆ ಕುಸಿದು ಬೀಳುತ್ತವೆ. ಎಟಿಆರ್–72 ಪತನದಲ್ಲಿ ಹೀಗೇ ಆಗಿದ್ದರೆ, ಎಂಜಿನ್ ಸ್ಥಗಿತವಾಗಲು ಕಾರಣ ಏನು ಎಂದು ಹುಡುಕಬೇಕಾಗುತ್ತದೆ’ ಎಂದು ಭಾರತದ ಸೇಫ್ಟಿ ಮ್ಯಾಟರ್ಸ್ ಫೌಂಡೇಷನ್‌ನ ಸಂಸ್ಥಾಪಕ ಮತ್ತು ಅನುಭವಿ ಪೈಲಟ್ ಅಮಿತ್ ಸಿಂಗ್ ಹೇಳಿದ್ದಾರೆ ಎಂದು ಎಪಿ ನ್ಯೂಸ್ ವರದಿ ಮಾಡಿದೆ.

ಎರಡು ವಾರಗಳ ಹಿಂದಷ್ಟೇ ಉದ್ಘಾಟಿಸಲಾಗಿದ್ದ ಪೊಖರಾ ನೂತನ ವಿಮಾನ ನಿಲ್ದಾಣದ ಎರಡೂ ತುದಿಯಲ್ಲಿ ನದಿ ಕಣಿವೆಗಳಿವೆ. ಈ ಕಣಿವೆಗಳಲ್ಲಿ ಸಾವಿರಾರು ಹಕ್ಕಿಗಳಿವೆ. ಈ ಹಕ್ಕಿಗಳು ವಿಮಾನ ಹಾರಾಟಕ್ಕೆ ತೊಡಕಾಗುವ ಅಪಾಯ ಇದ್ದೇ ಇದೆ. ಎಟಿಆರ್–72 ವಿಮಾನದ ಎಂಜಿನ್ ಸ್ಥಗಿತವಾಗಲೂ ಹಕ್ಕಿ ಡಿಕ್ಕಿಯೇ ಕಾರಣವಾಗಿರಬಹುದು ಎಂದು ನೇಪಾಳದ ವಿಮಾನಯಾನ ಸಂಸ್ಥೆಗಳ ಪೈಲಟ್‌ಗಳು ಶಂಕಿಸಿದ್ದಾರೆ ಎಂದು ಎಪಿ ನ್ಯೂಸ್ ವರದಿ ಮಾಡಿದೆ.

ಅವಘಡಗಳ ಸರಣಿ

ನೇಪಾಳದಲ್ಲಿ ವರ್ಷಕ್ಕೆ ಒಂದು ವಿಮಾನ ಅಪಘಾತ ಸಾಮಾನ್ಯ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ. ದತ್ತಾಂಶಗಳನ್ನು ಪರಿಶೀಲಿಸಿದರೆ, ವರ್ಷಕ್ಕೆ ಎರಡು ಅಥವಾ ಮೂರು ಅವಘಡಗಳು ನಡೆದ ಉದಾಹರಣೆಗಳೂ ಸಿಗುತ್ತವೆ.

1992ರಲ್ಲಿ ಎರಡು ಭೀಕರ ಅವಘಡಗಳು ನಡೆದಿದ್ದವು. ಜುಲೈ ತಿಂಗಳಲ್ಲಿ ಥಾಯ್ ಏರ್‌ವೇಸ್‌ನ ಏರ್‌ಬಸ್ 310 ವಿಮಾನವು ಕಠ್ಮಂಡುಗೆ ಬರುವ ಮಾರ್ಗದಲ್ಲಿ ಪತನವಾಗಿತ್ತು. 14 ಸಿಬ್ಬಂದಿ ಹಾಗೂ 99 ಪ್ರಯಾಣಿಕರು ಈ ವಿಮಾನದಲ್ಲಿದ್ದರು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದ ಅಪಘಾತವು ಅತಿಭೀಕರ ಎನಿಸಿಕೊಂಡಿದೆ. 167 ಪ್ರಯಾಣಿಕರೊಂದಿಗೆ ತೆರಳುತ್ತಿದ್ದ ಪಾಕಿಸ್ತಾನದ ವಿಮಾನವು ಕಠ್ಮಂಡುವಿನ ತ್ರಿಭುವನ ವಿಮಾನ ನಿಲ್ದಾಣದಲ್ಲಿ ಇಳಿಯುವ ಸ್ವಲ್ಪ ಹೊತ್ತಿನ ಹಿಂದೆ ಪತನವಾಗಿ, ಎಲ್ಲರ ಪ್ರಾಣ ತೆಗೆದಿತ್ತು.

ಕಳೆದ ವರ್ಷವೂ ನೇಪಾಳಿಗರು ವಿಮಾನ ಅಪಘಾತಕ್ಕೆ ಸಾಕ್ಷಿಯಾಗಿದ್ದರು. 22 ಪ್ರಯಾಣಿಕರನ್ನು ಹೊತ್ತು ಸಾಗುತ್ತಿದ್ದ ತಾರಾ ಏರ್ ವಿಮಾನಯಾನ ಸಂಸ್ಥೆಯ ವಿಮಾನವು 2022ರ ಮೇ 29ರಂದು ನೇಪಾಳದ ಮಸ್ತಾಂಗ್ ಜಿಲ್ಲೆಯ ಪರ್ವತ ಪ್ರದೇಶದಲ್ಲಿ ನಾಪತ್ತೆಯಾಗಿತ್ತು. 2016ರಲ್ಲೂ ತಾರಾ ಏರ್ ಸಂಸ್ಥೆಯ ವಿಮಾನದಲ್ಲಿ 23 ಮಂದಿ ಅಸುನೀಗಿದ್ದರು. ಇದಕ್ಕೆ ಹವಾಮಾನ ವೈಪರೀತ್ಯದ ಕಾರಣ ನೀಡಲಾಗಿತ್ತು. 2018ರಲ್ಲಿ ಬಾಂಗ್ಲಾದೇಶದ ಖಾಸಗಿ ವಿಮಾನವು ಕಠ್ಮಂಡು ಬಳಿ ಅಪಘಾತಕ್ಕೀಡಾಗಿ, 51 ಮಂದಿ ಸಾವಿಗೆ ಕಾರಣವಾಗಿತ್ತು.

ಅಪಾಯ ತಡೆಗೆ ನಿರಂತರ ಯತ್ನ

ವಿಮಾನ ಅವಘಡ ತಡೆಯುವುದಕ್ಕಾಗಿ ನೇಪಾಳ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ವಿಮಾನಯಾನದ ಮೇಲೆ ಸರ್ಕಾರವು ನಿಕಟ ನಿಗಾ ಇರಿಸಿದೆ. ಪೊಖರಾದಿಂದ ಜೊಮ್‌ಸೊಮ್ ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದ ತಾರಾ ಏರ್ ವಿಮಾನವು ಸನ್ಸೊವೇರ್ ಎಂಬಲ್ಲಿ 2022ರ ಮೇ 29ರಂದು ಪತನಗೊಂಡಿತ್ತು. ಈ ಅವಘಡದ ನಂತರ ವಿಮಾನಯಾನಕ್ಕೆ ಸಂಬಂಧಿಸಿ ಹಲವು ನಿಯಮಗಳನ್ನು ಸರ್ಕಾರವು ರೂಪಿಸಿತ್ತು. ಹವಾಮಾನವು ಪ್ರತಿಕೂಲವಾಗಿರುವಾಗ ವಿಮಾನ ಹಾರಾಟವನ್ನು ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣಗಳು ಸ್ಥಗಿತಗೊಳಿಸಲೇಬೇಕು ಎಂಬ ನಿಯಮವನ್ನು ರೂಪಿಸಲಾಗಿದೆ. ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣಗಳು ಎಲ್ಲ ವಿಮಾನಯಾನಗಳಿಗೂ ಅಂತಿಮ ಅನುಮತಿ ನೀಡಬೇಕು ಎಂಬ ನಿಯಮ ತರಲಾಗಿತ್ತು. ಒಂದೇ ಎಂಜಿನ್ ಇರುವ ವಿಮಾನಗಳಲ್ಲಿ ಇಬ್ಬರು ಪೈಲಟ್ ಇರಲೇಬೇಕು ಎಂಬ ನಿಯಮ ರೂಪಿಸುವ ಕುರಿತು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರವು ಚಿಂತಿಸುತ್ತಿದೆ.

ವಿಶ್ವ ಸಂಸ್ಥೆಯ ಅಧೀನದಲ್ಲಿರುವ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ ಕೂಡ ವಿಮಾನಯಾನ ಸುರಕ್ಷತೆ ನೆರವು ಪಾಲುದಾರಿಕೆ ಯೋಜನೆಯ ಅಡಿ ನೇಪಾಳಕ್ಕೆ ನೆರವು ನೀಡುತ್ತಿದೆ.

ನೇಪಾಳದ ಹವಾಮಾನ ಮತ್ತು ಭೂ ಮೇಲ್ಮೈ ಸ್ಥಿತಿಗತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ವಿಮಾನಯಾನ ಸುರಕ್ಷತೆ ಹೆಚ್ಚಿಸುವುದಕ್ಕೆ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು.

- ನೇಪಾಳದ ಎಲ್ಲ ವಿಮಾನಯಾನ ಮಾರ್ಗಗಳು ಅಪಾಯಕಾರಿ ಅಲ್ಲ. ಆದರೆ, ಹೆಚ್ಚು ಪರ್ವತಗಳಿಂದ ಕೂಡಿರುವ ಜೊಮ್‌ಸೊಮ್ ಮತ್ತು ಲುಕ್ಲಾ ವಿಮಾನ ನಿಲ್ದಾಣಗಳಲ್ಲಿ ಹೆಚ್ಚು ಅವಘಡಗಳು ಸಂಭವಿಸಿವೆ. ಈ ಮಾರ್ಗಗಳಲ್ಲಿ ಸಣ್ಣ ವಿಮಾನ ಸಂಚಾರ ಮಾತ್ರ ಸಾಧ್ಯ
- ಕಠ್ಮಂಡು–ಪೊಖರಾ ಮಾರ್ಗವು ಹೆಚ್ಚು ಅಪಾಯಕಾರಿ ಅಲ್ಲ. ಇಲ್ಲಿನ ಅಪಾಯದ ಪ್ರಮಾಣವು ಬಹಳ ಕಡಿಮೆ. ಹಾಗಿದ್ದರೂ ಕಠ್ಮಂಡು–ಪೊಖರಾ ನಡುವಣ ಪ್ರಯಾಣಕ್ಕೆ ವಿಮಾನಯಾನದ ಬದಲು ರಸ್ತೆ ಮಾರ್ಗವನ್ನು ಆಯ್ದುಕೊಳ್ಳಬಹುದು. ಈ ಎರಡು ನಗರಗಳ ನಡುವಣ ರಸ್ತೆ ಮಾರ್ಗದ ಅಂತರವು 200 ಕಿ.ಮೀ. ಅಷ್ಟೇ ಇದೆ
- ನೇಪಾಳ ಪ್ರವಾಸಕ್ಕೆ ಮೊದಲು ಆ ದೇಶ ಮತ್ತು ಅಲ್ಲಿನ ಸಾರಿಗೆ ಕುರಿತು ಸಾಧ್ಯವಾದಷ್ಟು ತಿಳಿದುಕೊಳ್ಳಬೇಕು. ಸಾರಿಗೆ ಆಯ್ಕೆಗಳನ್ನು ತಿಳಿದುಕೊಂಡು ಅಪಾಯಕಾರಿ ವಾಯು ಮಾರ್ಗದಲ್ಲಿ ವಿಮಾನ ಪ್ರಯಾಣದಿಂದ ದೂರ ಇರಬಹುದು
- ನೇಪಾಳದಲ್ಲಿ ರಾಷ್ಟ್ರೀಯ ರೈಲು ಮಾರ್ಗ ಜಾಲ ಇಲ್ಲ. ಹಾಗಾಗಿ, ಏರು ತಗ್ಗು, ತಿರುವುಗಳಿಂದ ಕೂಡಿದ ರಸ್ತೆ ಮಾರ್ಗದಲ್ಲಿಯೇ ಸಂಚರಿಸಬೇಕಾಗುತ್ತದೆ. ದೇಶದ ಎಲ್ಲ ಮೂಲೆಗೂ ಬಸ್ ಸೌಲಭ್ಯ ಇದೆ ಮತ್ತು ಅತ್ಯಂತ ಅಗ್ಗದ ದರದಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಬಹುದು. ಟ್ಯಾಕ್ಸಿ ವ್ಯವಸ್ಥೆಯೂ ಇದೆ

ಆಧಾರ: ಎಪಿ, ಪಿಟಿಐ, ರಾಯಿಟರ್ಸ್, ಟ್ರಾವೆಲ್‌ನೇಪಾಳ್

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಸ್ಯಾಂಟ್ರೊ ರವಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ. ಇದರಿಂದ ಸಂತ್ರಸ್ತೆಗೆ ನ್ಯಾಯ ದೊರೆಯುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಹೌದು 91% | ಅಲ್ಲ 9%

ವರುಣ್ ಸಿದ್ಧಾಂತ ಒಪ್ಪಲ್ಲ: ರಾಹುಲ್

‘ಸಂಸ್ಥೆಗಳು ಬಿಜೆಪಿ, ಆರ್‌ಎಸ್‌ಎಸ್ ಕೈವಶ’

ಹೋಶಿಯಾರ್‌ಪುರ (ಪಂಜಾಬ್) (ಪಿಟಿಐ): ದೇಶದ ಎಲ್ಲ ಸಂಸ್ಥೆಗಳನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಕೈವಶ ಮಾಡಿಕೊಂಡಿವೆ. ಚುನಾವಣಾ ಆಯೋಗ ಮತ್ತು ನ್ಯಾಯಾಂಗದ ಮೇಲೆ ಒತ್ತಡ ಹೇರುತ್ತಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಆರೋಪಿಸಿದ್ದಾರೆ.

ತಮ್ಮ ಕತ್ತು ಸೀಳಿದರೂ ಆರ್‌ಎಸ್‌ಎಸ್ ಕಚೇರಿಗೆ ಹೋಗುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ತಮ್ಮ ದೊಡ್ಡಪ್ಪ ಸಂಜಯ್ ಗಾಂಧಿ ಮಗ, ಬಿಜೆಪಿ ಸಂಸದ ವರುಣ್ ಗಾಂಧಿ ಅವರನ್ನು ಭೇಟಿಯಾಗುವಿರಾ ಎಂದು ಮಾಧ್ಯಮಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ರಾಹುಲ್ ಉತ್ತರಿಸಿದರು. ತಮ್ಮ ಸಿದ್ಧಾಂತಗಳು ಹೊಂದಿಕೆ ಆಗುವುದಿಲ್ಲ ಎಂದರು.

ವರುಣ್ ಅವರು ಯಾತ್ರೆಯ ಜೊತೆಗೆ ಹೆಜ್ಜೆ ಹಾಕಿದರೆ ಅವರಿಗೆ ಸಮಸ್ಯೆ ಉಂಟಾಗಬಹುದು. ಬಿಜೆಪಿ ಅದನ್ನು ಒಪ್ಪಲಿಕ್ಕಿಲ್ಲ ಎಂದು ಹೇಳಿದರು.

‘ವರುಣ್ ಅವರನ್ನು ನಾನು ಪ್ರೀತಿಯಿಂದ ತಬ್ಬಿಕೊಳ್ಳುತ್ತೇನೆ. ಆದರೆ, ಆ ಸಿದ್ಧಾಂತವನ್ನು ಒಪ್ಪಲಾಗದು’ ಎಂದರು. ಆರ್‌ಎಸ್‌ಎಸ್ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ವರುಣ್ ಹಿಂದೊಮ್ಮೆ ಹೇಳಿದ್ದರು ಎಂಬುದನ್ನು ರಾಹುಲ್ ನೆನಪಿಸಿಕೊಂಡರು. ‘ನಮ್ಮ ಕುಟುಂಬವು ಯಾವ ಸಿದ್ಧಾಂತದ ಪರವಾಗಿ ನಿಂತಿದೆ ಎಂಬುದನ್ನು ಓದಿ ಅರ್ಥ ಮಾಡಿಕೊಂಡಿದ್ದರೆ ಹೀಗೆ ಹೇಳುತ್ತಿರಲಿಲ್ಲ ಎಂದು ವರುಣ್‌ಗೆ ನಾನು ಹೇಳಿದ್ದೆ’ ಎಂದೂ ರಾಹುಲ್ ಹೇಳಿದರು.

ಸಂಸ್ಥೆಗಳ ಮೇಲೆ ಒತ್ತಡ ಇದೆ. ಮಾಧ್ಯಮ, ಅಧಿಕಾರಶಾಹಿ, ಚುನಾವಣಾ ಆಯೋಗ, ನ್ಯಾಯಾಂಗ ಎಲ್ಲದರ ಮೇಲೆಯೂ ಒತ್ತಡ ಇದೆ. ಈಗ ನಡೆಯುತ್ತಿರುವುದು ಒಂದು ರಾಜಕೀಯ ಪಕ್ಷದ ಜೊತೆಗೆ ಇನ್ನೊಂದು ರಾಜಕೀಯ ಪಕ್ಷದ ಜಗಳ ಅಲ್ಲ. ಈಗಿನ ಸಂಘರ್ಷವು ಬಿಜೆಪಿ–ಆರ್‌ಎಸ್‌ಎಸ್ ಕೈವಶ ಮಾಡಿಕೊಂಡಿರುವ ಸಂಸ್ಥೆಗಳು ಮತ್ತು ವಿರೋಧ ಪಕ್ಷಗಳ ನಡುವೆ ನಡೆಯುತ್ತಿದೆ. ವಿದ್ಯುನ್ಮಾನ ಮತಯಂತ್ರ ಕೂಡ ಅದರಲ್ಲಿ ಒಂದು. ಸಹಜ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಈಗ ಕಾಣೆಯಾಗಿವೆ ಎಂದು ರಾಹುಲ್ ಆಪಾದಿಸಿದ್ದಾರೆ.

ರಾಹುಲ್ ನೇತೃತ್ವದ ‘ಭಾರತ್ ಜೋಡೊ ಯಾತ್ರೆ’ಯು ಪಂಜಾಬ್‌ನಲ್ಲಿ ಸಾಗುತ್ತಿದೆ. ಪಂಜಾಬ್‌ನ ಆಡಳಿತಾರೂಢ ಎಎಪಿ ಬಗ್ಗೆಯೂ ಅವರು ಟೀಕೆ ಮಾಡಿದರು. ಪಂಜಾಬ್‌ನ ಆಳ್ವಿಕೆಯು ಪಂಜಾಬ್‌ನಿಂದಲೇ ನಡೆಯಬೇಕು. ಅದು ದೆಹಲಿಯಿಂದ ನಡೆಯಬಾರದು. ಪಂಜಾಬ್‌ನ ಆಳ್ವಿಕೆಯು ದೆಹಲಿಯಿಂದ ನಡೆಯುವುದನ್ನು ಪಂಜಾಬ್‌ನ ಜನರು ಒಪ್ಪುವುದಿಲ್ಲ ಎಂದರು.

ಭದ್ರತಾ ಲೋಪ?

ಹೋಶಿಯಾರ್‌ಪುರದಲ್ಲಿ ರಾಹುಲ್ ಗಾಂಧಿ ಅವರನ್ನು ಕಾಣಲು ಯುವಕನೊಬ್ಬ ಅತ್ಯುತ್ಸಾಹದಿಂದ ನುಗ್ಗಿಬಂದ ಘಟನೆಯು ಆತಂಕ ಮೂಡಿಸಿತು. ಇದು ‘ಭಾರತ್ ಜೋಡೊ’ ಯಾತ್ರೆಯಲ್ಲಿ ರಾಹುಲ್ ಅವರ ಭದ್ರತೆಯ ಬಗ್ಗೆ ಭೀತಿ ಮೂಡಿಸಿದರೂ, ಭದ್ರತಾ ಲೋಪ ಆಗಿಲ್ಲ ಎಂದು ಪೊಲೀಸರು ಹಾಗೂ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ. ‘ರಾಹುಲ್ ಅವರು ಸ್ವತಃ ಕರೆದಿದ್ದರಿಂದ ಯುವಕ ಅವರತ್ತ ಧಾವಿಸಿ ಬಂದಿದ್ದ’ ಎಂದು ಐಜಿ ಜಿ.ಎಸ್. ಧಿಲ್ಲೋನ್ ಸ್ಪಷ್ಟಪಡಿಸಿದ್ದಾರೆ. ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಹುಲ್, ‘ನನ್ನನ್ನು ಅಪ್ಪಿಕೊಳ್ಳಲು ಬಂದ ಯುವಕ ಸ್ವಲ್ಪ ಉತ್ಸುಕನಾಗಿದ್ದ. ತೊಂದರೆಯೇನಿಲ್ಲ. ಇಂತಹ ಘಟನೆಗಳು ಆಗುತ್ತಿರುತ್ತವೆ’ ಎಂದು ಹೇಳಿದ್ದಾರೆ.



ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿರುವ ಜೈನ ಸಮುದಾಯದವು ದೇಶದ ತೆರಿಗೆ ವ್ಯವಸ್ಥೆಗೆ ಶೇ 24ರಷ್ಟು ಕೊಡುಗೆ ನೀಡುತ್ತಿದೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಸಿಎನ್‌ಬಿಸಿ ಇಂಡಿಯಾದ ಮಾಜಿ ಸಂಪಾದಕ ವರಿಂದರ್ ಬನ್ಸಾಲ್ ಅವರು 2022ರ ಸೆ.19ರಂದು ಟ್ವೀಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ್ದರು. ಜೈನ ಸಮುದಾಯವು ಶೇ 0.4ರಷ್ಟು ಪ್ರಮಾಣದಲ್ಲಿದ್ದರೂ, ದೇಶದ ಶೇ 28ರಷ್ಟು ಆಸ್ತಿಯನ್ನು ಹೊಂದಿದೆ ಎಂಬುದಾಗಿ ಕೆಲವರು ಟ್ವೀಟ್ ಮಾಡಿದ್ದಾರೆ. ಭಾರತದ ಷೇರು ದಲ್ಲಾಳಿಗಳಲ್ಲಿ ಜೈನರ ಪ್ರಮಾಣ ಶೇ 46ರಷ್ಟಿದೆ ಎಂಬುದಾಗಿಯೂ ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗಿದೆ. ಆದರೆ, ತೆರಿಗೆಗೆ ಜೈನ ಸಮುದಾಯದ ಭಾರಿ ಕೊಡುಗೆ ವಿಚಾರ ಸುಳ್ಳು.



ದೇಶದ ತೆರಿಗೆ ವ್ಯವಸ್ಥೆಯಲ್ಲಿ ಧರ್ಮದ ಆಧಾರದಲ್ಲಿ ತೆರಿಗೆ ಸಂಗ್ರಹಿಸುವ ಹಾಗೂ ದಾಖಲಿಸುವ ಪದ್ಧತಿ ಇಲ್ಲ ಎಂದು ‘ದಿ ಲಾಜಿಕಲ್ ಇಂಡಿಯನ್’ ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. 2011ರ ಜನಗಣತಿ ಪ್ರಕಾರ, ದೇಶದ ಜನಸಂಖ್ಯೆಯಲ್ಲಿ ಜೈನ ಸಮುದಾಯದವರ ಪ್ರಮಾಣ 0.4ರಷ್ಟಿದೆ. ಆದರೆ, ಆದಾಯ ತೆರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅವರು ಎಷ್ಟು ಪ್ರಮಾಣದ ತೆರಿಗೆ ಪಾವತಿಸಿದ್ದಾರೆ ಎಂಬುದರ ಉಲ್ಲೇಖ ಇಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಚಾರಕ್ಕೆ ಯಾವುದೇ ಆಧಾರ ಇಲ್ಲ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 18, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಏಕಾದಶಿ ಗಂ. 16-03
ನಕ್ಷತ್ರ: ಅನುರಾಧ ಗಂ. 17-23 ಯೋಗ: ವೃದ್ಧಿ ಗಂ. 26-47, ಕರಣ: ಬಾಲವ ಗಂ. 16-03, ಮಕರ ಮಾಸದ 04 ನೇ ದಿನ. ರಾಹುಕಾಲ : ಮಧ್ಯಾಹ್ನ 12-00–01-30
ಸೂರ್ಯೋದಯ : 07-01 ಸೂರ್ಯಾಸ್ತ : 06-21 ಮುಸ್ಲಿಂ ದಿನಾಂಕ : 25 ಜುಮಾದುಸ್ಸಾನಿ
ದಿನ ವಿಶೇಷ : ಸತಿಲ ಏಕಾದಶಿ, ಅಮೃತ ಸಿದ್ಧಿಯೋಗ
ಅದೃಷ್ಟ ಸಂಖ್ಯೆ : 8, 12

ಮೇಷ: ಈ ದಿನದ ಕಹಿ ಘಟನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಅವಶ್ಯಕತೆಯಿಲ್ಲ. ಅಂತಹ ಘಟನೆಗಳನ್ನು ನಿರ್ಲಕ್ಷಿಸಬಹುದು. ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲವಾಗಿದೆ.

ವೃಷಭ: ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಇಂದು ಸರ್ಕಾರದಿಂದ ಅನುಕೂಲ ಉಂಟಾಗುವುದು. ಸಾಂಸಾರಿಕವಾಗಿ ಪತಿ ಪತ್ನಿಯ ಅನ್ಯೋನ್ಯತೆ ಕನಸು ನನಸಾಗಲಿದೆ. ಪ್ರಮೋಶನ್ ಅವಕಾಶ ಕೈತಪ್ಪದಂತೆ ನೋಡಿಕೊಳ್ಳಿ.

ಮಿಥುನ: ಮನೆಯ ಎಲ್ಲ ವಿಷಯಗಳನ್ನು ಮುಕ್ತವಾಗಿ ಚರ್ಚಿಸಬೇಕೆಂಬ ಮನಸ್ಸಾಗುವುದು ಅದರಂತೆಯೇ ಚರ್ಚಿಸಲು ಸಿದ್ಧರಾಗುವಿರಿ. ವ್ಯಾಪಾರದಲ್ಲಿ ಮೋಸ ಹೋಗುವ ಸಂಭವವಿದೆ. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ಕರ್ಕಾಟಕ: ವೈದ್ಯರ ಸಲಹೆಯಂತೆ ವ್ಯಾಯಾಮ ಮತ್ತು ಯೋಗಾಭ್ಯಾಸವನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿ. ಈಶ್ವರನಿಗೆ ರುದ್ರಾಭಿಷೇಕ ಮಾಡಿಸುವುದರಿಂದ ಕಷ್ಟಗಳು ದೂರವಾಗುತ್ತದೆ.

ಸಿಂಹ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ.ಸಮಸ್ಯೆ ಬಗೆಹರಿಸಲು ಬೇಕಾದ ಜಾಣತನ ಜತೆಗೆ ಸ್ನೇಹಿತರ ಸಹಾಯ ದೊರಕುವುದು.

ಕನ್ಯಾ: ಇಂದಿನ ಎಲ್ಲಾ ಬೆಳವಣಿಗೆಯಲ್ಲಿ ನೀವು ನಾಯಕತ್ವ ವಹಿಸುವುದರಿಂದ ಕೆಟ್ಟ ಜನಗಳ ದೃಷ್ಟಿದೋಷಕ್ಕೆ ಗುರಿಯಾಗಲಿದ್ದೀರಿ. ವಿದ್ಯಾರ್ಥಿಗಳ ಮನೋಕಾಮನೆ ಇಂದು ಪೂರ್ಣಗೊಳ್ಳಲಿದೆ. ನೂತನ ವಾಹನ ಖರೀದಿ ಯೋಗ.

ತುಲಾ: ಭವಿಷ್ಯದ ಕುರಿತು ಯೋಜನೆಗಳನ್ನು ರೂಪಿಸಲು ಇದು ಸುದಿನ. ಆತ್ಮೀಯರ ಮನೆಯಲ್ಲಿ ವಿಶೇಷ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸ. ಪಾದರಕ್ಷೆ ಮಾರಾಟಗಾರರಿಗೆ ಲಾಭ

ವೃಶ್ಚಿಕ: ಮನಸ್ಸಿನ ಚಂಚಲ ಸ್ವಭಾವದಿಂದ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು. ಪಿತ್ತ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ಭೂ ವ್ಯವಹಾರದಲ್ಲಿ ವಂಚನೆಯಾಗುವ ಸಾಧ್ಯತೆ.

ಧನು: ಯಾವುದೇ ವಿಷಯವನ್ನಾದರೂ ಮುಕ್ತವಾಗಿ ಆಲೋಚಿಸಿ. ನಿರ್ಧಾರಗಳನ್ನು ತೆಗೆದುಕೊಳ್ಳಲು ಬಹಳ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ಅಪೇಕ್ಷೆಪಟ್ಟ ಫಲಿತಾಂಶ ಪಡೆಯುವಲ್ಲಿ ಜಯಶಾಲಿಯಾಗುವರು.

ಮಕರ: ಕುಟುಂಬದ ಹಿರಿಯರ ಆರೋಗ್ಯದಲ್ಲಿ ಚೇತರಿಕೆ ಕಂಡು ಮನೆಯ ಶುಭ ಕಾರ್ಯ ನೆರವೇರುವುದು. ರಾಜಕೀಯ ರಂಗ ಪ್ರವೇಶಿಸಲು ಆಸಕ್ತಿ ಮೂಡಲಿದೆ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರಲಿದೆ.

ಕುಂಭ: ಮನೆಯಲ್ಲಿ ಅಗ್ನಿ ದುರಂತವನ್ನು ತಡೆಯಲು ಮುಂಜಾಗರೂಕತೆ ವಹಿಸಿ. ಗಣಿತ ಶಾಸ್ತ್ರದ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಸಂಪಾದಿಸಬಹುದು. ಇತರರಿಗೆ ಮಾದರಿಯಂತಿರುವ ಸ್ಥಾನಮಾನ ಅರಸಿ ಬರಲಿದೆ

ಮೀನ: ಈ ದಿನ ನಿಮಗೆ ಯೋಜನೆ ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಆದ್ದರಿಂದ ಸ್ವಲ್ಪ ವ್ಯತ್ಯಾಸಗಳೂ ಆಗಬಹುದು. ಗುರುಸ್ತೋತ್ರ ಪಠಿಸುವುದರಿಂದ ಆರೋಗ್ಯ ಉತ್ತಮ.

ಬೆರಗಿನ ಬೆಳಕು — ಗುರುರಾಜ ಕರಜಗಿ

ನಿರ್ಮಾಲ್ಯವಾದ ಬದುಕು

ಹರ್ಮ್ಯಾಗ್ರಕೇರಿ ಸೋಪಾನದಿನತೀತನಹೆ |
ನಿರ್ಮಮತೆಗೇರಿ ಕರ್ಮಾತೀತನಪ್ಪೆ ||
ಬ್ರಹ್ಮಪದದಿಂದ ಧರ್ಮಾಧರ್ಮಗಳ ನಿಯಮ |
ನಿರ್ಮಾಲ್ಯವಾಗುವುದು – ಮಂಕುತಿಮ್ಮ || 802 ||

ಪದ-ಅರ್ಥ: ಹರ್ಮ್ಯಾಗ್ರಕೇರಿ = ಹರ್ಮ್ಯಾಗ್ರಕೆ(ಉಪ್ಪರಿಗೆಯತುದಿಗೆ) + ಏರಿ,ಸೋಪಾನದಿನತೀತನಹೆ = ಸೋಪಾನದಿನ್(ಮೆಟ್ಟಿಲುಗಳಿಂದ) + ಅತೀತ(-ಮೀರಿದ್ದು) + ಇಹೆ(ಇರುವೆ),ನಿರ್ಮಮತೆಗೇರಿ = ನಿರ್ಮಮತೆ(ಮಮತೆಯನ್ನು ಮೀರಿ) + ಏರಿ, ಕರ್ಮಾತೀತನಪ್ಪೆ = ಕರ್ಮಾತೀತ(ಕರ್ಮವನ್ನು-ಮೀರಿ) + ಇಪ್ಪೆ(ಇರುವೆ), ಧರ್ಮಾಧರ್ಮಗಳ = -ಧರ್ಮ, ಅಧರ್ಮಗಳ, ನಿರ್ಮಾಲ್ಯ = ದೇವರಿಗೆ ಅರ್ಪಿಸಿದ ನಂತರಹಳೆಯದಾದ ಹೂವು.


ವಾಚ್ಯಾರ್ಥ: ಉಪ್ಪರಿಗೆಯ ತುದಿಗೆ ಏರಿದವನು, ಮೆಟ್ಟಿಲುಗಳನ್ನು ಮೀರಿದವನು, ಮಮತೆಯ ಬಂಧನಗಳಿಂದಕಳಚಿಕೊಂಡವನು, ಕರ್ಮಗಳನ್ನು ಮೀರಿದವನು, ಬ್ರಹ್ಮಪದವನ್ನು ತಲುಪಿದವನಿಗೆ ಧರ್ಮ, ಅಧರ್ಮಗಳು ಕೂಡ ನಿರ್ಮಾಲ್ಯವಾಗುತ್ತವೆ.

ವಿವರಣೆ: ನಾವು ಮನೆಯ ಮಾಳಿಗೆಯ ಮೇಲೆ ಹೋಗುವುದು ಹೇಗೆ? ಮೆಟ್ಟಿಲುಗಳನ್ನು ಏರಿಯೇ ತಾನೆ? ಮೆಟ್ಟಿಲುಗಳನ್ನು ಮೀರಿ ಮೇಲೆ ನಡೆದಾಗಲೇ ಮಾಳಿಗೆಯ ದರ್ಶನ. ಮೆಟ್ಟಿಲುಗಳನ್ನು ಏರಲು ಶಕ್ತಿ ಬೇಕು. ಉತ್ಸಾಹ ಬೇಕು ಮತ್ತು ಭಯವಿರದಿರಬೇಕು. ಹೀಗೆಂದರೇನಾಯಿತು? ಮಾಳಿಗೆಯ ತುದಿಯನ್ನೇರಿದವನಿಗೆ ಮೆಟ್ಟಿಲುಗಳ ಭಯವಿಲ್ಲ. ಅಂತೆಯೇ ಬದುಕಿನಲ್ಲಿ ಹಂತಹAತವಾಗಿ ಜೀವನದಮೆಟ್ಟಿಲುಗಳನ್ನು ಧೈರ್ಯದಿಂದ ಏರಿದವನು ಮಾತ್ರಯಶಸ್ಸಿನ ಎತ್ತರದ ಉಪ್ಪರಿಗೆಯನ್ನು ಕಂಡಾನು. ಅವನಿಗೆ ಈಗಜೀವನದ ಹಲವು ಹಂತಗಳ ಭಯವಿಲ್ಲ. ಆತ ಸೋಪಾನಗಳಿಗೆಅತೀತ. ಮೊದಲನೆಯ ಹಂತ ಧೈರ್ಯ ಮತ್ತುಉತ್ಸಾಹಗಳದ್ದಾದರೆ, ಎರಡನೆಯದು ಮಮಕಾರವನ್ನುಮೀರುವುದು. ಇದು ತುಂಬ ಕಷ್ಟದ್ದು. ಹುಟ್ಟಿದಾಗಿನಿಂದಕೊನೆಯವರೆಗೆ ‘ನಾನು’, ‘ನನ್ನದು’ ಎನ್ನುವ ಮೋಹನಮ್ಮನ್ನು ಬಿಗಿದು ಇಟ್ಟಿರುತ್ತದೆ. ಆ ಹಗ್ಗಗಳ ಬಿಗಿತನಮ್ಮನ್ನು ಮೇಲಕ್ಕೇರಲು ಬಿಡುವುದಿಲ್ಲ. ಅದೇ ಮಮಕಾರಬಂಧನ. ಆದರೆ ಬದುಕಿನಲ್ಲಿ ಒಂದು ಹಂತ ಬರುತ್ತದೆ, ಬರಬೇಕು.ಆಗ ಈ ಪ್ರಪಂಚಕ್ಕೆ ಬರುವಾಗ ಬರಿಗೈಯಿಂದ ಬಂದೆವು,ಹೋಗುವಾಗ ಬರಿಗೈಯಿಂದಲೇ ಹೋಗುತ್ತೇವೆ ಎಂಬ ಅರಿವು ಮೂಡೀತು. ಇಡೀ ಪ್ರಪಂಚ ಪರಮಾತ್ಮನದು. ಇಲ್ಲಿ ನನ್ನದುಎನ್ನುವುದು ಯಾವುದು? ನನ್ನ ಹೆಸರು, ಮನಸ್ಸು, ಬುದ್ಧಿ,ಪ್ರಾಣ ಯಾವವೂ ನನ್ನದಲ್ಲವೆಂದ ಮೇಲೆ ನಮ್ಮಸುತ್ತಮುತ್ತ ಇರುವ, ನಾವು ಗಳಿಸಿದ್ದು ಎಂಬ ಭ್ರಮೆಹುಟ್ಟಿಸುವ ವಸ್ತುಗಳು ನನ್ನವು ಹೇಗಾದಾವು? ಈ ದೃಷ್ಟಿಬಂದಾಗ ವ್ಯಕ್ತಿ ಕರ್ಮಗಳಿಗೆ ಅತೀತವಾಗುತ್ತಾನೆ. ಯಾಕೆಂದರೆತನಗಾಗಿ ಮಾಡದ ಕರ್ಮಗಳೆಲ್ಲ ಒಳ್ಳೆಯ ಕರ್ಮಗಳೇ.ಮೂರನೆಯ ಹಂತ ಆತ್ಮಾನುಭವದ್ದು,ಬ್ರಹ್ಮದರ್ಶನದ್ದು. ಆ ಹಂತ ಮುಟ್ಟಿದ ಜೀವನ್ಮುಕ್ತನಿಗೆಧರ್ಮ, ಅಧರ್ಮಗಳ ಗೋಜೂ ಇಲ್ಲ. ಯಾಕೆಂದರೆ ಅವನುಸಾಧನೆಯ ಸೋಪಾನಗಳನ್ನು ದಾಟಿದವನು,ಮಮಕಾರವನ್ನು ಮೀರಿದವನು, ಬ್ರಹ್ಮಪದವನ್ನು ಕಂಡವನು.ಅವನ ಬದುಕೇ ನಿರ್ಮಾಲ್ಯ. ಅದು ದೇವರಿಗೆ ಅರ್ಪಿಸಿದ ಹೂವು,ದೇವರಿಗೇ ಸೇರಿದ್ದು. ಅವನು ಮಾಡಿದ್ದು, ನಡೆದದ್ದೆಲ್ಲ ಧರ್ಮವೇ.

ಪದಬಂಧ 5203 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಾಚೀನ ಕಾಲದ ವಿದ್ಯಾಭ್ಯಾಸ ಕೇಂದ್ರ (4)
3.ಆಲದ ಮರಕ್ಕೊರಗಿರುವ ಸೋಮಾರಿ (4)
5.ಬಡವರ ನಾಡಿನಲ್ಲಿ ಆವರಿಸಿದ ಕ್ಷಾಮ! (2)
6.ಭ್ರಮೆಯನ್ನು ಹೀಗೂ ಹೇಳುವರು (4)
7.ಕನ್ನಡಿಗ ನೀಡಿದ ಇನ್‌ಕಮ್ ಟ್ಯಾಕ್ಸ್! (7)
10.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
11.ದಾಯಾದಿ ಇಲ್ಲಿದ್ದಾನೆ (2)
13.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
14.ಉಗುಳುವ ಪಾತ್ರೆ (4)

ಮೇಲಿಂದ ಕೆಳಕ್ಕೆ
1.ಅಗೆದು ಮಾಡಿದ ಗುಣಿ (2)
2.ವರ ಪಡೆದುಕೊಂಡಿರುವ ಮಗ (3)
4.ವಿಷ್ಣುವಿನ ವಾಹನ (3)
5.ಈತ ದುಡ್ಡಿಲ್ಲದವನು (3)
6.ಹಣ ನೀಡಿ ತಂದಿರುವ ಸೊಡರು (3)
8.ಮಾವನಿಗೆದುರು ಬಂದಿರುವ ಸ್ತ್ರೀ (3)
9.ಗೆಳೆಯನ ಜೊತೆಗಿರುವ ಸ್ನೇಹಿತೆ (3)
10.ಅಂಗ ಹೀನ ವ್ಯಕ್ತಿ (3)
11.ಪಕ ಪಕ ನಕ್ಕಾಗ ಬಂದ ನೆನಪು (3)
12.ವಿಜ್ಞಾನಿಯೊಡನೆ ತಿಳಿದವನು ಇದ್ದಾನೆ (2)



5202ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಿಂಹಾಸನ 3.ಬಾಕಿದಾರ 5.ಮಸುಕು 7.ರಜಾ 9.ತಾಣ 10.ಅಮರ್ಷ 11.ಕಂತೆ 12.ತ್ರಪು 14.ಕವನ 16.ಕಡುಜಾಣ 17.ತರಕಾರಿ

ಮೇಲಿಂದ ಕೆಳಕ್ಕೆ:
1.ಸಿಂಗಾರ 2.ನಮ 3.ಬಾಕು 4.ರಪಣ 6.ಸುವರ್ಣಮಹೋತ್ಸವ 8.ಜಾಗರೂಕತೆ 9.ತಾರಕಮಂತ್ರ 11.ಕಂದಕ 13.ಪುಢಾರಿ 14.ಕಣ 15.ನತ

ಸುಡೊಕು 5589

9				5		8	4	
			3		9			1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5588ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ನಿಧನ



ಶ್ರೀ ಪಿ. ಪುಟ್ಟರಂಗಪ್ಪ

ನಿವೃತ್ತ ಐಎಎಸ್ ಅಧಿಕಾರಿ, ಮಾಜಿ ಸಹಾಯಕ ಆಯುಕ್ತರು – ಬೆಂಗಳೂರು
(ಜನನ: 27-08-1930 – ನಿಧನ: 17-01-2023)
ನಮ್ಮ ಪ್ರೀತಿಯ ಮಾಮನಾಗಿದ್ದ ಇವರು 17-01-2023 ರಂದು ಮುಂಜಾನೆ 10:20 ಗಂಟೆಗೆ ಬೆಂಗಳೂರಿನಲ್ಲಿ ದೈವಾಧೀನರಾದರು ಎಂದು ತಿಳಿಸಲು ತೀವ್ರವಾಗಿ ವಿಷಾದಿಸುತ್ತೇವೆ.
ಅಂತ್ಯಕ್ರಿಯೆ – ಬುಧವಾರ, 18-01-2023 ರಂದು ಮಧ್ಯಾಹ್ನ 3:00 ಗಂಟೆಗೆ ಸ್ಥಳ: ಅಜ್ಜಂಪುರ
ಮೃತರ ಆತ್ಮಕ್ಕೆ ಚಿರಶಾಂತಿ ಮತ್ತು ಸದ್ಗತಿ ಲಭಿಸಲಿ ಎಂದು ಪ್ರಾರ್ಥನೆ. ಅಗಲಿದವರ ಕುಟುಂಬ ವರ್ಗದವರಿಗೆ ಮತ್ತು ಅವರ ಬಂಧು ಬಳಗದವರ ಬಗ್ಗೆ ನಮಗೆ ಸಂತಾಪವಿದೆ
– ವಿ.ಎಸ್. ಕುಬೇರ್ ಮತ್ತು ಪರಿವಾರ ಶ್ರೀ ಪಿ. ಪುಟ್ಟರಂಗಪ್ಪ ಪರಿವಾರ –


ನಿಮ್ಮ ಪ್ರೀತಿಯ ಸವಿನೆನಪು



ಶ್ರೀಮತಿ ಮೀನಮ್ಮ

ಶ್ರೀ ಬಿ. ನಾರಾಯಣರೆಡ್ಡಿಯವರ ಧರ್ಮಪತ್ನಿ
ಸೀತಾರಾಮಪಾಳ್ಯ
ನಿಧನ: 28-8-1991
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
– ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು.


ಸವಿನೆನಪು



ಶ್ರೀ ಎ.ನಾಗರಾಜರೆಡ್ಡಿಯವರು




ಶ್ರೀಮತಿ ಲಕ್ಷ್ಮಮ್ಮನವರು



ಶ್ರೀ ಅಬ್ಬಯ್ಯರೆಡ್ಡಿಯವರು

ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ.
ನಮ್ಮ ಏಳಿಗೆಯ ಪ್ರತಿ ಕ್ಷಣದಲ್ಲೂ ನಮ್ಮನ್ನು ಆಶೀರ್ವದಿಸುತ್ತಿರುವ ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುತ್ತೇವೆ.
ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಗ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಜೆ.ಪಿ.ನಗರ, ಬೆಂಗಳೂರು

ಎಂಟನೇ ವರ್ಷದ ಪುಣ್ಯತಿಥಿ



ಬಿ.ನಾರಾಯಣರೆಡ್ಡಿ (ಬಿ.ಎನ್.ಬಿ)

28.08.1928 To 18.01.2015
ಸೀತಾರಾಮಪಾಳ್ಯ
ನಾವು ಪ್ರೀತಿಸುವ ವ್ಯಕ್ತಿ ಈ ಜಗದಲ್ಲಿ ನೆನಪಾಗಿ ಉಳಿದಿದ್ದರೆ, ಆ ನೆನಪುಗಳೇ ನಮಗೆ ಸಿಕ್ಕಿರುವ ಸವಿನೆನಪಿನ ನಿಧಿ
– ಬಿ.ಎನ್.ಬಿ ಕುಟುಂಬದವರು ಮತ್ತು ಸ್ನೇಹಿತರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Services

ಫ್ರಾಂಚೈಸಿಗಾಗಿ B to B ONLINE ಸೇವೆಗಳನ್ನು ಗ್ರಾಮಗಳಿಗೆ ಪರಿಚಯಿಸಲು ಜಿಲ್ಲಾ ತಾಲ್ಲೂಕುಗಳಿಗೆ ಫ್ರಾಂಚೈಸಿಗಾಗಿ ಸಂಪರ್ಕಿಸಿ: ಆಶೀರ್ವಾದ್ ಪೇಸ್ ಬೆಂಗಳೂರು. 8217593354.

ವಾಹನ

Four Wheelers Selling

Others

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಪ್ರವಾಸ

Travel

23.1.2023 ಕೇರಳ, ತಮಿಳುನಾಡು ಪ್ರವಾಸ 4.2.2023 ಗುಜರಾತ್, ಮಧ್ಯಪ್ರದೇಶ 19.2.2023 ದೆಹಲಿ, ಅಮೃತ್ಸರ್ ವೈಷ್ಣೋದೇವಿ, ಹರಿದ್ವಾರ, ಅಯೋಧ್ಯಾ, ಕಾಶಿ 23.4.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್(ಹನುಮಂತನಗರ) 9845035349, 9482435755

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಇದೆ 10,000- 15,000. 8951315839, 9880545002

Marketing & Sales

ಬೇಕಾಗಿದ್ದಾರೆ: ಬೆಂಗಳೂರು, ಮಂಗಳೂರು, ಉಡುಪಿ ನಗರಗಳಿಗೆ ಸೇಲ್ಸ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ, ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ ಮೊಬೈಲ್: 8660410958

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.`ಕೊರಿಯರ್ ಸೌಲಭ್ಯವಿದೆ.8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್`ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್`ಇದೆ) 8904715353, 8904725353.

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ಮಾಘ ಸ್ನಾನ ಪ್ರಯುಕ್ತ 02.02.2023 26.02.2023 06.03.2023 ಅಲಹಾಬಾದ್ ಕಾಶಿ,ಬುದ್ಧಗಯಾ. 11.02.2023 ಮಹಾಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. 26.02.2023 ಸೋಮನಾಥ ದ್ವಾರಕಾ ನಿಷ್ಕಳಂಕ ಮಾಹದೇವ,ಓಂಕಾರೇಶ್ವರ್ ಮಂಹಾಕಾಳೇಶ್ವರ್. 17.04.2023 23.04.2023 ಚಾರ್ಧಾಮ್ ಸಮೇತ ಪ್ರವಾಸ. ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಉತ್ತರ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು-4. 26574131 8317446683 9686708171

08.03.2023 10.04.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 11/7 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023. 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 23.02.2023. 17.03.2023 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/02/23 ಕಾಶಿ, ಗಯ, ಅಯೋಧ್ಯ. 11/02/23 ಪೂರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ. 21/02/23 ದೆಹಲಿ, ವೈಷ್ಣೋದೇವಿ. 9964527782

ವೈಯಕ್ತಿಕ

Change of Name

I, RAJESH Kumar Deva Prasad residing at No.1561, 6th Cross, Sumathi Nagar Robertsonpet KGF 563122, Kolar District. Have changed my Minor Daughter's name from Maria Miracle Rosaria to Maria Miracle Rosaria R. vide affidavit dated 09.01.2023 before Notary Thangaraj.S KGF

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ

ನಂ. 147 ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-01 ಇವರ ನಡವಳಿಗಳು

ಚುನಾವಣಾ ವೇಳಾಪಟ್ಟಿ ಪತ್ರಿಕಾ ಪ್ರಕಟಣೆ


ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ., ಬೆಂಗಳೂರು ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸಬೇಕಾಗಿರುವುದರಿಂದ ಶ್ರೀಮತಿ. ಅಪೂರ್ವ ಬಿದರಿ, ಕ.ಆ.ಸೇ., ಸಹಾಯಕ ಆಯುಕ್ತರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಹಾಗೂ ರಿಟರ್ನಿಂಗ್ ಅಧಿಕಾರಿ ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ., ಬೆಂಗಳೂರು ಆದ ನಾನು ಸದರಿ ಚುನಾವಣೆಗೆ ಸಂಬಂಧಿಸಿದ ಈ ಕೆಳಕಂಡ ಕಾರ್ಯಕ್ರಮಗಳ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುತ್ತೇನೆ.

1	ಆಕಾಂಕ್ಷಿಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನ	ದಿನಾಂಕ: 13.01.2023 ಸಮಯ ಬೆಳಿಗ್ಗೆ 10-00 ರಿಂದ ಸಂಜೆ 5-30 ರವರೆಗೆ
2	ಆಕಾಂಕ್ಷಿಯುಳ್ಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14 (ಎ)	ದಿನಾಂಕ: 21.01.2023 (ಶನಿವಾರ) ಸಮಯ ಸಂಜೆ 5-30 ರವರೆಗೆ
3	ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14(ಬಿ))	ದಿನಾಂಕ: 22.01.2023 (ಭಾನುವಾರ) ಸಮಯ ಬೆಳಿಗ್ಗೆ 11-00 ಗಂಟೆಗೆ
4	ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14-ಬಿ(4))	ದಿನಾಂಕ: 22.01.2023 ರಂದು (ಭಾನುವಾರ) ರಂದು ನಾಮಪತ್ರಗಳ ಪರಿಶೀಲನೆ ನಂತರ
5	ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನ (ನಿಯಮ 14 (ಸಿ)	ದಿನಾಂಕ: 23.01.2023 ರಂದು (ಸೋಮವಾರ) ಸಮಯ ಸಂಜೆ 3-00 ಗಂಟೆಗೆ
6	ರಿಟರ್ನಿಂಗ್ ಅಧಿಕಾರಿಯಿಂದ ಸ್ಪರ್ಧೆಯಲ್ಲಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14(ಸಿ)	ದಿನಾಂಕ: 23.01.2023 ರಂದು (ಸೋಮವಾರ) ಸಮಯ ಸಂಜೆ 4-00 ಗಂಟೆಗೆ
7	ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ14(ಸಿ))	ದಿನಾಂಕ: 23.01.2023 ರಂದು (ಸೋಮವಾರ) ಸಮಯ ಸಂಜೆ 4-30 ಗಂಟೆಗೆ
8	ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14(ಇ) ಮತ್ತು 14 (ಪಿ)	ದಿನಾಂಕ: 23.01.2023 ರಂದು (ಸೋಮವಾರ) ಸಮಯ ಸಂಜೆ 4-30 ಗಂಟೆ ನಂತರ
9	ಅಗತ್ಯವಿದ್ದಲ್ಲಿ ಮತದಾನ ನಡೆಯುವ ಸ್ಥಳ ದಿನಾಂಕ ಮತ್ತು ಸಮಯ	ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ ನಂ.147 ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-1 ಇದರ ಆವರಣದಲ್ಲಿ ದಿನಾಂಕ: 29.01.2023 (ಭಾನುವಾರ) ರಂದು ಬೆಳಿಗ್ಗೆ 9-00 ರಿಂದ 4-00 ವರೆಗೆ
10	ಮತ ಎಣಿಕೆಯ ಸ್ಥಳ ದಿನಾಂಕ ಮತ್ತು ಸಮಯ	ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ ನಂ. 147 ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-1 ಇದರ ಆವರಣದಲ್ಲಿ ದಿನಾಂಕ: 29-01-2023 (ಭಾನುವಾರ) ರಂದು ಮತದಾನದ ನಂತರ
11	ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ	ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ ನಂ. 147 ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-1 ಇದರ ಆವರಣದಲ್ಲಿ ದಿನಾಂಕ: 29-01-2023 (ಭಾನುವಾರ) ರಂದು ಮತ ಎಣಿಕೆಯ ನಂತರ

ಸೂಚನೆಗಳು:
1. ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ ಬೆಂಗಳೂರು ಇದರ ಆಡಳಿತ ಮಂಡಲಿ ಚುನಾವಣೆಯನ್ನು ಸಹಕಾರ ಸಂಘಗಳ ಕಾಯಿದೆ 1959 ಹಾಗೂ ಸಹಕಾರ ಸಂಘಗಳ ನಿಯಮಾವಳಿಗಳು 1960 ಹಾಗೂ ಮಹಾಮಂಡಳದ, ಉಪನಿಯಮದ ಅನುಸಾರ ಮೇಲ್ಕಂಡ ಚುನಾವಣೆಯ ವೇಳಾಪಟ್ಟಿ ಅನ್ವಯ ಜರುಗುವುದು.
2. ಚುನಾವಣಾ ವೇಳಾಪಟ್ಟಿಯಲ್ಲಿನ ಸೂಚನೆಗಳನ್ನು ಎಲ್ಲಾ ಪ್ರತಿನಿಧಿಗಳು ಗಮನಿಸಿ ಅದರನ್ವಯ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳತಕ್ಕದ್ದು.
3. ಮಹಾಮಂಡಳದ ಆಡಳಿತ ಚುನಾವಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಹಾಮಂಡಳದ ರಿಟರ್ನಿಂಗ್ ಅಧಿಕಾರಿ, ಮಹಾಮಂಡಳದ ಕಾರ್ಯದರ್ಶಿ, ಮಹಾಮಂಡಳದ ಸಿಬ್ಬಂದಿರವರುಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.
4. ಮಹಾಮಂಡಳದ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಪ್ರತಿನಿಧಿ ಸಂಘಕ್ಕೆ ಅಂಚೆ ನೋಂದಣಿ ಸ್ವೀಕೃತಿ ಮೂಲಕ ಈಗಾಗಲೇ ಕಳುಹಿಸಲಾಗಿದ್ದು ಒಂದು ವೇಳೆ ಈ ಚುನಾವಣಾ ವೇಳಾಪಟ್ಟಿ ತಲುಪದಿದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನೇ ಚುನಾವಣಾ ವೇಳಾಪಟ್ಟಿಯ ನೋಟಿಸ್ ಎಂದು ಪರಿಗಣಿಸತಕ್ಕದ್ದು.

ಸಹಿ/- ಶ್ರೀಮತಿ ಅಪೂರ್ವ ಬಿದರಿ,
ಕ.ಆ.ಸೇ ರಿಟರ್ನಿಂಗ್ ಅಧಿಕಾರಿ
ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ
ದಿನಾಂಕ: 13-1-2023 ಸ್ಥಳ: ಬೆಂಗಳೂರು ನೇಕಾರರ ಮಹಾಮಂಡಳ
ಬೆಂಗಳೂರು-01 ನಿಯಮಿತ ನಂ.147 ಇನ್‌ಫೆಂಟ್ರಿ ರಸ್ತೆ

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17894
ಇಂದಿನ ಅಂತ್ಯ	18053
▲	158
ದಿನದ ಕನಿಷ್ಠ	18072

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹575
12 ಮೊಟ್ಟೆಗೆ ₹75
ಮೈಸೂರು
100 ಮೊಟ್ಟೆಗೆ ₹577


ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

'ಹಳೆ ಪಿಂಚಣಿ ವ್ಯವಸ್ಥೆಯಿಂದ ರಾಜ್ಯಗಳಿಗೆ ದೊಡ್ಡ ಸವಾಲು ಸೃಷ್ಟಿ'

ಒಪಿಎಸ್: ಆರ್‌ಬಿಐ ಕಿವಿಮಾತು



ಮುಂಬೈ (ಪಿಟಿಐ): ಕೆಲವು ರಾಜ್ಯ ಸರ್ಕಾರಗಳು ತಮ್ಮ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆಯನ್ನು (ಒಪಿಎಸ್) ಮತ್ತೆ ಜಾರಿಗೆ ತರುತ್ತಿರುವುದರ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಚ್ಚರಿಕೆಯ ಕಿವಿಮಾತು ಹೇಳಿದೆ. ಒಪಿಎಸ್ ಜಾರಿಗೆ ತರುತ್ತಿರುವುದು 'ರಾಜ್ಯಗಳ ಆರ್ಥಿಕ ದಿಗಂತದಲ್ಲಿ' ಬಹುದೊಡ್ಡ ಸವಾಲು ಹುಟ್ಟಿಸುತ್ತಿದೆ ಎಂದು ಆರ್‌ಬಿಐ ಹೇಳಿದೆ.

ಒಪಿಎಸ್ ಜಾರಿಗೆ ತರುವುದರಿಂದಾಗಿ ರಾಜ್ಯಗಳ ಪಾಲಿಗೆ ಮುಂದಿನ ವರ್ಷಗಳಲ್ಲಿ ಹಣಕಾಸಿನ ಮೂಲವೇ ಇಲ್ಲದ ಹೊಸ ವೆಚ್ಚವೊಂದು ಹುಟ್ಟಿಕೊಳ್ಳುತ್ತದೆ ಎಂದು ಆರ್‌ಬಿಐ ಎಚ್ಚರಿಸಿದೆ. 'ರಾಜ್ಯಗಳ ಹಣಕಾಸು: 2022–23ರ ಬಜೆಟ್‌ಗಳ ಅಧ್ಯಯನ' ಎಂಬ ವರದಿಯಲ್ಲಿ ಈ ಎಚ್ಚರಿಕೆ ಇದೆ. ಕಾಂಗ್ರೆಸ್ ಆಡಳಿತದ ಹಿಮಾಚಲ ಪ್ರದೇಶವು ಈಚೆಗೆ ತುಟ್ಟಿಭತ್ಯೆ ಆಧರಿಸಿದ ಒಪಿಎಸ್ ವ್ಯವಸ್ಥೆಯನ್ನು ಮತ್ತೆ ಜಾರಿಗೊಳಿಸುವುದಾಗಿ ಪ್ರಕಟಿಸಿದೆ.

ರಾಜಸ್ಥಾನ, ಛತ್ತೀಸಗಢ, ಜಾರ್ಖಂಡ್ ರಾಜ್ಯ ಸರ್ಕಾರಗಳು ಕೂಡ ತಮ್ಮ ನೌಕರರಿಗೆ ಒಪಿಎಸ್ ವ್ಯವಸ್ಥೆಯನ್ನು ಮತ್ತೆ ಆರಂಭಿಸುವುದಾಗಿ ಕೇಂದ್ರ ಸರ್ಕಾರ ಹಾಗೂ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಪಿಎಫ್‌ಆರ್‌ಡಿಎ) ಮಾಹಿತಿ ನೀಡಿವೆ. ಈಗ ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ವ್ಯಾಪ್ತಿಯಲ್ಲಿರುವ ನೌಕರರಿಗೆ ಒಪಿಎಸ್ ಜಾರಿಗೊಳಿಸಲಾಗುವುದು ಎಂದು ಪಂಜಾಬ್ ಸರ್ಕಾರವು 2022ರ ನವೆಂಬರ್ 18ರಂದು ಅಧಿಸೂಚನೆ ಹೊರಡಿಸಿದೆ.

'ಹಲವು ರಾಜ್ಯಗಳು ಹಳೆಯ ಪಿಂಚಣಿ ವ್ಯವಸ್ಥೆಗೆ ಮರಳುವ ಸಾಧ್ಯತೆ ಇರುವುದು ದೊಡ್ಡ ಅಪಾಯವಾಗಿ ಕಾಣಿಸುತ್ತಿದೆ. ಒಪಿಎಸ್ ಜಾರಿಗೆ ತರುವುದರಿಂದ ವಾರ್ಷಿಕ ಬಜೆಟ್‌ನಲ್ಲಿ ಆಗುವ ಉಳಿತಾಯವು ಅಲ್ಪಕಾಲದ್ದು' ಎಂದು ವರದಿಯಲ್ಲಿ ಹೇಳಲಾಗಿದೆ.

ಒಪಿಎಸ್ ಜಾರಿಗೊಳಿಸುತ್ತಿರುವುದರ ಬಗ್ಗೆ ಅರ್ಥಶಾಸ್ತ್ರಜ್ಞರು ಕೂಡ ಕಳವಳ ವ್ಯಕ್ತಪಡಿಸಿದ್ದಾರೆ. ಯೋಜನಾ ಆಯೋಗದ ಉಪಾಧ್ಯಕ್ಷ ಆಗಿದ್ದ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಅವರು, ಒಪಿಎಸ್ ಜಾರಿಗೆ ತರುವುದು ಅತಿದೊಡ್ಡ 'ಉಚಿತ ಕೊಡುಗೆ' ಎಂದು ಈಚೆಗೆ ಹೇಳಿದ್ದಾರೆ.

2022–23ನೆಯ ಸಾಲಿಗೆ, ಅಭಿವೃದ್ಧಿ ಕಾರ್ಯಗಳಿಗೆ ಹೊರತಾದ ಪಿಂಚಣಿ, ಆಡಳಿತ ಸೇವೆಗಳ ವೆಚ್ಚಗಳಿಗೆ ಹೆಚ್ಚಿನ ಮೊತ್ತ ಮೀಸಲಿಟ್ಟಿರುವ ಕಾರಣ ರಾಜ್ಯಗಳ ವರಮಾನ ವೆಚ್ಚವು ಹೆಚ್ಚಾಗಿದೆ ಎಂದು ಆರ್‌ಬಿಐ ವರದಿ ಹೇಳಿದೆ.

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹136
ಆರ್‌ಎಸ್‌ಎಸ್-5	₹131
ಗುಡ್ ಲಾಟ್	₹124

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹ 475-680
ದ್ವಿತಳಿ (ಬಿ.ವಿ) ₹335-785

ಕೊಬ್ಬರಿ ಧಾರಣೆ



ಅರಸೀಕೆರೆ	₹10200-11488
ಕೆ.ಆರ್.ಪೇಟೆ (ಇತರ)	₹8350-8350

ಸೆನ್ಸೆಕ್ಸ್, ನಿಫ್ಟಿ ಏರಿಕೆ


ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ 562 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 158 ಅಂಶ ಏರಿಕೆ ದಾಖಲಿಸಿತು. ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ಎಚ್‌ಡಿಎಫ್‌ಸಿ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು.

'ಐ.ಟಿ. ಹಾಗೂ ಬ್ಯಾಂಕಿಂಗ್ ವಲಯದ ಬ್ಲೂಚಿಪ್ ಕಂಪನಿಗಳ ಡಿಸೆಂಬರ್ ತ್ರೈಮಾಸಿಕದ ಫಲಿತಾಂಶವು ಉತ್ತೇಜನಕಾರಿಯಾಗಿ ಇದೆ. ಆದರೆ, ಮುಂದಿನ ದಿನಗಳಲ್ಲಿ ಪ್ರಕಟವಾಗಲಿರುವ ಇನ್ನೂ ಹಲವು ಕಂಪನಿಗಳ ತ್ರೈಮಾಸಿಕ ಫಲಿತಾಂಶ ಹಾಗೂ ಕೇಂದ್ರ ಬಜೆಟ್ ಘೋಷಣೆಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಮಾರುಕಟ್ಟೆಯಲ್ಲಿ ನಿರ್ಣಾಯಕ ಸೂಚನೆಗಳು ಸಿಗುವವರೆಗೆ ಆಯ್ದ ಷೇರುಗಳಲ್ಲಿ ಹೂಡಿಕೆ ಮಾಡಬೇಕು, ರಿಸ್ಕ್ ನಿಭಾಯಿಸಬೇಕು' ಎಂದು ರೆಲಿಗೇರ್ ಬ್ರೋಕಿಂಗ್‌ನ ತಾಂತ್ರಿಕ ಸಂಶೋಧನೆ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.67ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 85.03 ಡಾಲರ್‌ಗೆ ತಲುಪಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಶೋಕ ಸಾಲುಂಕೆ, ಊರು ನಮೂದಿಸಿಲ್ಲ

- **ಪ್ರಶ್ನೆ: ತಾಯಿಯ ಬ್ಯಾಂಕ್ ಖಾತೆಯಿಂದ ಸುಮಾರು ₹ 20 ಲಕ್ಷವನ್ನು ನನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದರೆ, ಅದಕ್ಕೆ ನಾನು ತೆರಿಗೆ ಪಾವತಿಸಬೇಕೇ? ನಾನು ಐ.ಟಿ. ವಿವರ ಸಲ್ಲಿಸುತ್ತಿಲ್ಲ. ತಾಯಿಗೆ 90 ವರ್ಷ ವಯಸ್ಸು, ನನಗೆ 68 ವರ್ಷ ವಯಸ್ಸು. ಅವರಿಗೆ ತಂದೆಯ ಸರ್ಕಾರಿ ಪಿಂಚಣಿ ಬರುತ್ತದೆ. ಪಿಂಚಣಿ ಖಾತೆಯಿಂದ ನನಗೆ ಹಣ ವರ್ಗಾವಣೆ ಮಾಡುತ್ತಾರೆ. ತೆರಿಗೆ ಬರದಂತೆ ಮಾಡಲು ಮಾರ್ಗ ಏನು?**

ಉತ್ತರ: ನೀವು ನೀಡಿರುವ ಮಾಹಿತಿಯಂತೆ, ನಿಮ್ಮ ತಾಯಿಯ ಖಾತೆಯಿಂದ ₹ 20 ಲಕ್ಷ ನಿಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಉದ್ದೇಶವಿದೆ. ಆದಾಯ ತೆರಿಗೆಗೆ ಸಂಬಂಧಿಸಿದ ಸಾಮಾನ್ಯ ನಿಯಮದ ಪ್ರಕಾರ, ವ್ಯಕ್ತಿಯೊಬ್ಬ ಒಂದು ವರ್ಷದಲ್ಲಿ ಒಟ್ಟಾರೆ ₹ 50,000ಕ್ಕಿಂತ ಅಧಿಕ ಮೊತ್ತವನ್ನು ಯಾರಿಂದ ಉಡುಗೊರೆಯಾಗಿ ಪಡೆದರೂ ತೆರಿಗೆ ಅನ್ವಯವಾಗುತ್ತದೆ. ಹೀಗಾಗಿ ಆ ಮೊತ್ತವನ್ನು ಸ್ವೀಕರಿಸಿದ ವ್ಯಕ್ತಿ ತೆರಿಗೆ ಕಟ್ಟಬೇಕಾಗುತ್ತದೆ. ಆದರೆ ಈ ಸಾಮಾನ್ಯ ನಿಯಮಕ್ಕೆ ಕೆಲವೊಂದು ವಿನಾಯಿತಿಗಳಿವೆ. ಆದಾಯ ತೆರಿಗೆಯ ಸೆಕ್ಷನ್ 56(2)ರ ಅನ್ವಯ ಸಂಬಂಧಿಕರು ನೀಡುವ ಉಡುಗೊರೆಗೆ ತೆರಿಗೆ ವಿನಾಯಿತಿ ಇದೆ. ಇಲ್ಲಿ ನಿಮ್ಮ ಹಣದ ವ್ಯವಹಾರ ಸಮೀಪದ ಸಂಬಂಧಿಕರ ನಡುವೆ ನಡೆಯುತ್ತದೆ. ಹೀಗಾಗಿ ತೆರಿಗೆ ಇರುವುದಿಲ್ಲ. ಆದರೆ ಅದಕ್ಕೆ ಅಗತ್ಯವಿರುವ ಪೂರಕ ದಾಖಲೆಯಾಗಿ 'ಗಿಫ್ಟ್ ಡೀಡ್' ದಾಖಲಿಸಿಕೊಳ್ಳುವುದು ಸೂಕ್ತ.

ನಿಮ್ಮ ತಾಯಿ ಸುಮಾರು 90 ವರ್ಷ ವಯಸ್ಸಿನ 'ಅತಿ ಹಿರಿಯ ನಾಗರೀಕರು'. ಅವರಿಗೆ ಅನ್ವಯವಾಗುವ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ₹ 5 ಲಕ್ಷ. ಅದರ ಮೇಲಷ್ಟೇ ತೆರಿಗೆ ಅನ್ವಯವಾಗುತ್ತದೆ. ನೀವು 'ಹಿರಿಯ ನಾಗರೀಕರು'. ನಿಮಗೆ ಅನ್ವಯಿಸುವ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ₹ 3 ಲಕ್ಷ. ಹೀಗಾಗಿ, ನಿಮಗೆ ಈ ಮಿತಿಗಿಂತ ಹೆಚ್ಚಿನ ಯಾವುದೇ ಆದಾಯ ಇಲ್ಲವಾದಲ್ಲಿ ತೆರಿಗೆ ವಿವರ ಸಲ್ಲಿಸುವ ಅಗತ್ಯವಿಲ್ಲ.

ರವಿ ಮೂಲಿಮನಿ, ಊರು ನಮೂದಿಸಿಲ್ಲ

- **ಪ್ರಶ್ನೆ: ನಾನು ಷೇರು ಮಾರುಕಟ್ಟೆಯಲ್ಲಿ ₹ 10 ಲಕ್ಷ ಹೂಡಿಕೆ ಮಾಡಿ ₹ 6 ಲಕ್ಷ ಲಾಭ ಗಳಿಸಿದ್ದೇನೆ. ಇದಕ್ಕೆ ತೆರಿಗೆ ಎಷ್ಟು ಪಾವತಿ ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂದು ತಿಳಿಸಿಕೊಡಿ.**

ಉತ್ತರ: ಷೇರು ಮಾರುಕಟ್ಟೆ ವ್ಯವಹಾರದ ಲಾಭ ಅಥವಾ ನಷ್ಟಕ್ಕೆ ಅನುಗುಣವಾಗಿ, ವಿವಿಧ ವರ್ಗಗಳ ಬಂಡವಾಳ ಆಸ್ತಿಯ ಮಾರಾಟಕ್ಕೆ ಅನುಗುಣವಾಗಿ ತೆರಿಗೆ ನಿರ್ಣಯವಾಗುತ್ತದೆ. ನೀವು ಉಲ್ಲೇಖಿಸಿರುವ ಈಕ್ವಿಟಿ ಷೇರುಗಳ ಮಾರಾಟದಿಂದ ಬರುವ ಆದಾಯ ಅಥವಾ ನಷ್ಟವು, ಆದಾಯ ತೆರಿಗೆಯ 'ಬಂಡವಾಳ ವೃದ್ಧಿ' (ಕ್ಯಾಪಿಟಲ್ ಗೇನ್ಸ್) ಶೀರ್ಷಿಕೆಯಡಿ ಉಲ್ಲೇಖವಾಗಿದೆ. ಇಲ್ಲಿ ಆದಾಯವನ್ನು ಮತ್ತಷ್ಟು ವರ್ಗೀಕರಿಸಲಾಗಿದೆ. ಷೇರುಗಳ ಹೂಡಿಕೆಯ ಅವಧಿಗೆ ಅನುಗುಣವಾಗಿ ದೀರ್ಘಾವಧಿಯ ಬಂಡವಾಳ ಲಾಭ-ನಷ್ಟ ಹಾಗೂ ಅಲ್ಪಾವಧಿಯ ಬಂಡವಾಳ ಲಾಭ-ನಷ್ಟ ಎಂಬ ಎರಡು ವರ್ಗಗಳಲ್ಲಿ ಇವುಗಳನ್ನು ವಿಂಗಡಿಸಲಾಗಿದೆ. ಇಲ್ಲಿ ಹೂಡಿಕೆಯ ಅವಧಿ ಎಂದರೆ ಷೇರುಗಳನ್ನು ಖರೀದಿಸಿದ ದಿನಾಂಕದಿಂದ ಮಾರಾಟ ಅಥವಾ ವರ್ಗಾವಣೆಯ ದಿನಾಂಕದವರೆಗೆ ನಿಮ್ಮ ಡಿಮ್ಯಾಟ್ ಖಾತೆಯಲ್ಲಿದ್ದ ಅವಧಿ. ಷೇರು ಮಾರುಕಟ್ಟೆಯಲ್ಲಿ ನೋಂದಾಯಿಸಲಾಗಿರುವ ಈಕ್ವಿಟಿ ಷೇರುಗಳಲ್ಲಿ ವ್ಯವಹರಿಸಿದ್ದರೆ, ಖರೀದಿಸಿದ 12 ತಿಂಗಳೊಳಗೆ ಮಾರಾಟ ಮಾಡಿದಾಗ ಹೂಡಿಕೆದಾರ ಅಲ್ಪಾವಧಿಯ ಬಂಡವಾಳ ಲಾಭ ಅಥವಾ ಅಲ್ಪಾವಧಿಯ ಬಂಡವಾಳ ನಷ್ಟ ಕಾಣುತ್ತಾನೆ. ಈ ಅವಧಿ 12 ತಿಂಗಳಿಗಿಂತ ಹೆಚ್ಚಾದಾಗ, ಅದು ದೀರ್ಘಾವಧಿಯ ಬಂಡವಾಳ ಲಾಭ - ನಷ್ಟವಾಗುತ್ತದೆ. ಎಲ್ಲರೂ ತಿಳಿದಂತೆ, ಷೇರುಗಳನ್ನು ಖರೀದಿ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಾಗ ಮಾರಾಟಗಾರ ಅಲ್ಪಾವಧಿ ಬಂಡವಾಳ ಲಾಭವನ್ನು ಗಳಿಸುತ್ತಾನೆ. ಖರೀದಿ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾದ ಪರಿಸ್ಥಿತಿಯಲ್ಲಿ ಅಲ್ಪಾವಧಿಯ ಬಂಡವಾಳ ನಷ್ಟ ಹೊಂದುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಯಾವುದೇ ಷೇರನ್ನು ಮಾರಾಟ ಮಾಡಿದಾಗ ಪ್ರತಿ ಷೇರುಗಳ ಹೂಡಿಕೆಯ ಅವಧಿಯನ್ನು ಆಧರಿಸಿ, ದೀರ್ಘಾವಧಿ ಹಾಗೂ ಅಲ್ಪಾವಧಿ ಮಾರಾಟದಿಂದ ಬಂದ ಲಾಭ ಎಷ್ಟು ಎಂದು ಮೊದಲು ವಿಂಗಡಿಸಬೇಕು. ಆದಾಯ ತೆರಿಗೆ ನಿಯಮದಂತೆ, ಇಲ್ಲಿ ಮೊದಲು ಖರೀದಿಸಿದ ಷೇರುಗಳನ್ನು ಮೊದಲು ಮಾರಾಟ ಮಾಡಲಾಗಿದೆ ಎಂದೇ ಪರಿಭಾವಿಸಿ ತೆರಿಗೆ ಲೆಕ್ಕಹಾಕಬೇಕಾಗುತ್ತದೆ.

ಈ ರೀತಿ ಲೆಕ್ಕ ಹಾಕುವಾಗ ಖರೀದಿಗೆ ಸಂಬಂಧಿತ ಬ್ರೋಕರೇಜ್, ಇತರ ಶುಲ್ಕಗಳನ್ನು ಖರೀದಿ ಮೊತ್ತಕ್ಕೆ ಸೇರಿಸಬೇಕು ಹಾಗೂ ಮಾರಾಟ ಮೌಲ್ಯದಲ್ಲೂ ಇಂತಹ ವೆಚ್ಚಗಳನ್ನು ಕಳೆದು ಉಳಿದ ಮೊತ್ತದ ಮೇಲಷ್ಟೇ ಲಾಭ ನಷ್ಟ ನಿರ್ಧಾರವಾಗುತ್ತದೆ. ಅಲ್ಪಾವಧಿಯ ಬಂಡವಾಳ ಲಾಭಗಳಿಗೆ ಶೇ 15ರ ವಿಶೇಷ ತೆರಿಗೆ ದರ ಅನ್ವಯವಾಗುತ್ತದೆ. ಹೀಗಾಗಿ ತೆರಿಗೆದಾರರ ಸ್ಲ್ಯಾಬ್ ದರವು ಏನೇ ಇದ್ದರೂ, ಈ ದರ ಅನ್ವಯವಾಗುತ್ತದೆ.

ನೀವು ನೀಡಿದ ಮಾಹಿತಿಯಿಂದ ಮೇಲೆ ತಿಳಿಸಿರುವ ಯಾವ ವರ್ಗದಲ್ಲಿ ನಿಮ್ಮ ಲಾಭ ಗಳಿಕೆ ಆಗಿದೆ ಎನ್ನುವುದು ಸ್ಪಷ್ಟವಾಗುವುದಿಲ್ಲ. ಹೀಗಾಗಿ ಮೇಲಿನ ಮಾಹಿತಿಯನ್ನು ಸರಿಯಾಗಿ ಗಮನಿಸಿ ನಿಮ್ಮ ತೆರಿಗೆ ನಿರ್ಣಯಿಸಿ. ಲಾಭದ ಮೊತ್ತ ಬಹಳ ಹೆಚ್ಚಿರುವ ಕಾರಣ ನಿಖರ ಡಿಮ್ಯಾಟ್ ವಿವರ ಹಾಗೂ ಖರೀದಿ-ಮಾರಾಟ ಮಾಹಿತಿ, ಲಾಭ-ನಷ್ಟದ ಆಂತರಿಕ ವರ್ಗೀಕರಣ ಇಲ್ಲಿ ಮುಖ್ಯ. ಹೆಚ್ಚಿನ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ಒಂದು ಲಕ್ಷ ರೂಪಾಯಿಗಿಂತ ಹೆಚ್ಚಿನ ದೀರ್ಘಾವಧಿ ಬಂಡವಾಳ ಲಾಭ ಗಳಿಸಿದ್ದರೆ, ಗಳಿಸಿದ ₹ 1 ಲಕ್ಷಕ್ಕಿಂತ ಹೆಚ್ಚಿನ ಲಾಭದ ಮೇಲೆ ಶೇ 10ರ ದರದಲ್ಲಿ ತೆರಿಗೆ ಇರುತ್ತದೆ. ನೀವು ಕೇಳಿರುವಂತೆ, ತೆರಿಗೆಯನ್ನು ಆದಾಯ ತೆರಿಗೆ ಇಲಾಖೆಗೆ ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಆದಾಯ ತೆರಿಗೆ ಪ್ರಮಾಣ ಇಳಿಕೆ ಸಾಧ್ಯತೆ

ನವದೆಹಲಿ (ರಾಯಿಟರ್ಸ್): ಆದಾಯ ತೆರಿಗೆ ಪಾವತಿ ಮಾಡುವವರಿಗೆ ಜಾರಿಗೆ ತರಲಾಗಿರುವ ಹೊಸ ತೆರಿಗೆ ಯೋಜನೆ ಅಡಿಯಲ್ಲಿ ಕಡಿತ ಮಾಡುವ ತೆರಿಗೆ ಪ್ರಮಾಣ ತಗ್ಗಿಸಲು ಕೇಂದ್ರ ಸರ್ಕಾರ ಪರಿಶೀಲನೆ ನಡೆಸಿದೆ. ಈ ಕುರಿತು ಬಜೆಟ್‌ನಲ್ಲಿ ಘೋಷಣೆ ಇರುವ ಸಾಧ್ಯತೆ ಇದೆ.

ತೆರಿಗೆ ಪ್ರಮಾಣ ಕಡಿಮೆ ಮಾಡುವ ಬಗ್ಗೆ ಅಂತಿಮ ತೀರ್ಮಾನವನ್ನು ಪ್ರಧಾನಿಯವರ ಕಚೇರಿ ತೆಗೆದುಕೊಳ್ಳಲಿದೆ ಎಂದು ಮೂಲಗಳು ಹೇಳಿವೆ. ಕೇಂದ್ರ ಹಣಕಾಸು ಸಚಿವಾಲಯವು ಈ ಕುರಿತು ಪ್ರತಿಕ್ರಿಯೆ ನೀಡಿಲ್ಲ. ಹೊಸ ತೆರಿಗೆ ಯೋಜನೆಯನ್ನು 2020ರಲ್ಲಿ ಘೋಷಿಸಲಾಗಿದೆ. ಇದನ್ನು ಆಯ್ಕೆ ಮಾಡಿಕೊಳ್ಳುವುದು ಆದಾಯ ತೆರಿಗೆ ಪಾವತಿದಾರರ ಪಾಲಿಗೆ ಐಚ್ಛಿಕ. ಆದರೆ, ಮನೆ ಬಾಡಿಗೆ, ವಿಮೆ ಸೇರಿ ಹಲವು ತೆರಿಗೆ ವಿನಾಯಿತಿಗಳು ಇದಕ್ಕೆ ಅನ್ವಯವಾಗದ ಕಾರಣ ಆದಾಯ ತೆರಿಗೆ ಪಾವತಿದಾರರ ನಡುವೆ ಜನಪ್ರಿಯ ಆಗಿಲ್ಲ ಎಂದಿದ್ದಾರೆ ತಜ್ಞರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು -	500
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	22,500-40,000
ಹಳತು	48,000-54,500
ಭದ್ರಾವತಿ	
ರಾಶಿ	38,199-46,109
ಚನ್ನಗಿರಿ	
ರಾಶಿ	45,299-46,599
ಕಾರ್ಕಳ	
ಹೊಸತು	30,000-40,000
ಹಳತು	40,000-54,500
ಕುಂದಾಪುರ	
ಹಳೆಚಾಲಿ	40,000-49,500
ಹೊಸಚಾಲಿ	30,000-37,500
ಮಡಿಕೇರಿ	
ಹಸಿ	45,697-45,697
ಪುತ್ತೂರು	
ಹೊಸತು	33,000-40,000
ಸಾಗರ	
ಚಾಲಿ	38,899-39,299
ಕೆಂಪುಗೋಟು	32,899-33,299
ರಾಶಿ	42,899-46,199
ಸಿಪ್ಪೆಗೋಟು	5,490-21,629
ಶಿವಮೊಗ್ಗ	
ಬೆಟ್ಟೆ	40,009-52,800
ಗೊರಬಲು	18,000-35,709
ರಾಶಿ	38,100-46,199
ಸರಕು	51,159-79,196
ಸಿದ್ದಾಪುರ	
ಬಿಳಿಗೋಟು	26,799-33,499
ಚಾಲಿ	38,809-41,899
ಕೋಕ	24,899-31,899
ಹೊಸಚಾಲಿ	31,909-35,469
ಕೆಂಪುಗೋಟು	30,012-32,800
ರಾಶಿ	42,509-46,209
ತಟ್ಟಿಬೆಟ್ಟೆ	38,019-44,899
ಶಿರಸಿ	
ಬೆಟ್ಟೆ	24,099-42,899
ಬಿಳಿಗೋಟು	18,699-36,099
ಚಾಲಿ	35,346-44,000
ಕೆಂಪುಗೋಟು	25,296-36,719
ರಾಶಿ	40,879-46,299
ಯಲ್ಲಾಪುರ	
ಆಪಿ	52,765-60,495
ಬಿಳಿಗೋಟು	24,899-34,810
ಕೋಕ	15,109-29,832
ಹಳೆಚಾಲಿ	36,410-43,609
ಹೊಸಚಾಲಿ	32,899-36,000
ಕೆಂಪುಗೋಟು	26,299-35,499
ರಾಶಿ	45,000-51,299
ತಟ್ಟಿಬೆಟ್ಟೆ	36,919-44,967

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13750	13700	13750	151.70 ಸೆಂಟ್ಸ್
ಎಸಿ	6720	6800	6000	
ಆರ್‌ಪಿ	8400	8300	7925	ಲಂಡನ್
ಆರ್‌ಸಿ	4500	162	4200	1907 ಡಾಲರ್ಸ್

ಚೀನಾ: 60 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ತಗ್ಗಿದ ಜನನ ಪ್ರಮಾಣ

ಬೀಜಿಂಗ್ (ಎಎಫ್‌ಪಿ): ದೇಶದಲ್ಲಿ ಜನನ ಪ್ರಮಾಣದಲ್ಲಿ ಕುಸಿತವಾಗಿದೆ. ಈ ಕಾರಣದಿಂದಾಗಿ, ಕಳೆದ 60 ವರ್ಷಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಜನಸಂಖ್ಯೆಯಲ್ಲಿ ಕುಸಿತ ಕಂಡುಬಂದಿದೆ ಎಂದು ಚೀನಾ ಮಂಗಳವಾರ ಹೇಳಿದೆ.

ನ್ಯಾಷನಲ್ ಬ್ಯುರೊ ಆಫ್ ಸ್ಟ್ಯಾಟಿಸ್ಟಿಕ್ಸ್ (ಎನ್‌ಬಿಎಸ್) ಈ ಕುರಿತ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಇದು ದೇಶದ ಹಣಕಾಸು, ಸಾಮಾಜಿಕ ವಿದ್ಯಮಾನಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಆರ್ಥಿಕ ವಿಶ್ಲೇಷಕರು ಎಚ್ಚರಿಸಿದ್ದಾರೆ.

140 ಕೋಟಿಯಷ್ಟು ಜನಸಂಖ್ಯೆ ಇರುವ ದೇಶದಲ್ಲಿ ಜನನ ಪ್ರಮಾಣ ದಾಖಲೆಯ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಜನಸಂಖ್ಯೆಯಲ್ಲಿನ ಈ ದಿಢೀರ್ ಕುಸಿತವು ಆರ್ಥಿಕ ಬೆಳವಣಿಗೆ ಹಾಗೂ ಸಾರ್ವಜನಿಕ ಆದಾಯದ ಮೇಲೂ ಪರಿಣಾಮ ಬೀರುತ್ತದೆ ಎಂದಿದ್ದಾರೆ.

2021ರಲ್ಲಿನ ಜನಸಂಖ್ಯೆ ಬೆಳವಣಿಗೆ ದರಕ್ಕೆ ಹೋಲಿಸಿದರೆ, 2022ರಲ್ಲಿನ ಜನಸಂಖ್ಯೆ ಪ್ರಮಾಣದಲ್ಲಿ 8.5 ಲಕ್ಷದಷ್ಟು ಇಳಿಕೆಯಾಗಿದೆ. ಈ ಅವಧಿಯಲ್ಲಿ, ಜನಿಸಿದವರ ಸಂಖ್ಯೆ 95 ಲಕ್ಷ ಇದ್ದರೆ, ಮರಣ ಹೊಂದಿದವರ ಸಂಖ್ಯೆ 1.41 ಕೋಟಿ ದಾಖಲಾಗಿದೆ ಎಂದು ಎನ್‌ಬಿಎಸ್ ತಿಳಿಸಿದೆ.

ಜೀವನ ನಿರ್ವಹಣೆ ವೆಚ್ಚದಲ್ಲಿ ಹೆಚ್ಚಳ, ಉದ್ಯೋಗ ಕೈಗೊಳ್ಳುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು, ಉನ್ನತ ಶಿಕ್ಷಣ ಪಡೆಯಲು ಒಲವು ಹೆಚ್ಚಾಗುತ್ತಿರುವುದು ಕೂಡ ಇಂಥ ವಿದ್ಯಮಾನಕ್ಕೆ ಇತರ ಕಾರಣಗಳಾಗಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಜನಸಂಖ್ಯೆಯಲ್ಲಿ ಇಳಿಕೆ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಶಾಂಘೈ ನಿವಾಸಿಯೊಬ್ಬರು, 'ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಕೋವಿಡ್ ಪಿಡುಗು ಬದುಕನ್ನೇ ಹಾಳು ಮಾಡಿದೆ. ಇಂಥ ಸಂದರ್ಭದಲ್ಲಿ ಮಕ್ಕಳನ್ನು ಪಡೆಯಲು ಯಾರು ಇಷ್ಟಪಡುತ್ತಾರೆ' ಎಂದು ಪ್ರಶ್ನಿಸಿದ್ದಾರೆ. 'ಮಕ್ಕಳು ಇಲ್ಲ ಎಂದರೆ, ರಾಜ್ಯ,-ದೇಶಕ್ಕೆ ಭವಿಷ್ಯವೇ ಇಲ್ಲ' ಎಂಬುದಾಗಿ ಒಬ್ಬರು, 'ಮಕ್ಕಳನ್ನು ಹೊಂದುವುದು ಕೂಡ ಸಾಮಾಜಿಕ ಜವಾಬ್ದಾರಿ' ಎಂದು ಕೆಲವರು ಹೇಳಿದ್ದಾರೆ.

ದೆಹಲಿ: ಲೆಫ್ಟಿನೆಂಟ್ ಗವರ್ನರ್ ವಿರುದ್ಧ ವಾಗ್ದಾಳಿ ಮುಂದುವರಿಸಿದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

ಸಕ್ಸೇನಾ ಪಾಳೇಗಾರಿಕೆ ಮನಃಸ್ಥಿತಿಯ ವ್ಯಕ್ತಿ


ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): 'ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಪಾಳೇಗಾರಿಕೆ ಮನಃಸ್ಥಿತಿಯಿಂದ ಬಳಲುತ್ತಿದ್ದಾರೆ. ನಗರದಲ್ಲಿರುವ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ಬಯಕೆ ಅವರಿಗಿಲ್ಲ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಾಗ್ದಾಳಿ ನಡೆಸಿದ್ದಾರೆ.

ಸಕ್ಸೇನಾ ಅವರು ದೆಹಲಿ ಸರ್ಕಾರದ ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿರುವುದನ್ನು ಉಲ್ಲೇಖಿಸಿ ವಿಧಾನಸಭೆಯಲ್ಲಿ ಮಂಗಳವಾರ ಮಾತನಾಡಿ, 'ಶಿಕ್ಷಕರೂ ನನ್ನ ಹೋಂವರ್ಕ್ ಪರೀಕ್ಷಿಸದೆ ಇರುವಷ್ಟು ಬಾರಿ ಲೆಫ್ಟಿನೆಂಟ್ ಗವರ್ನರ್ ಅವರು ನನ್ನ ಕಡತಗಳನ್ನು ಪರಿಶೀಲಿಸಿದ್ದಾರೆ' ಎಂದು ವ್ಯಂಗ್ಯವಾಡಿದ್ದಾರೆ.

'ಲೆಫ್ಟಿನೆಂಟ್ ಗವರ್ನರ್ ನನ್ನ ಮುಖ್ಯೋಪಾಧ್ಯಾಯರಲ್ಲ. ದೆಹಲಿಯ ಜನ ನನ್ನನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದಾರೆ' ಎಂದು ತಿಳಿಸಿದ್ದಾರೆ.

'ತನ್ನಿಂದಾಗಿಯೇ ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಚುನಾವಣೆಯಲ್ಲಿ ಬಿಜೆಪಿ 104 ಸ್ಥಾನಗಳನ್ನು ಗೆದ್ದಿರುವುದಾಗಿ ಸಕ್ಸೇನಾ ಸಭೆಯೊಂದರ ವೇಳೆ ನನ್ನ ಬಳಿ ಹೇಳಿಕೊಂಡಿದ್ದರು. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ದೆಹಲಿಯ ಏಳು ಸ್ಥಾನಗಳನ್ನೂ ಜಯಿಸಲಿದೆ ಎಂದೂ ತಿಳಿಸಿದ್ದರು. ಅವರು ಪಾಳೇಗಾರಿಕೆ ಮನಃಸ್ಥಿತಿಯಿಂದ ಬಳಲುತ್ತಿರುವುದಕ್ಕೆ ಇದುವೇ ನಿದರ್ಶನ' ಎಂದಿದ್ದಾರೆ.

'ಲೆಫ್ಟಿನೆಂಟ್ ಗವರ್ನರ್ ಯಾರು? ಎಲ್ಲಿಂದ ಬಂದಿದ್ದಾರೆ? ಅವರು ನಮ್ಮ ತಲೆ ಮೇಲೆ ಏಕೆ ಕುಳಿತುಬಿಟ್ಟಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ನಮ್ಮ ಮಕ್ಕಳನ್ನು ಎಲ್ಲಿಗೆ ಕಳುಹಿಸಬೇಕು ಎಂಬುದನ್ನು ಅವರು ನಿರ್ಧರಿಸುತ್ತಾರೆಯೇ? ಇಂತಹ ಪಾಳೇಗಾರಿಕೆ ಮನಃಸ್ಥಿತಿಯ ವ್ಯಕ್ತಿಗಳಿಂದಾಗಿಯೇ ನಮ್ಮ ದೇಶವು ಹಿಂದುಳಿದಿದೆ' ಎಂದು ಕಿಡಿಕಾರಿದ್ದಾರೆ.

'ನಾಳೆ ನಾವು ಕೇಂದ್ರದಲ್ಲಿ ಅಧಿಕಾರಕ್ಕೆ ಏರಬಹುದು. ಆಗ ನಮ್ಮ ಸರ್ಕಾರವು ಲೆಫ್ಟಿನೆಂಟ್ ಗವರ್ನರ್ ಮೂಲಕ ಜನರಿಗೆ ಕಿರುಕುಳ ನೀಡುವುದಿಲ್ಲ' ಎಂದಿದ್ದಾರೆ.

'ಸಕ್ಸೇನಾ ಅವರು ಏಕಾಂಗಿಯಾಗಿಯೇ ಯಾವುದೇ ತೀರ್ಮಾನ ಕೈಗೊಳ್ಳುವಂತಿಲ್ಲ. ಆ ಅಧಿಕಾರ ಅವರಿಗಿಲ್ಲ. ಪೊಲೀಸರನ್ನು ನಿಯಂತ್ರಿಸುವುದು, ಜಮೀನು ಹಾಗೂ ಸಾರ್ವಜನಿಕ ಆದೇಶದಂತಹ ವಿಚಾರಗಳಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರ ಅವರಿಗಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ' ಎಂದೂ ಹೇಳಿದ್ದಾರೆ.

ವಿದೇಶಗಳಲ್ಲಿ ಓದುತ್ತಿರುವ ಬಿಜೆಪಿಯವರ ಮಕ್ಕಳ ಪಟ್ಟಿಯನ್ನು ಸದನದಲ್ಲಿ ಪ್ರದರ್ಶಿಸಿದ ಅವರು ಪ್ರತಿಯೊಬ್ಬರಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದಿದ್ದಾರೆ.

ಎಎಪಿ ಪ್ರತಿಭಟನೆ: 'ಸುಪ್ರೀಂ' ಎದುರು ಕೇಂದ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೆಫ್ಟಿನೆಂಟ್ ಗವರ್ನರ್ ಅವರು ಸರ್ಕಾರದ ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿರುವುದನ್ನು ಖಂಡಿಸಿ ಮುಖ್ಯಮಂತ್ರಿ ಕೇಜ್ರಿವಾಲ್ ನೇತೃತ್ವದಲ್ಲಿ ಎಎಪಿ ಶಾಸಕರು ಸೋಮವಾರ ನಡೆಸಿದ್ದ ಪ್ರತಿಭಟನೆಗೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಎದುರು ಮಂಗಳವಾರ ಆಕ್ಷೇಪ ವ್ಯಕ್ತಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠವು ಮಂಗಳವಾರ ಈ ಸಂಬಂಧದ ಅರ್ಜಿ ವಿಚಾರಣೆ ನಡೆಸಿತು. ಈ ವೇಳೆ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಎಎಪಿ ಶಾಸಕರು ನಡೆಸಿರುವ ಪ್ರತಿಭಟನೆ ಕುರಿತ ಮಾಹಿತಿಯನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಸಾಂವಿಧಾನಿಕ ಪೀಠದ ಎದುರು ಅರ್ಜಿಯ ವಿಚಾರಣೆ ಬಾಕಿ ಇರುವಾಗ ಪ್ರತಿಭಟನೆಗಳನ್ನು ನಡೆಸುವಂತಿಲ್ಲ' ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಮತ್ತು ಪಿ.ಎಸ್.ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠಕ್ಕೆ ಅವರು ತಿಳಿಸಿದರು.

ಧರಣಿ: ಬಿಜೆಪಿಯ ಐವರು ಶಾಸಕರ ಅಮಾನತು

ದೆಹಲಿ ವಿಧಾನಸಭೆಯಲ್ಲಿ ಮಂಗಳವಾರ ಆಡಳಿತಾರೂಢ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕಿ ಅತಿಶಿ ಅವರು ಗಮನ ಸೆಳೆಯುವ ಸೂಚನೆ ಮಂಡಿಸುವ ವೇಳೆ ಪ್ರತಿಭಟನೆ ನಡೆಸಿದ ಬಿಜೆಪಿಯ ಐವರು ಶಾಸಕರನ್ನು ಸ್ಪೀಕರ್ ರಾಮ್ ನಿವಾಸ್ ಗೋಯಲ್ ಅವರು ದಿನದ ಮಟ್ಟಿಗೆ ಅಮಾನತು ಮಾಡಿದರು.

ಅಜಯ್ ಮಹಾವರ್, ಜಿತೇಂದ್ರ ಮಹಾಜನ್, ಒ.ಪಿ.ಶರ್ಮಾ, ಅಭಯ್ ವರ್ಮಾ ಮತ್ತು ಅನಿಲ್ ಬಾಜಪೇಯಿ ಅಮಾನತಾದವರು. ಸ್ಪೀಕರ್ ಸೂಚನೆ ಮೇರೆಗೆ ಮಾರ್ಷಲ್‌ಗಳು ಇವರನ್ನು ಸದನದಿಂದ ಹೊರಗೆ ಕಳುಹಿಸಿದರು.

'ತರಬೇತಿಗಾಗಿ ಶಿಕ್ಷಕರನ್ನು ಫಿನ್ಲೆಂಡ್‌ಗೆ ಕಳುಹಿಸುವ ಸರ್ಕಾರದ ಪ್ರಸ್ತಾವನೆಯನ್ನು ಲೆಫ್ಟಿನೆಂಟ್ ಗವರ್ನರ್ ತಿರಸ್ಕರಿಸಿದ್ದಾರೆ. ಇದು ಕಾನೂನು ಬಾಹಿರ ನಡೆ. ಅವರು ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸಿದ್ದಾರೆ. ತಾವು ಬಿಜೆಪಿ ಏಜೆಂಟ್ ಅಲ್ಲ ಎಂಬುದನ್ನು ಮನಗಾಣಬೇಕು' ಎಂದು ಅತಿಶಿ ಹೇಳಿದ್ದಾರೆ.

ಎಎಪಿ ಸರ್ಕಾರದ ಭ್ರಷ್ಟಾಚಾರವನ್ನು ಖಂಡಿಸಿ ಬಿಜೆಪಿ ಶಾಸಕರು ಮಂಗಳವಾರ ಕಪ್ಪು ಬಟ್ಟೆ ಹಾಗೂ ಟರ್ಬನ್‌ಗಳನ್ನು ಧರಿಸಿ ಸದನಕ್ಕೆ ಹಾಜರಾಗಿದ್ದರು.

ಬಿಆರ್‌ಎಸ್ ಸಭೆಯಲ್ಲಿ ಎಎಪಿ, ಎಸ್‌ಪಿ, ಸಿಪಿಐ ನಾಯಕರು

ಹೈದರಾಬಾದ್ (ಪಿಟಿಐ): ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್ ಪಕ್ಷವು ಖಮ್ಮಂ ಪಟ್ಟಣದಲ್ಲಿ ಬುಧವಾರ ಸಾರ್ವಜನಿಕ ಸಭೆ ಆಯೋಜಿಸಿದ್ದು, ಇದರಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಮತ್ತು ಸಿಪಿಐ ನಾಯಕ ಡಿ.ರಾಜಾ ಅವರು ಪಾಲ್ಗೊಳ್ಳಲಿದ್ದಾರೆ.

ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಪ್ರಾದೇಶಿಕ ಪಕ್ಷ ಟಿಆರ್‌ಎಸ್ ಅನ್ನು ರಾಷ್ಟ್ರೀಯ ಪಕ್ಷವಾಗಿ 'ಬಿಆರ್‌ಎಸ್' ಎಂದು ಮರುನಾಮಕರಣ ಮಾಡಿದ ನಂತರ ನಡೆಯುತ್ತಿರುವ ಮೊದಲ ಸಾರ್ವಜನಿಕ ಸಭೆ ಇದು. ವಿರೋಧ ಪಕ್ಷಗಳ ಪ್ರಮುಖ ನಾಯಕರು ಭಾಗಿಯಾಗುತ್ತಿದ್ದು, ದೇಶಕ್ಕೆ ಪರ್ಯಾಯ ರಾಜಕಾರಣದ ಹೊಸ ದಿಕ್ಕು ನೀಡುವ ಉದ್ದೇಶದ ಈ ಸಭೆ ಸಹಜವಾಗಿಯೇ ಮಹತ್ವ ಪಡೆದುಕೊಂಡಿದೆ.

ಅಧಿಕಾರಿ ಸೋಗು: ₹ 23 ಲಕ್ಷ ಬಿಲ್ ನೀಡದೇ ಹೋಟೆಲ್‌ಗೆ ವಂಚನೆ

ನವದೆಹಲಿ (ಪಿಟಿಐ): ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ರಾಜಮನೆತನದ ಹಿರಿಯ ಅಧಿಕಾರಿ ಎಂಬ ಸೋಗಿನಲ್ಲಿ ಇಲ್ಲಿನ ಲೀಲಾ ಪ್ಯಾಲೇಸ್‌ನಲ್ಲಿ ನಾಲ್ಕು ತಿಂಗಳು ವಾಸ್ತವ್ಯ ಹೂಡಿ, ₹23 ಲಕ್ಷ ಬಿಲ್ ಪಾವತಿಸದೇ ವ್ಯಕ್ತಿಯೊಬ್ಬರು ಪರಾರಿಯಾಗಿದ್ದಾರೆ.

ಹೋಟೆಲ್‌ನವರು ಈಗ ಠಾಣೆಗೆ ದೂರು ನೀಡಿದ್ದು, ತಲೆಮರೆಸಿಕೊಂಡಿರುವ 'ವಿಐಪಿ'ಗಾಗಿ ಪೊಲೀಸರು ಶೋಧ ನಡೆಸಿದ್ದಾರೆ.

ನ. 20ರಂದು ಹೋಟೆಲ್‌ನಿಂದ ಪರಾರಿಯಾಗಿದ್ದು, ₹ 23 ಲಕ್ಷ ಬಿಲ್ ಬಾಕಿ ಜೊತೆಗೆ ಕೊಠಡಿಯಲ್ಲಿದ್ದ ಟ್ರೇ ಸೇರಿದಂತೆ ಬೆಲೆ ಬಾಳುವ ವಸ್ತುಗಳನ್ನೂ ಹೊತ್ತೊಯ್ದಿದ್ದ.

ಭಾಗಶಃ ಬಾಕಿ ಚುಕ್ತಾ ಮಾಡಲು ಸೆಪ್ಟೆಂಬರ್‌ನಲ್ಲಿ ₹11.5 ಲಕ್ಷ ಪಾವತಿಸಿದ್ದ. ಬಾಕಿಯಿರುವ ₹23.46 ಲಕ್ಷಕ್ಕೆ, ₹20 ಲಕ್ಷ ಮೊತ್ತದ ಚೆಕ್ ಅನ್ನು ದಿನಾಂಕ ನಮೂದಿಸಿ ನೀಡಿದ್ದ. ನಿಗದಿತ ಅವಧಿಗೆ ಚೆಕ್ ಹಾಜರುಪಡಿಸಿದ್ದು, ಅದು ನಗದೀಕರಣ ಆಗದೆ ಇರುವಾಗ ವಂಚನೆ ಆಗಿರುವುದು ಗೊತ್ತಾಗಿದೆ.


ನವದೆಹಲಿಯಲ್ಲಿ ಮಂಗಳವಾರ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಎನ್‌ಡಿಎಂಸಿ ಸಭಾಂಗಣಕ್ಕೆ ಆಗಮಿಸಿದರು — ಪಿಟಿಐ ಚಿತ್ರ

ರೈಲ್ವೆ ನಿವೃತ್ತ ಅಧಿಕಾರಿಗೆ ಸೇರಿದ 17 ಕೆ.ಜಿ ಚಿನ್ನ ವಶ

ನವದೆಹಲಿ (ಪಿಟಿಐ): ಭುವನೇಶ್ವರದಲ್ಲಿ ರೈಲ್ವೆಯ ನಿವೃತ್ತ ಪ್ರಧಾನ ಮುಖ್ಯ ವ್ಯವಸ್ಥಾಪಕ (ವಾಣಿಜ್ಯ) ಪ್ರಮೋದ್ ಕುಮಾರ್ ಅವರಿಗೆ ಸೇರಿದ ಸ್ಥಳಗಳಲ್ಲಿ ಸಿಬಿಐ ಶೋಧ ನಡೆಸಿದ್ದು, 17 ಕೆ.ಜಿ ಚಿನ್ನ ಮತ್ತು ₹1.57 ಕೋಟಿ ನಗದನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

2022ರ ನವೆಂಬರ್‌ನಲ್ಲಿ ನಿವೃತ್ತರಾಗಿದ್ದ ಅವರ ವಿರುದ್ಧ ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿದ್ದ ಆರೋಪವಿತ್ತು.

ಜೋಶಿಮಠ: 'ಎನ್‌ಟಿಪಿಸಿ ತೊಲಗಲಿ'

520 ಮೆಗಾವಾಟ್‌ನ ಜಲ ವಿದ್ಯುತ್ ಉತ್ಪಾದನೆಯ ತಪೋವನ– ವಿಷ್ಣುಗಢ ಯೋಜನೆಗೆ ವಿರೋಧ

ಜೋಶಿಮಠ (ಪಿಟಿಐ): ಭೂಕುಸಿತದಿಂದ ನಲುಗಿರುವ ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠ ಪಟ್ಟಣದಲ್ಲಿ ಸಂತ್ರಸ್ತರ ಸ್ಥಳಾಂತರ ಮತ್ತು ಅಪಾಯಕಾರಿ ಕಟ್ಟಡಗಳ ತೆರವು ಕಾರ್ಯ ನಡೆಯುತ್ತಿರುವ ಬೆನ್ನಲ್ಲೇ ಈ ಪ್ರದೇಶದಲ್ಲಿ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ (ಎನ್‌ಟಿಪಿಸಿ) ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕೆಂಬ ಸ್ಥಳೀಯರು ಮತ್ತು ಹೋರಾಟಗಾರರ ಬೇಡಿಕೆಯ ಕೂಗು ವ್ಯಾಪಕವಾಗುತ್ತಿದೆ.

'ಎನ್‌ಟಿಪಿಸಿ ಗೋ ಬ್ಯಾಕ್' ಘೋಷಣೆಯ ಪೋಸ್ಟರ್‌ಗಳು ಕೆಲವು ದಿನಗಳಿಂದ ಪಟ್ಟಣದ ಪ್ರಮುಖ ಮಾರುಕಟ್ಟೆಗಳಲ್ಲಿ ಹಲವು ಸಣ್ಣ ಮತ್ತು ದೊಡ್ಡ ಅಂಗಡಿಗಳು, ಮನೆಗಳು, ವಾಹನಗಳು ಮತ್ತು ಜಾಹೀರಾತು ಫಲಕಗಳ ಮೇಲೆ ರಾರಾಜಿಸುತ್ತಿವೆ.

ಎನ್‌ಟಿಪಿಸಿಯ 520 ಮೆಗಾವಾಟ್ ಜಲ ವಿದ್ಯುತ್ ಉತ್ಪಾದನೆಯ ತಪೋವನ– ವಿಷ್ಣುಗಢ ಯೋಜನೆಗೆ ಕೊರೆದಿರುವ 12 ಕಿ.ಮೀ ಸುರಂಗ ಗಂಡಾಂತರ ತಂದೊಡ್ಡಿದೆ ಎಂದು ಸ್ಥಳೀಯರು ಆರೋಪಿಸಿದರು.

'ಎನ್‌ಟಿಪಿಸಿಯ ಕಾಮಗಾರಿ ಹೆಚ್ಚಿನ ಹಾನಿ ಮಾಡಿದೆ. ಈ ಯೋಜನೆ 2012ಕ್ಕೆ ಪೂರ್ಣವಾಗಬೇಕಿತ್ತು, ಆದರೆ ಕಾಮಗಾರಿ ಶುರುವಾಗಿದ್ದೇ ಗಡುವು ಮುಗಿದಾಗ. ಇನ್ನೂ ನಡೆಯುತ್ತಿರುವ ಕಾಮಗಾರಿ ಪಟ್ಟಣದ ಅನೇಕ ಭಾಗಗಳಲ್ಲಿ ಹಲವು ಸಮಸ್ಯೆ ಸೃಷ್ಟಿಸಿದೆ' ಎಂದು ಸ್ಥಳೀಯ ಉದ್ಯಮಿ ಸೂರಜ್ ಕಪ್ರುವಾನ್ ಹೇಳಿದರು.

ಜೋಶಿಮಠ ಬಚಾವೊ ಸಂಘರ್ಷ ಸಮಿತಿ (ಜೆಬಿಎಸ್‌ಎಸ್) ಎನ್‌ಟಿಪಿಸಿಯ ಜಲವಿದ್ಯುತ್ ಯೋಜನೆಗೆ ಸ್ಥಗಿತಕ್ಕೆ ಒತ್ತಾಯಿಸಿ ಸೋಮವಾರ ಅಂಚೆ ಕಚೇರಿ ಎದುರು ಪ್ರತಿಭಟನೆ ನಡೆಸಿತು. ಇದರಲ್ಲಿ ಸಂತ್ರಸ್ತರು ಮತ್ತು ಜನಪ್ರತಿನಿಧಿಗಳು ಪಾಲ್ಗೊಂಡು, 'ಎನ್‌ಟಿಪಿಸಿ ಗೋ ಬ್ಯಾಕ್' ಘೋಷಣೆ ಮೊಳಗಿಸಿದರು.

'ಎನ್‌ಟಿಪಿಸಿ ಸ್ಥಾವರದ ಕೆಲಸ ಈಗ ಸ್ಥಗಿತವಾಗಿದೆ. ತಜ್ಞರು ಸಮೀಕ್ಷೆ ನಡೆಸುತ್ತಿದ್ದು, ಅವರ ವರದಿ ಆಧರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಚಮೋಲಿ ಜಿಲ್ಲಾಧಿಕಾರಿ ಹಿಮಾಂಶು ಖುರಾನಾ ತಿಳಿಸಿದರು.

ಭೂಗರ್ಭದ ಜಲಾಗಾರಕ್ಕೆ ಧಕ್ಕೆ: ತಪೋವನ– ವಿಷ್ಣುಗಢ ಯೋಜನೆಯ ಸುರಂಗ ಕಾಮಗಾರಿಯು 2009ರಲ್ಲಿ ಭೂಗರ್ಭದ ದೊಡ್ಡ ಜಲಮೂಲಕ್ಕೆ ಹಾನಿಮಾಡಿತು. ಇದು ದಿನಕ್ಕೆ 60ರಿಂದ 70 ದಶಲಕ್ಷ ಲೀಟರ್ ನೀರು ಹೊರನುಗ್ಗಲು ದಾರಿಯಾಗಿ, ಭೂಮೇಲ್ಮೈ ಸ್ವರೂಪ ಅಸ್ಥಿರಗೊಳಿಸಿದೆ ಎಂದು ಬೆಂಗಳೂರಿನಲ್ಲಿನ ಭಾರತೀಯ ವಿಜ್ಞಾನ ಸಂಸ್ಥೆಯ ಭೂ ವಿಜ್ಞಾನ ಕೇಂದ್ರದ ಭೂಕಂಪಶಾಸ್ತ್ರಜ್ಞ, ಪ್ರಾಧ್ಯಾಪಕ ಕುಸಾಲಾ ರಾಜೇಂದ್ರನ್ ಹೇಳಿದರು.


ತಪೋವನ– ವಿಷ್ಣುಗಢ ಜಲ ವಿದ್ಯುತ್ ಯೋಜನೆಯ ನೋಟ

ಭೂಕುಸಿತ: ಹಾನಿಯಾದ ಮನೆಗಳ ತೆರವಿಗೆ ಸಮೀಕ್ಷೆ

ಗೋಪೇಶ್ವರ (ಪಿಟಿಐ): ಭೂಕುಸಿತದಿಂದ ಬಿರುಕುಬಿಟ್ಟು ಅಪಾಯಕಾರಿ ಸ್ಥಿತಿಯಲ್ಲಿರುವ ಮನೆ– ಕಟ್ಟಡಗಳನ್ನು ನೆಲಸಮಗೊಳಿಸಲು ಜಿಲ್ಲಾಡಳಿತ ಇಲ್ಲಿನ ಜೆ.ಪಿ ಕಾಲೋನಿಯಲ್ಲಿ ಮಂಗಳವಾರ ತಾಂತ್ರಿಕ ಸಮೀಕ್ಷೆ ಆರಂಭಿಸಿದೆ.

ಅತೀ ಹೆಚ್ಚು ಹಾನಿಪೀಡಿತ ಜೋಶಿಮಠದ ಮಾರ್ವಾರಿ ಪ್ರದೇಶದ ಜೆ.ಪಿ. ಕಾಲೋನಿಯ ಬಹುತೇಕ ಮನೆಗಳು ಒಂದೇ ಮಹಡಿ ಮತ್ತು ಶೀಟುಗಳ ಮೇಲ್ಚಾವಣಿ ಹೊಂದಿವೆ. ಇವುಗಳ ತೆರವಿಗೆ ಹೆಚ್ಚು ಸಮಯ ಬೇಕಿಲ್ಲ ಎಂದು ಸಮೀಕ್ಷೆಯಲ್ಲಿ ತೊಡಗಿರುವ, ಹೆಸರು ಹೇಳಬಯಸದ ಎಂಜಿನಿಯರ್ ಒಬ್ಬರು ತಿಳಿಸಿದರು.

ಕೆಲವು ಕಟ್ಟಡಗಳಲ್ಲಿ ಬಿರುಕುಗಳು 1 ರಿಂದ 2 ಮಿಲಿ ಮೀಟರ್ ಅಗಲವಾಗಿವೆ. ಆದರೆ, ಅವು ಹೊಸ ಬಿರುಕುಗಳಲ್ಲ. ಹಾನಿಗೊಳಗಾದ ಕಟ್ಟಡಗಳು ಮತ್ತು ಮೂಲಸೌಕರ್ಯಗಳ ತೆರವು ಪೀಡಿತ ಪ್ರದೇಶದ ಮೇಲಿನ ಹೊರೆ ತಗ್ಗಿಸುವುದಾಗಿದೆ ಎಂದು ವಿಪತ್ತು ನಿರ್ವಹಣಾ ಕಾರ್ಯದರ್ಶಿ ರಂಜಿತ್ ಕುಮಾರ್ ಸಿನ್ಹಾ ಹೇಳಿದರು.

ವಿಮಾನದ ತುರ್ತು ನಿರ್ಗಮನ ದ್ವಾರ ತೆರೆದ ತೇಜಸ್ವಿ ಸೂರ್ಯ

ಒಂದನೇ ಪುಟದಿಂದ...

ಪ್ರಯಾಣಿಕರ ಸುರಕ್ಷತೆಗೆ ಧಕ್ಕೆ ಉಂಟುಮಾಡಿದ, ಅವರ ಜೀವದ ಜೊತೆ ಚೆಲ್ಲಾಟವಾಡಿದ್ದ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿರುವುದು ಏಕೆ? ಅಧಿಕಾರಿಗಳು ಈ ವಿಚಾರವನ್ನು ಒಂದು ತಿಂಗಳವರೆಗೂ ಗೌಪ್ಯವಾಗಿ ಇಟ್ಟಿದ್ದರ ಹಿಂದಿನ ಉದ್ದೇಶವೇನು ಎಂದು ವಿಮಾನಯಾನ ತಜ್ಞರು ಪ್ರಶ್ನಿಸಿದ್ದಾರೆ. ತುರ್ತು ನಿರ್ಗಮನ ದ್ವಾರ ತೆರೆದಿದ್ದವರ ವಿರುದ್ಧ ಈ ಹಿಂದೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು ಎಂದೂ ಹೇಳಿದ್ದಾರೆ.

'ಡಿ.10ರಂದು 6ಇ7339 ವಿಮಾನದಲ್ಲಿ ನಡೆದಿದ್ದೇನು? ವಿಮಾನಯಾನ ಸಚಿವಾಲಯದಿಂದ ಬಂದ ಒಂದು ಕರೆಯ ಬಳಿಕ ಎಲ್ಲವೂ ತಣ್ಣಗಾಗಿದ್ದೇಕೆ? ಒಬ್ಬನ ಅಚಾತುರ್ಯದಿಂದಾಗಿ ನಾವು 70 ಜನರ ಜೀವ ಕಳೆದುಕೊಳ್ಳಬೇಕಾಗಿತ್ತು' ಎಂದು ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಅವರು ಮಂಗಳವಾರ ಟ್ವೀಟ್ ಮಾಡಿದ ಬಳಿಕ ಈ ವಿಚಾರ ಬಹಿರಂಗವಾಗಿದೆ.

ಆಕಸ್ಮಿಕವಾಗಿ ನಡೆದ ಘಟನೆ

'ವಿಮಾನ ಹೊರಡಲು ಸಿದ್ಧವಾಗಿದ್ದ ವೇಳೆ ಪ್ರಯಾಣಿಕರೊಬ್ಬರು ಆಕಸ್ಮಿಕವಾಗಿ ತುರ್ತು ನಿರ್ಗಮನ ದ್ವಾರ ತೆರೆದಿದ್ದರು. ಅದಕ್ಕಾಗಿ ತಕ್ಷಣವೇ ಕ್ಷಮೆ ಕೋರಿದ್ದರು. ಬಳಿಕ ಎಂಜಿನಿಯರ್‌ಗಳು ಪರಿಶೀಲನೆ ನಡೆಸಿ ವಿಮಾನ ಹಾರಾಟಕ್ಕೆ ಹಸಿರು ನಿಶಾನೆ ತೋರಿದ್ದರು' ಎಂದು ಇಂಡಿಗೊ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿಮಾನವು ಹಾರಾಟ ನಡೆಸಲು ಸಿದ್ಧವಾಗಿದ್ದ ವೇಳೆ ನಮ್ಮನ್ನೆಲ್ಲಾ ಏಕಾಏಕಿ ಕೆಳಗಿಳಿಸಲಾಯಿತು. ಆ ಕ್ಷಣದಲ್ಲಿ ಏನಾಗುತ್ತಿದೆ ಎಂಬುದು ನಮಗೆ ಅರ್ಥವಾಗಿರಲಿಲ್ಲ

ಕೆ.ಟಿ.ಅರಸಕುಮಾರ್, ಡಿಎಂಕೆ ವಕ್ತಾರ, ವಿಮಾನದ ಪ್ರಯಾಣಿಕ

ಇದಾಗಿ ಒಂದು ಗಂಟೆಯ ನಂತರ ಡಿಜಿಸಿಎ ಹಾಗೂ ಇಂಡಿಗೊ ಸಂಸ್ಥೆ ಘಟನೆ ನಡೆದಿರುವುದನ್ನು ಒಪ್ಪಿಕೊಂಡಿದ್ದವು. ಆದರೆ ಪ್ರಯಾಣಿಕನ ಹೆಸರು ಬಹಿರಂಗಪಡಿಸಿರಲಿಲ್ಲ. ಚೆನ್ನೈ ವಿಮಾನ ನಿಲ್ದಾಣದ ಮೂಲಗಳು ಹಾಗೂ ಆ ವಿಮಾನದಲ್ಲಿ ಪ್ರಯಾಣಿಸಿದ್ದವರು ಆ ವ್ಯಕ್ತಿ ತೇಜಸ್ವಿ ಸೂರ್ಯ ಎಂದು 'ಪ್ರಜಾವಾಣಿ'ಗೆ ಖಚಿತಪಡಿಸಿದ್ದಾರೆ.

'ಬಸ್‌ನಲ್ಲಿ ಕುಳಿತಿರುವ ವೇಳೆಯೇ ಸೂರ್ಯ ಕ್ಷಮಾಪಣಾ ಪತ್ರ ಬರೆದು ಅಧಿಕಾರಿಗಳಿಗೆ ನೀಡಿದರು. ಬಳಿಕ ಎಲ್ಲರಿಗೂ ವಿಮಾನದೊಳಗೆ ಬಿಡಲಾಯಿತು. ಸೂರ್ಯ ಹಾಗೂ ಅಣ್ಣಾಮಲೈ ಅವರಿಗೆ ನಿಯೋಜಿತ ಆಸನದ ಬದಲು ಬೇರೆಡೆ ಆಸನದ ವ್ಯವಸ್ಥೆ ಮಾಡಿಕೊಡಲಾಯಿತು' ಎಂದು ಪ್ರಯಾಣಿಕರೊಬ್ಬರು ಹೇಳಿದ್ದಾರೆ.

ಪ್ರಕರಣ ಕುರಿತು ಪ್ರತಿಕ್ರಿಯೆ ಪಡೆಯಲು ತೇಜಸ್ವಿ ಸೂರ್ಯ ಅವರನ್ನು ಸಂಪರ್ಕಿಸಲಾಯಿತು. ಅವರು ದೂರವಾಣಿ ಕರೆಗೆ ಲಭ್ಯರಾಗಲಿಲ್ಲ.

ನಗರ ಕೌನ್ಸಿಲ್ ಸದಸ್ಯೆಯಾದ ಭಾರತೀಯ ಅಮೆರಿಕನ್ ಜನನಿ

ಹ್ಯೂಸ್ಟನ್ (ಪಿಟಿಐ): ವಕೀಲೆ, ಭಾರತೀಯ ಅಮೆರಿಕನ್ ಜನನಿ ರಾಮಚಂದ್ರನ್ ಅವರು ಕ್ಯಾಲಿಫೋರ್ನಿಯಾದ ಓಕ್‌ಲ್ಯಾಂಡ್ ನಗರದ ಕೌನ್ಸಿಲ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ ಈ ಸ್ಥಾನಕ್ಕೇರಿದ ಅತಿ ಕಿರಿಯ ಮತ್ತು ಎಲ್‌ಜಿಬಿಟಿಕ್ಯು ಸಮುದಾಯದ ಮೊದಲ ಮಹಿಳೆ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಜ.10ರಂದು ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ರಾಮಚಂದ್ರನ್ ಅವರು ಸೀರೆ ಧರಿಸಿದ್ದರು. ಈ ಬಗ್ಗೆ ಸಂತಸ ವ್ಯಕ್ತಪಡಿಸಿ ಅವರು ಟ್ವೀಟ್ ಮಾಡಿದ್ದಾರೆ.

ಸಮನ್ಸ್: 'ಸುಪ್ರೀಂ' ಮೊರೆ ಹೋದ ರಾಣಾ ಅಯ್ಯೂಬ್

ನವದೆಹಲಿ: ಕೋವಿಡ್ ಸಂತ್ರಸ್ತರ ನಿಧಿ ದುರುಪಯೋಗಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಪ್ರಕರಣದಲ್ಲಿ ಗಾಜಿಯಾಬಾದ್ ನ್ಯಾಯಾಲಯವು ತಮ್ಮ ವಿರುದ್ಧ ಹೊರಡಿಸಿದ್ದ ಸಮನ್ಸ್ ಪ್ರಶ್ನಿಸಿ ಪತ್ರಕರ್ತೆ ರಾಣಾ ಅಯ್ಯೂಬ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠದ ಮುಂದೆ ವಕೀಲೆ ವೃಂದಾ ಗ್ರೋವರ್ ಅವರು ಮಂಗಳವಾರ ಈ ಪ್ರಕರಣದ ವಿಚಾರ ಪ್ರಸ್ತಾಪಿಸಿದರು. ಈ ಕುರಿತು ಜನವರಿ 23ರಂದು ವಿಚಾರಣೆ ನಡೆಸಲು ನ್ಯಾಯಪೀಠವು ಸಮ್ಮತಿಸಿದೆ.

ಕಾರಿನಡಿ ಯುವತಿ ಎಳೆದೊಯ್ದ ಪ್ರಕರಣ: ಆರೋಪಿಗೆ ಜಾಮೀನು

ನವದೆಹಲಿ (ಪಿಟಿಐ): ಕಾರಿನಡಿ ಸಿಲುಕಿದ್ದ ಯುವತಿಯ ಮೃತದೇಹ ಎಳೆದೊಯ್ದಿದ್ದ ಪ್ರಕರಣದ ಆರೋಪಿಗಳಲ್ಲಿ ಒಬ್ಬನಾದ ಆಶುತೋಶ್ ಭಾರದ್ವಾಜ್‌ಗೆ ಇಲ್ಲಿಯ ಸ್ಥಳೀಯ ನ್ಯಾಯಾಲಯವು ಜಾಮೀನು ನೀಡಿದೆ.

ಷರತ್ತುಬದ್ಧ ಜಾಮೀನು ಇದಾಗಿದ್ದು, ₹50,000 ಮೊತ್ತದ ಬಾಂಡ್ ನೀಡಲು ನ್ಯಾಯಾಲಯ ಹೇಳಿದೆ. ಸಾಕ್ಷ್ಯವನ್ನು ತಿರುಚುವಂತಿಲ್ಲ, ರಾಷ್ಟ್ರ ರಾಜಧಾನಿ ಬಿಟ್ಟು ಹೊರಗೆ ಪ್ರಯಾಣಿಸುವಂತಿಲ್ಲ, ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡುವಂತಿಲ್ಲ ಮತ್ತು ಅಧಿಕಾರಿಗಳು ಕರೆದಾಗ ಬಂದು ತನಿಖೆಗೆ ಸಹಕರಿಸಬೇಕು ಎಂಬ ಅಂಶಗಳು ಷರತ್ತಿನಲ್ಲಿ ಸೇರಿವೆ.

ಆಶುತೋಶ್ ಪರ ವಕೀಲ ಶಿಲ್ಪೇಶ್ ಚೌಧರಿ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕಳೆದ ವಾರ ತಿರಸ್ಕರಿಸಿದ್ದರು. ನಂತರ ಅವರು ಸೆಷನ್ಸ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಸೆಷನ್ಸ್ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದ್ದಾರೆ.

ನಾಲ್ವರ ವಿರುದ್ಧ ಆರೋಪಪಟ್ಟಿ: 'ಕಂಝಾವಾಲಾ ಅಪಘಾತ' ಪ್ರಕರಣದಲ್ಲಿ ನಾಲ್ವರು ಆರೋಪಿಗಳ ಮೇಲೆ ಪೊಲೀಸರು ಕೊಲೆ ಆರೋಪ ಹೊರಿಸಿರುವುದಾಗಿ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಘಟನೆಯ ಸಮಯದಲ್ಲಿ ಕಾರಿನೊಳಗಿದ್ದ ನಾಲ್ವರು ಆರೋಪಿಗಳಾದ ಅಮಿತ್ ಖನ್ನಾ (25), ಕೃಷ್ಣ (27), ಮಿಥುನ್ (26) ಮತ್ತು ಮನೋಜ್ ಮಿತ್ತಲ್ ಮೇಲೆ ಕೊಲೆ ಆರೋಪದಡಿ ಪ್ರಕರಣ ದಾಖಲಿಸಲಾಗಿದ್ದು, ಇದನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಬಂಧಿಸಲಾಗಿದ್ದ ಏಳು ಆರೋಪಿಗಳ ಪೈಕಿ ಆರು ಮಂದಿ ಮೇಲೆ ಆರಂಭದಲ್ಲಿ ಉದ್ದೇಶ ಪೂರ್ವಕವಲ್ಲದ (ಸೆಕ್ಷನ್ 304) ನರಹತ್ಯೆ ಆರೋಪ ಹೊರಿಸಲಾಗಿತ್ತು.

ಕ್ಷಿಪಣಿ ದಾಳಿ: ಮೃತರ ಸಂಖ್ಯೆ 44ಕ್ಕೆ ಏರಿಕೆ

ಕೀವ್/ಮಾಸ್ಕೊ (ಎಪಿ/ಎಎಫ್‌ಪಿ): ಉಕ್ರೇನ್‌ನ ನಿಪ್ರೊ ನಗರದ ಅಪಾರ್ಟ್‌ಮೆಂಟ್‌ಗಳ ಮೇಲೆ ರಷ್ಯಾ ವಾರಾಂತ್ಯದಲ್ಲಿ ನಡೆಸಿದ ಭೀಕರ ಕ್ಷಿಪಣಿ ದಾಳಿಯಲ್ಲಿ ಐವರು ಮಕ್ಕಳು ಸೇರಿ ಮೃತರ ಸಂಖ್ಯೆ ಮಂಗಳವಾರ 44ಕ್ಕೆ ತಲುಪಿದೆ.

79ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 1,700 ನಿವಾಸಿಗಳಿದ್ದ ಅಪಾರ್ಟ್‌ಮೆಂಟ್‌ಗಳ ಮೇಲೆ ರಷ್ಯಾ ಸೇನೆ ಕೆಎಚ್–22 ಕ್ಷಿಪಣಿ ಉಡಾಯಿಸಿತ್ತು. ಇದರಿಂದ 72 ಅಪಾರ್ಟ್‌ಮೆಂಟ್‌ಗಳು ಸಂಪೂರ್ಣ ಧ್ವಂಸಗೊಂಡಿದ್ದು, 236 ದುರಸ್ತಿಪಡಿಸಲಾಗದಷ್ಟು ಹಾನಿಗೀಡಾಗಿವೆ. 400 ಜನರು ನೆಲೆ ಕಳೆದುಕೊಂಡಿದ್ದಾರೆ. ಸುಮಾರು 24 ಜನರು ನಾಪತ್ತೆಯಾಗಿದ್ದಾರೆ.

ಆಕಸ್ಮಿಕ ಸ್ಫೋಟ; ಮೂವರ ಸಾವು: ರಷ್ಯಾದ ಬೆಲ್ಗೊರೊಡ್‌ನಲ್ಲಿ ಸೇನಾ ನೆಲೆಗಳು ಮತ್ತು ತರಬೇತಿ ಮೈದಾನದ ಸಮೀಪ ಭಾನುವಾರ ಗ್ರೆನೇಡ್ ನಿರ್ವಹಣೆಯಲ್ಲಿ ಯೋಧನೊಬ್ಬ ಎಸಗಿದ ಪ್ರಮಾದದಿಂದ ಮದ್ದುಗುಂಡುಗಳು ಸ್ಫೋಟಿಸಿ, ಏಳು ಮಂದಿ ಮೃತಪಟ್ಟಿರುವುದಾಗಿ 'ಇಂಟರ್‌ಫ್ಯಾಕ್ಸ್' ಸುದ್ದಿ ಸಂಸ್ಥೆ ಮಂಗಳವಾರ ವರದಿ ಮಾಡಿದೆ. ನಾಪತ್ತೆಯಾದ ಇನ್ನು ನಾಲ್ವರಿಗೆ ಶೋಧ ಕಾರ್ಯ ನಡೆಯುತ್ತಿದೆ. ಆರಂಭದಲ್ಲಿ ಮೂವರು ಮೃತಪಟ್ಟಿರುವುದಾಗಿ ರಷ್ಯಾದ 'ರಿಯಾ ನೊವೊಸ್ತಿ' ಸುದ್ದಿಸಂಸ್ಥೆ ವರದಿ ಮಾಡಿದೆ.

ಜಾಗತಿಕ ಭಯೋತ್ಪಾದಕ ಪಟ್ಟಿಗೆ ಎಲ್‌ಇಟಿ ಉಗ್ರ ಮಕ್ಕಿ ಹೆಸರು ಸೇರ್ಪಡೆ

ವಿಶ್ವಸಂಸ್ಥೆ (ಎಎಫ್‌ಪಿ/ಪಿಟಿಐ): ಪ್ರಮುಖ ಬೆಳವಣಿಗೆಯೊಂದರಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ– ತಯಬಾ (ಎಲ್‌ಇಟಿ) ಉಪ ನಾಯಕ ಅಬ್ದುಲ್ ರೆಹಮಾನ್ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ವಿಶ್ವಸಂಸ್ಥೆ ಘೋಷಿಸಿದೆ.

ಈ ಕ್ರಮದಿಂದಾಗಿ, ಮಕ್ಕಿ ಪ್ರಯಾಣಿಸದಂತೆ ಹಾಗೂ ಶಸ್ತ್ರಾಸ್ತ್ರ ಬಳಕೆ ಮೇಲೆ ನಿರ್ಬಂಧ ಹೇರಲಾಗುತ್ತದೆಯಲ್ಲದೇ, ಆತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ 'ಅಲ್‌ಕೈದಾ ನಿರ್ಬಂಧ ಸಮಿತಿ'ಯು ಈ ಘೋಷಣೆ ಮಾಡಿದೆ. ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂಬುದಾಗಿ ಘೋಷಿಸುವಂತೆ ಕಳೆದ ವರ್ಷ ಭಾರತ ಹಾಗೂ ಅಮೆರಿಕ ಜಂಟಿ ಪ್ರಸ್ತಾವ ಸಲ್ಲಿಸಿದ್ದವು. 'ತಾಂತ್ರಿಕ ಕಾರಣ'ಗಳನ್ನು ನೀಡಿ ಇದಕ್ಕೆ ಆಗ ಚೀನಾ ಅಡ್ಡಿಪಡಿಸಿತ್ತು.


ಈಗ, ಚೀನಾ ತನ್ನ ನಿಲುವನ್ನು ಬದಲಾಯಿಸಿದ ಪರಿಣಾಮ, ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ಘೋಷಿಸಲು ಸಾಧ್ಯವಾಗಿದೆ.

ಬದಲಾದ ತನ್ನ ನಿಲುವಿನ ಕುರಿತು ಪ್ರತಿಕ್ರಿಯಿಸಿರುವ ಚೀನಾ, 'ಉಗ್ರರನ್ನು ಭಯೋತ್ಪಾದಕ ಪಟ್ಟಿಗೆ ಸೇರಿಸುವುದರಿಂದ ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಬಲ ಸಿಗಲಿದೆ' ಎಂದಿದೆ. ಅಲ್ಲದೇ, ಭಯೋತ್ಪಾದನೆ ಮಟ್ಟ ಹಾಕುವ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ಪಾಕಿಸ್ತಾನ ಕೈಜೋಡಿಸಿದ್ದನ್ನು ಶ್ಲಾಘಿಸಿದೆ.

ಮಕ್ಕಿ, ಉಗ್ರಗಾಮಿ ಸಂಘಟನೆ ಜೆಯುಡಿ/ಎಲ್‌ಇಟಿ ಮುಖ್ಯಸ್ಥ ಹಫೀಜ್ ಸಯೀದ್‌ನ ಬಾಮೈದ. 'ಮಕ್ಕಿ ಮತ್ತು ಇತರ ಉಗ್ರರು, ಭಯೋತ್ಪಾದಕ ಕೃತ್ಯಗಳಿಗೆ ಹಣ ಸಂಗ್ರಹ, ಯುವಕರ ನೇಮಕ ಮತ್ತು ವಿಶೇಷವಾಗಿ ಜಮ್ಮು ಮತ್ತು ಕಾಶ್ಮೀರ ಸೇರಿ ಭಾರತದಲ್ಲಿ ದಾಳಿಗೆ ಸಂಚು ರೂಪಿಸಿದ್ದರು' ಎಂದು ನಿರ್ಬಂಧ ಸಮಿತಿ ಹೇಳಿದೆ.

ಪಾಠ ಕಲಿತಿರುವುದಾಗಿ ಹೇಳಿದ ಪಾಕಿಸ್ತಾನ ಪ್ರಧಾನಿ

ಭಾರತ ಜತೆ ಶಾಂತಿ ಬಯಸಿದ ಪಾಕ್


ಶೆಹಬಾಜ್ ಷರೀಫ್

ಇಸ್ಲಾಮಾಬಾದ್ (ಪಿಟಿಐ): 'ನಾವು ಪಾಠ ಕಲಿತಿದ್ದೇವೆ. ನಮ್ಮ ನೈಜ ಸಮಸ್ಯೆಗಳನ್ನು ಪರಿಹರಿಸಲು ನಮಗೆ ಸಾಧ್ಯವಾದರೆ ನಾವು ಭಾರತದೊಂದಿಗೆ ಶಾಂತಿಯಿಂದ ಬದುಕಲು ಬಯಸುತ್ತೇವೆ' ಎಂಬ ಸಂದೇಶವನ್ನು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಭಾರತಕ್ಕೆ ರವಾನಿಸಿದ್ದಾರೆ.

'ಕಾಶ್ಮೀರ ವಿವಾದ ಸೇರಿದಂತೆ ಪ್ರಮುಖ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಭಾರತದೊಂದಿಗೆ ಪ್ರಾಮಾಣಿಕ ಮತ್ತು ಗಂಭೀರವಾದ ಮಾತುಕತೆಗಳನ್ನು ಬಯಸುತ್ತೇವೆ. ಅಣ್ವಸ್ತ್ರಸಜ್ಜಿತ ಉಭಯ ರಾಷ್ಟ್ರಗಳ ನಡುವೆ ಮಾತುಕತೆಯ ಪುನರಾರಂಭಕ್ಕೆ ಅನುಕೂಲವಾಗುವಂತೆ ಸಂಯುಕ್ತ ಅರಬ್ ರಾಷ್ಟ್ರ (ಯುಎಇ) ಪ್ರಮುಖ ಪಾತ್ರ ವಹಿಸಲಿದೆ' ಎಂದು ಷರೀಫ್ ಅವರು ದುಬೈನ ಅಲ್ ಅರೇಬಿಯಾ ಸುದ್ದಿ ವಾಹಿನಿಗೆ ಸೋಮವಾರ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ಕಾಶ್ಮೀರ: ಯುಎಇ ಮಧ್ಯಸ್ಥಿಕೆಗೆ ಪಾಕ್ ಒಲವು
- ಯುದ್ಧದಿಂದ ದುಃಖ, ಬಡತನ, ನಿರುದ್ಯೋಗ ಹೆಚ್ಚಿದೆ: ಷರೀಫ್
- ಮೂರನೇ ದೇಶದ ಪಾತ್ರ ಬಯಸುವುದಿಲ್ಲ: ಭಾರತ

'ದೇಶದ ಸಂಪನ್ಮೂಲವನ್ನು ಬಾಂಬುಗಳಿಗೆ ವ್ಯರ್ಥಮಾಡಲು ನಾವು ಬಯಸುವುದಿಲ್ಲ. ನಾವು ಪಾಠ ಕಲಿತ್ತಿದ್ದೇವೆ. ಬಡತನ ನಿರ್ಮೂಲನೆಗೆ, ಪ್ರಗತಿ ಸಾಧಿಸಲು, ನಮ್ಮ ಜನರಿಗೆ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಲು ನಾವು ಬಯಸುತ್ತೇವೆ. ಕಾಶ್ಮೀರದಂತಹ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಗಂಭೀರ ಮತ್ತು ಪ್ರಾಮಾಣಿಕ ಮಾತುಕತೆ ನಡೆಸೋಣ ಎಂಬ ಸಂದೇಶವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಲುಪಿಸಲು ಬಯಸುವೆ' ಎಂದು ಅವರು ಹೇಳಿದ್ದಾರೆ.

'ನಾವು ಭಾರತದೊಂದಿಗೆ ಮೂರು ಯುದ್ಧಗಳನ್ನು ನಡೆಸಿದ್ದೇವೆ. ಯುದ್ಧಗಳು ಜನರಿಗೆ ಹೆಚ್ಚು ದುಃಖ, ಬಡತನ ಮತ್ತು ನಿರುದ್ಯೋಗವನ್ನಷ್ಟೇ ನೀಡಿದವು. ಪರಸ್ಪರ ಜಗಳ, ಸಮಯ ಮತ್ತು ಸಂಪನ್ಮೂಲಗಳನ್ನು ವ್ಯರ್ಥ ಮಾಡುತ್ತಿದ್ದೇವೆ. ಇದೆಲ್ಲವನ್ನು ಬಿಟ್ಟು, ಉಭಯ ರಾಷ್ಟ್ರಗಳ ಜನರು ಕೂಡಿ ಬಾಳಬೇಕು ಮತ್ತು ಪ್ರಗತಿ ಸಾಧಿಸಬೇಕಿದೆ' ಎಂದು ಷರೀಫ್ ಹೇಳಿದ್ದಾರೆ.

ಕಾಶ್ಮೀರ ಸೇರಿದಂತೆ ಭಾರತದೊಂದಿಗಿನ ಎಲ್ಲ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಲು ಮೂರನೇ ದೇಶದ ಮಧ್ಯಸ್ಥಿಕೆಯನ್ನು ಪಾಕ್ ವಿದೇಶಾಂಗ ಸಚಿವಾಲಯ ಸ್ವಾಗತಿಸಿದೆ ಎಂದು ಅವರು ಹೇಳಿದರು.

ಭಯೋತ್ಪಾದನೆ ಮತ್ತು ಮಾತುಕತೆಗಳು ಒಟ್ಟಿಗೆ ಸಾಗಲು ಸಾಧ್ಯವಿಲ್ಲ. ಇಸ್ಲಾಮಾಬಾದ್ ಮಾತುಕತೆಗೆ ಪುನರಾರಂಭಿಸಲು ಅನುಕೂಲಕರ ವಾತಾವರಣ ಒದಗಿಸಬೇಕು. ಕಾಶ್ಮೀರ ವಿವಾದ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವಿಷಯ. ಇದರಲ್ಲಿ ಮೂರನೇ ದೇಶದ ಯಾವುದೇ ಪಾತ್ರವನ್ನು ಬಯಸುವುದಿಲ್ಲ ಎಂದು ಭಾರತ ತನ್ನ ನಿಲುವು ಸಮರ್ಥಿಸಿಕೊಂಡಿದೆ.

ನೇಪಾಳ ವಿಮಾನ ದುರಂತ: ಮೃತರ ಸಂಖ್ಯೆ 71ಕ್ಕೆ ಏರಿಕೆ

ಕಠ್ಮಂಡು (ಪಿಟಿಐ): ವಿಮಾನ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 71ಕ್ಕೆ ಏರಿದ್ದು, ಪತ್ತೆಯಾದ ಮೃತದೇಹಗಳನ್ನು ಸಂಬಂಧಿಸಿದ ಕುಟುಂಬಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಲಾಗಿದೆ.

'ಸೋಮವಾರ ರಾತ್ರಿ ಪೊಖರಾ ಕಣಿವೆಯ ಸೇಟಿ ನದಿಯ ಕಮರಿಯಲ್ಲಿ ಅಪಘಾತ ಸಂಭವಿಸಿದ ಸ್ಥಳದಲ್ಲಿ 71 ಮೃತದೇಹಗಳನ್ನು ಪತ್ತೆ ಹಚ್ಚಲಾಗಿದೆ. ಇನ್ನೂ ಒಬ್ಬ ವ್ಯಕ್ತಿ ಪತ್ತೆ ಆಗಿಲ್ಲ. ಶೋಧಕಾರ್ಯ ಮುಂದುವರಿದಿದೆ' ಎಂದು ಮೂಲಗಳು ತಿಳಿಸಿವೆ.

'ಮರಣೋತ್ತರ ಪರೀಕ್ಷೆಯ ಬಳಿಕ ಸಂಬಂಧಿಸಿದವರ ಕುಟುಂಬಗಳಿಗೆ ಮೃತದೇಹಗಳನ್ನು ನೀಡಲಾಯಿತು' ಎಂದು ಯೇತಿ ಏರ್‌ಲೈನ್ಸ್‌ನ ವಕ್ತಾರ ಸುದರ್ಶನ್ ಬರ್ತೌಲಾ ತಿಳಿಸಿದ್ದಾರೆ.

ಜರ್ಮನಿ–ಬೆಲ್ಜಿಯಂ ಪಂದ್ಯ ಡ್ರಾ



ಭುವನೇಶ್ವರ: ಯೂರೋಪಿನ ಎರಡು ಪ್ರಬಲ ತಂಡಗಳಾದ ಬೆಲ್ಜಿಯಂ ಮತ್ತು ಜರ್ಮನಿ, ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 2-2 ಗೋಲುಗಳ ಡ್ರಾ ಸಾಧಿಸಿದವು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದ 9 ನಿಮಿಷದಲ್ಲಿ ಸೆಡ್ರಿಕ್ ಚಾರ್ಲಿಯೆರ್ ಅವರು ಬೆಲ್ಜಿಯಂ ತಂಡಕ್ಕೆ ಮುನ್ನಡೆ ದೊರಕಿಸಿಕೊಟ್ಟರು.

ಎರಡನೇ ಕ್ವಾರ್ಟರ್‌ನಲ್ಲಿ ಜರ್ಮನಿಯ ನಿಕ್ಲಾಸ್ ವೆಲೆನ್ (22ನೇ ನಿ.) ಅವರು ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ಮೂರನೇ ಕ್ವಾರ್ಟರ್ ಗೋಲುರಹಿತವಾಗಿತ್ತು.ಕೊನೆಯ ಕ್ವಾರ್ಟರ್‌ನಲ್ಲಿ ಗೆಲುವಿನ ಗೋಲಿಗೆ ಉಭಯ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು. ಟಾಮ್ ಗ್ರಾಂಬುಶ್ ಅವರು 52ನೇ ನಿಮಿಷದಲ್ಲಿ ಗೋಲು ಗಳಿಸಿ ಜರ್ಮನಿಗೆ 2–1 ಮೇಲುಗೈ ತಂದಿತ್ತರು. ಆದರೆ ಎರಡು ನಿಮಿಷಗಳ ಬಳಿಕ ಬೆಲ್ಜಿಯಂನ ವಿಕ್ಟರ್ ವೆಗ್ನೆಜ್ (54ನೇ ನಿ.) ಅವರು ಸಮಬಲಕ್ಕೆ ಕಾರಣರಾದರು.

ಬೆಲ್ಜಿಯಂ ಮತ್ತು ಜರ್ಮನಿ ತಲಾ ನಾಲ್ಕು ಪಾಯಿಂಟ್ಸ್ ಹೊಂದಿವೆ. ಉತ್ತಮ ಗೋಲು ಸರಾಸರಿಯಿಂದ ಬೆಲ್ಜಿಯಂ ಅಗ್ರಸ್ಥಾನದಲ್ಲಿದೆ.

ಜಪಾನ್ ಮಣಿಸಿದ ಕೊರಿಯಾ: 'ಬಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೊರಿಯಾ 2–1 ಗೋಲುಗಳಿಂದ ಜಪಾನ್ ತಂಡವನ್ನು ಮಣಿಸಿತು.

ಎರಡೂ ಗೋಲುಗಳನ್ನು ಗಳಿಸಿದ ಜುಂಗ್‌ಜುನ್ ಲೀ, ಕೊರಿಯಾ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಅವರು 8 ಹಾಗೂ 23ನೇ ನಿಮಿಷಗಳಲ್ಲಿ ಫೀಲ್ಡ್ ಗೋಲು ಗಳಿಸಿದರು. ಜಪಾನ್ ತಂಡ ಮೊದಲ ನಿಮಿಷದಲ್ಲೇ ಮುನ್ನಡೆ ಗಳಿಸಿತ್ತು. ಕೆನ್ ನಗಯೊಶಿ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ್ದರು. ಆ ಬಳಿಕ ಕೊರಿಯಾ ಮೇಲುಗೈ ಸಾಧಿಸಿತು.

ಕ್ವಾರ್ಟರ್ ಫೈನಲ್‌ಗೆ ಹಾರ್ದಿಕ್ ಲಭ್ಯ?: ಭಾರತ ತಂಡದ ಮಿಡ್‌ಫೀಲ್ಡರ್ ಹಾರ್ದಿಕ್ ಸಿಂಗ್ ಅವರು ಕ್ವಾರ್ಟರ್ ಫೈನಲ್ ಪಂದ್ಯಕ್ಕೆ ಲಭ್ಯರಾಗುವ ಸಾಧ್ಯತೆಯಿದೆ ಎಂದು ಸಹ ಆಟಗಾರ ಅಭಿಷೇಕ್ ಹೇಳಿದ್ದಾರೆ. ಹೇಳಿದ್ದಾರೆ.


ಬೆಲ್ಜಿಯಂ ಮತ್ತು ಜರ್ಮನಿ ತಂಡಗಳ ನಡುವಣ ಪೈಪೋಟಿ –ಪಿಟಿಐ ಚಿತ್ರ

ಕಣದಲ್ಲಿ ಜಪಾನ್‌ನ 12 ಆಟಗಾರರು!

ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದ ಕೊನೆಯ ಕೆಲವು ನಿಮಿಷಗಳಲ್ಲಿ ಜಪಾನ್ ತಂಡದ 12 ಆಟಗಾರರು ಆಡಿದ ಪ್ರಸಂಗ ನಡೆಯಿತು. ಈ ಘಟನೆ ಬಗ್ಗೆ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ತನಿಖೆಗೆ ನಿರ್ಧರಿಸಿದೆ.

'ನಿಯಮದ ಪ್ರಕಾರ ಗರಿಷ್ಠ 11 ಆಟಗಾರರು ಮಾತ್ರ ಆಡಬಹುದು. ಆದರೆ ಕೊರಿಯಾ ವಿರುದ್ಧದ ಪಂದ್ಯದ ಕೊನೆಯ ಕೆಲವು ನಿಮಿಷಗಳಲ್ಲಿ ಜಪಾನ್‌ನ 12 ಆಟಗಾರರು ಕಣದಲ್ಲಿದ್ದರು' ಎಂದು ಎಫ್‌ಐಎಚ್ ಪ್ರಕಟಣೆ ತಿಳಿಸಿದೆ.

'ಈ ವಿಷಯ ಅಂಪೈರ್‌ಗಳ ಗಮನಕ್ಕೆ ಬರಲಿಲ್ಲ. ಎಫ್‌ಐಚ್ ಅಧಿಕಾರಿಗಳು ಪಂದ್ಯದ ಬಳಿಕ ಜಪಾನ್ ತಂಡದ ಅಧಿಕಾರಿಗಳಿಂದ ವಿವರಣೆ ಕೇಳಿದ್ದಾರೆ. ಅರಿವಿಲ್ಲದೆಯೇ ತಪ್ಪು ಸಂಭವಿಸಿದ್ದಾಗಿ ಅವರು ಹೇಳಿದ್ದಾರೆ' ಎಂದಿದೆ.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಕರ್ನಾಟಕದ ಕೌಶಿಕ್‌ಗೆ ನಾಲ್ಕು ವಿಕೆಟ್

ಕೇರಳಕ್ಕೆ ಸಚಿನ್ ಶತಕದ ಆಸರೆ


ಸಚಿನ್ ಬೇಬಿ


ವಿ. ಕೌಶಿಕ್

ತಿರುವನಂತಪುರ: ಕರ್ನಾಟಕದ ವಾಸುಕಿ ಕೌಶಿಕ್ ಮಂಗಳವಾರ ರಣಜಿ ಕ್ರಿಕೆಟ್ ಪಂದ್ಯದಲ್ಲಿ ನೀಡಿದ ಏಟಿಗೆ ಕೇರಳದ ಸಚಿನ್ ಬೇಬಿ ತಿರುಗೇಟು ನೀಡಿದರು.

ತುಂಬಾದಲ್ಲಿರುವ ಸಂತ ಕ್ಸೇವಿಯರ್ ಕಾಲೇಜು ಮೈದಾನದಲ್ಲಿ ಆರಂಭವಾದ ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದಲ್ಲಿ ಸಚಿನ್ ಗಳಿಸಿದ ಶತಕ (ಬ್ಯಾಟಿಂಗ್ 116) ದಿಂದಾಗಿ ಆತಿಥೇಯರು ಮೊದಲ ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 224 ರನ್ ಗಳಿಸಿದರು.

ಟಾಸ್ ಗೆದ್ದ ಕೇರಳ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವೇಗದ ಬೌಲರ್ ವಿದ್ವತ್ ಕಾವೇರಪ್ಪ ಅವರಿಗೆ ವಿಶ್ರಾಂತಿ ನೀಡಿದ ಕರ್ನಾಟಕ ತಂಡಕ್ಕೆ ಕೌಶಿಕ್ (36ಕ್ಕೆ4) ಉತ್ತಮ ಆರಂಭ ನೀಡಿದರು.

ಇನಿಂಗ್ಸ್ ಆರಂಭದ ಮೂರು ಓವರ್‌ಗಳಲ್ಲಿ ಮೂವರು ಬ್ಯಾಟರ್ ಗಳಿಗೆ ಪೆವಿಲಿಯನ್‌ಗೆ ದಾರಿ ತೋರುವಲ್ಲಿ ಕೌಶಿಕ್ ಮತ್ತು ವೈಶಾಖ ಯಶಸ್ವಿಯಾದರು. ಅದರಲ್ಲಿ ಕೌಶಿಕ್ ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಪೊನ್ನನ್ ರಾಹುಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಎರಡನೇ ಓವರ್‌ನಲ್ಲಿ ವೈಶಾಖ ಎಸೆತದಲ್ಲಿ ದೇವದತ್ತ ಪಡಿಕ್ಕಲ್ ಪಡೆದ ಕ್ಯಾಚ್‌ಗೆ ರೋಹನ್ ಪ್ರೇಮ್ ಔಟಾದರು. ನಂತರದ ಓವರ್‌ನಲ್ಲಿ ಮತ್ತೆ ಕೌಶಿಕ್ ಮಿಂಚಿದರು. ರೋಹನ್ ಕುನ್ನುಮ್ಮಳ್ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಆಗ ತಂಡದ ಖಾತೆಯಲ್ಲಿ ಕೇವಲ ಆರು ರನ್‌ಗಳು ಮಾತ್ರ ಇದ್ದವು. ಈ ಹಂತದಲ್ಲಿ ಜೊತೆಗೂಡಿದ ಸಚಿನ್ ಮತ್ತು ವತ್ಸಲ ಗೋವಿಂದ್ (46; 116ಎ) ನಾಲ್ಕನೇ ವಿಕೆಟ್ ಜೊತೆ ಯಾಟದಲ್ಲಿ 120 ರನ್ ಸೇರಿಸಿದರು. ಅಪಾರ ತಾಳ್ಮೆಯ ಬ್ಯಾಟಿಂಗ್ ಮಾಡಿ ದರು.

ಭೋಜನ ವಿರಾಮದ ನಂತರ ಈ ಜೊತೆಯಾಟವನ್ನು ಮುರಿಯುವಲ್ಲಿ ಕೌಶಿಕ್ ಯಶಸ್ವಿಯಾದರು. ಅರ್ಧಶತಕದತ್ತ ಸಾಗಿದ್ದ ಗೋವಿಂದ್ ಅವರ ಕ್ಯಾಚ್ ಪಡೆದ ವಿಕೆಟ್‌ಕೀಪರ್ ಬಿ.ಆರ್. ಶರತ್ ಕೇಕೆ ಹಾಕಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಕೌಶಿಕ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಸಲ್ಮಾನ್ ನಿಜಾರ್ ಕ್ಲೀನ್‌ಬೌಲ್ಡ್ ಆದರು.

ಅಕ್ಷಯ್ ಚಂದ್ರನ್ ಕೇವಲ 17 ರನ್ ಗಳಿಸಿ ಔಟಾದರು. ಈ ಹಂತದಲ್ಲಿ ಇನ್ನೊಂದೆಡೆ ಗಟ್ಟಿಯಾಗಿ ನಿಂತಿದ್ದ ಸಚಿನ್ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದರು. ಅವರೊಡಗೂಡಿದ ಆಲ್‌ರೌಂಡರ್ ಜಲಜ್ ಸಕ್ಸೆನಾ (ಬ್ಯಾಟಿಂಗ್ 31) ವಿಕೆಟ್ ಪತನ ತಡೆದರು. ಸಚಿನ್ ಶತಕದ ಗಡಿ ದಾಟಿದರು. ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಇದರಿಂದಾಗಿ ಕೇರಳ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸುವ, ಮಯಂಕ್ ಬಳಗದ ಯೋಜನೆ ಕೈಗೂಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 90 ಓವರ್‌ಗಳಲ್ಲಿ 6ಕ್ಕೆ 224: ಸಚಿನ್ ಬೇಬಿ ಬ್ಯಾಟಿಂಗ್ 116, ವತ್ಸಲ ಗೋವಿಂದ್ 46, ಅಕ್ಷಯ್ ಚಂದ್ರನ್ 17, ಜಲಜ್ ಸಕ್ಸೇನಾ ಬ್ಯಾಟಿಂಗ್ 31; ವಿ. ಕೌಶಿಕ್ 36ಕ್ಕೆ 4, ವಿಜಯಕುಮಾರ್ ವೈಶಾಖ 56ಕ್ಕೆ 1, ಶ್ರೇಯಸ್ ಗೋಪಾಲ್ 25ಕ್ಕೆ 1; ಕರ್ನಾಟಕ ವಿರುದ್ಧದ ಪಂದ್ಯ.

ಶತಕ ಗಳಿಸಿ ತೊಡೆ ತಟ್ಟಿದ ಸರ್ಫರಾಜ್!

ನವದೆಹಲಿ: ತವರಿನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಗೆ ತಮ್ಮನ್ನು ಪರಿಗಣಿಸದಿರುವ ಆಯ್ಕೆ ಸಮಿತಿ ವಿರುದ್ಧ ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ 'ತೊಡೆ ತಟ್ಟಿ' ಅಸಮಾಧಾನ ವ್ಯಕ್ತಪಡಿಸಿದರು.

ಮಂಗಳವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ದೆಹಲಿ ಎದುರು ಶತಕ ಬಾರಿಸಿದ ಸರ್ಫರಾಜ್ (125; 155ಎ, 4X16, 6X4) ಸಂಭ್ರಮದೊಂದಿಗೆ ಆಕ್ರೋಶವನ್ನು ಹೊರಹಾಕಿದರು.

ತೊಡೆತಟ್ಟುತ್ತಾ, ಪ್ರೇಕ್ಷಕರ ಗ್ಯಾಲರಿಯತ್ತ ತೋರುಬೆರಳು ಪ್ರದರ್ಶಿಸಿದರು. ಇತ್ತ ಪೆವಿಲಿಯನ್‌ನಲ್ಲಿದ್ದ ಮುಂಬೈನ ಕೋಚ್ ಅಮೋಲ್ ಮಜುಂದಾರ್ ಎದ್ದು ನಿಂತು ತಮ್ಮ ಕ್ಯಾಪ್ ತೆಗೆದು ಮೆಚ್ಚುಗೆ ಸೂಚಿಸಿದರು.

ಈ ವಿಡಿಯೊ ತುಣುಕನ್ನು ಬಿಸಿಸಿಐ ಟ್ವಿಟರ್‌ನಲ್ಲಿ ಹಂಚಿಕೊಂಡಿದೆ.

ಸರ್ಫರಾಜ್ ರಣಜಿ ಟ್ರೋಫಿಯಲ್ಲಿ ತಾವು ಆಡಿರುವ ಕಳೆದ 25 ಇನ್ನಿಂಗ್ಸ್‌ಗಳಲ್ಲಿ 10 ಶತಕ ಮತ್ತು ಐದು ಅರ್ಧಶತಕಗಳನ್ನು ಬಾರಿಸಿದ್ದಾರೆ. ಆದರೂ ಅವರನ್ನು ಭಾರತ ತಂಡದಲ್ಲಿ ಆಯ್ಕೆಗೆ ಪರಿಗಣಿಸಲಾಗಿಲ್ಲ.

25 ವರ್ಷ ವಯಸ್ಸಿನ ಸರ್ಫರಾಜ್ ಈ ರಣಜಿ ಟ್ರೋಫಿಯಲ್ಲಿ 5 ಪಂದ್ಯಗಳಲ್ಲಿ ಅವರು 431 ರನ್ ಗಳಿಸಿದ್ದಾರೆ. ಕಳೆದ ಬಾರಿ ಸರ್ಫರಾಜ್ ಆರು ಪಂದ್ಯಗಳಲ್ಲಿ 122.75 ಸರಾಸರಿಯಲ್ಲಿ ನಾಲ್ಕು ಶತಕಗಳನ್ನು ಒಳಗೊಂಡಂತೆ 982 ರನ್ ಗಳಿಸಿದ್ದರು.


ಸರ್ಫರಾಜ್ ಖಾನ್


ಸಂಕ್ಷಿಪ್ತ ಸ್ಕೋರು: ಮುಂಬೈ: 79.3 ಓವರ್‌ಗಳಲ್ಲಿ 293 (ಪೃಥ್ವಿ ಶಾ 40, ಸರ್ಫರಾಜ್ ಖಾನ್ 125, ಪ್ರಸಾದ್ ಪವಾರ್ 25, ಶಮ್ಸ್ ಮಲಾನಿ 39, ಹರ್ಷಿತ್ ರಾಣಾ 106ಕ್ಕೆ2, ಪ್ರಂಶು ವಿಜಯನ್ 66ಕ್ಕೆ4, ಯೋಗೇಶ್ ಶರ್ಮಾ 61ಕ್ಕೆ2)

ಅರವಿಂದ್, ಸಾಯಿವರುಣ್ ವಿಶ್ವದಾಖಲೆ ಜೊತೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಪಾಲನ್ ನ್ಯಾಷನಲ್ ಸ್ಕೂಲ್ ತಂಡದ ಜಿ. ಅರವಿಂದ್ ಮತ್ತು ಜಿ.ಕೆ. ಸಾಯಿವರುಣ್ ಅವರು ಬಿ.ಟಿ. ರಾಮಯ್ಯ ಶೀಲ್ಡ್ 14 ವರ್ಷದೊಳಗಿನವರ ಒಂದನೇ ಗುಂಪಿನ ಮೊದಲ ಡಿವಿಷನ್ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯದಲ್ಲಿ ಪ್ರಥಮ ವಿಕೆಟ್ ಜೊತೆಯಾಟದ ವಿಶ್ವದಾಖಲೆ ಮಾಡಿದರು.

ಅರವಿಂದ (ಅಜೇಯ 277; 159ಎ, 4X42) ಮತ್ತು ಸಾಯಿವರುಣ್ (ಅಜೇಯ 247; 154ಎ, 4X36) ಮುರಿಯದ ಮೊದಲ ವಿಕೆಟ್‌ಗೆ 549 ರನ್ (50 ಓವರ್‌ಗಳಲ್ಲಿ) ಸೇರಿಸಿದರು. ಈ ಆಟದ ನೆರವಿನಿಂದ ತಂಡವು ವಿದ್ಯಾನಿಕೇತನ ಶಾಲೆ ಎದುರು 486 ರನ್‌ಗಳಿಂದ ಗೆದ್ದಿತು.


ಸಾಯಿವರುಣ್ ಮತ್ತು ಅರವಿಂದ್

ಬೃಹತ್ ಗುರಿ ಬೆನ್ನಟ್ಟಿದ್ದ ವಿದ್ಯಾನಿಕೇತನ 29.5 ಓವರ್‌ಗಳಲ್ಲಿ 63 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

'ಕ್ರಿಕ್‌ಇನ್ಫೋ ಡಾಟ್ ಕಾಮ್' ಅಂಕಿಸಂಖ್ಯೆಗಳ ಅನ್ವಯ ಈ ಮೊದಲಿನ ದಾಖಲೆಯು (ಜೂನಿಯರ್ ವಿಭಾಗವೂ ಸೇರಿ) 546 ರನ್‌ಗಳಾಗಿತ್ತು. 2015ರಲ್ಲಿ ಮುಂಬೈನ ಕೆ.ಜಿ. ಗಾಂಧಿ ಇಂಗ್ಲಿಷ್ ಶಾಲೆಯ ಆಕಾಶ್ ಸಿಂಗ್ ಮತ್ತು ಪ್ರಣವ್ ಧನವಾಡೆ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 546 ರನ್ ಸೇರಿಸಿದ್ದರು. ಆದರೆ ಆ ಪಂದ್ಯವು ಎರಡು ದಿನಗಳದ್ದಾಗಿತ್ತು. ಕೆಂಪು ಚೆಂಡಿನಲ್ಲಿ ಆಡಲಾಗಿತ್ತು.

ಹಾಕಿ: ರಾಣಿ ಮಿಂಚು, ಭಾರತ ಜಯಭೇರಿ

ಕೇಪ್‌ಟೌನ್ (ಪಿಟಿಐ): ರಾಣಿ ರಾಂಪಾಲ್ ಅವರ ಉತ್ತಮ ಆಟದ ನೆರವಿನಿಂದ ಭಾರತ ಮಹಿಳಾ ತಂಡದವರು ದಕ್ಷಿಣ ಆಫ್ರಿಕಾ ವಿರುದ್ಧದ ನಾಲ್ಕು ಪಂದ್ಯಗಳ ಹಾಕಿ ಟೆಸ್ಟ್ ಸರಣಿಯಲ್ಲಿ ಶುಭಾರಂಭ ಮಾಡಿದರು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತ 5–1 ಗೋಲುಗಳಿಂದ ಗೆದ್ದಿತು. ಮಾಜಿ ನಾಯಕಿ ರಾಣಿ ಅವರು 12ನೇ ನಿಮಿಷದಲ್ಲಿ ಪ್ರವಾಸಿ ತಂಡಕ್ಕೆ ಮುನ್ನಡೆ ತಂದಿತ್ತರು.

ಆ ಬಳಿಕ ಮೋನಿಕಾ (20ನೇ ನಿ.), ನವನೀತ್ ಕೌರ್ (24ನೇ ನಿ.), ಗುರ್ಜಿತ್ ಕೌರ್ (25ನೇ ನಿ.) ಮತ್ತು ಸಂಗೀತಾ ಕುಮಾರಿ (30ನೇ ನಿ.) ಅವರು ಗಳಿಸಿದ ಗೋಲುಗಳ ನೆರವಿನಿಂದ ವಿರಾಮದ ವೇಳೆಗೆ 5–0 ರಲ್ಲಿ ಮುನ್ನಡೆ ಗಳಿಸಿತು. ದಕ್ಷಿಣ ಆಫ್ರಿಕಾ ತಂಡದ ಏಕೈಕ ಗೋಲನ್ನು ಕ್ವಾನಿಟ ಬಾಬ್ಸ್ ಅವರು 44ನೇ ನಿ.ದಲ್ಲಿ ತಂದುಕೊಟ್ಟರು.

ಆಕ್ರಮಣಕಾರಿ ಆಟವಾಡಿದ ಭಾರತ ಮೊದಲ ಕ್ವಾರ್ಟರ್‌ನಲ್ಲಿ ಒಂದು ಗೋಲು ಗಳಿಸಿತು. ಪೆನಾಲ್ಟಿ ಕಾರ್ನರ್ ಅವಕಾಶವನ್ನು ರಾಣಿ, ಗೋಲಾಗಿ ಪರಿವರ್ತಿಸಿದರು. ಎರಡನೇ ಕ್ವಾರ್ಟರ್‌ನಲ್ಲಿ 10 ನಿಮಿಷಗಳ ಅಂತರದಲ್ಲಿ ನಾಲ್ಕು ಗೋಲುಗಳನ್ನು ಕಲೆಹಾಕಿತು.

ಏಕದಿನ ಕ್ರಿಕೆಟ್: ಭಾರತ–ನ್ಯೂಜಿಲೆಂಡ್ ಹಣಾಹಣಿ ಇಂದು

ರೋಹಿತ್ ಪಡೆಗೆ ಕಿವೀಸ್ ಸವಾಲು

ಹೈದರಾಬಾದ್ (ಪಿಟಿಐ): ಶ್ರೀಲಂಕಾ ಎದುರಿನ ಸರಣಿ ಜಯದ ಸಂಭ್ರಮದಲ್ಲಿರುವ ಭಾರತ ತಂಡ ಬುಧವಾರ ನ್ಯೂಜಿಲೆಂಡ್ ಸವಾಲು ಎದುರಿಸಲು ಸಿದ್ಧವಾಗಿದೆ.

ಆದರೆ, ಬೆನ್ನುನೋವಿನಿಂದಾಗಿ ಮಧ್ಯಮಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಇಲ್ಲದೇ ತಂಡವು ಕಣಕ್ಕಿಳಿಯಲಿದೆ. ಏಕದಿನ ಕ್ರಿಕೆಟ್ ಸರಣಿಯ ಮೂರು ಪಂದ್ಯಗಳಿಗೂ ಶ್ರೇಯಸ್ ಅಲಭ್ಯರಾಗಿದ್ದಾರೆ. ಅವರ ಬದಲಿಗೆ ರಜತ್ ಪಾಟೀದಾರ್ ಅವರು ರೋಹಿತ್ ಶರ್ಮಾ ಬಳಗದಲ್ಲಿ ಸ್ಥಾನ ಪಡೆದಿದ್ದಾರೆ.

ಕಳೆದ ಸರಣಿಯಲ್ಲಿ ಮಧ್ಯಮಕ್ರಮಾಂಕದಲ್ಲಿ ಆಡಿದ್ದ ಕೆ.ಎಲ್. ರಾಹುಲ್ ಕೂಡ ವಿಶ್ರಾಂತಿ ಪಡೆದಿದ್ದು, ವಿಕೆಟ್‌ಕೀಪರ್ ಇಶಾನ್ ಕಿಶನ್ ಆಡುವ ಸಾಧ್ಯತೆ ಇದೆ. ನಾಯಕ ರೋಹಿತ್ ಮತ್ತು ಸ್ಥಿರತೆ ಕಾಪಾಡಿಕೊಂಡಿರುವ ಶುಭಮನ್ ಗಿಲ್ ಜೋಡಿಯೇ ಇನಿಂಗ್ಸ್ ಆರಂಭಿಸುವುದು ಖಚಿತ. ಶ್ರೀಲಂಕಾ ಎದುರು ಒಂದು ಅರ್ಧಶತಕ ಹಾಗೂ ಶತಕ ಗಳಿಸಿರುವ ಗಿಲ್ ಆಯ್ಕೆಗಾರರ ವಿಶ್ವಾಸ ಉಳಿಸಿಕೊಂಡಿದ್ದಾರೆ.

'ರನ್ ಯಂತ್ರ' ವಿರಾಟ್ ಕೊಹ್ಲಿ ಮತ್ತೆ ತಮ್ಮ ಲಯಕ್ಕೆ ಮರಳಿದ್ದು ಶತಕ ಗಳಿಸಿದ್ದಾರೆ. ಅವರಲ್ಲದೇ ಸೂರ್ಯ ಕುಮಾರ್ ಯಾದವ್, ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಇರುವುದರಿಂದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ.


ರೋಹಿತ್ ಶರ್ಮಾ

ಬೌಲಿಂಗ್ ವಿಭಾಗದಲ್ಲಿ ಸಿರಾಜ್, ಶಮಿ, ಸ್ಪಿನ್ನರ್ ಕುಲದೀಪ್ ಮತ್ತು ಚಾಹಲ್ ಉತ್ತಮ ಲಯದಲ್ಲಿರುವುದು ತಂಡದಲ್ಲಿ ಹುಮ್ಮಸ್ಸು ಹೆಚ್ಚಿಸಿದೆ.

ಕಿವೀಸ್ ಬಳಗದಲ್ಲಿ ಅನುಭವಿಗಳಾದ ಕೇನ್ ವಿಲಿಯಮ್ಸನ್ ಮತ್ತು ಟಿಮ್ ಸೌಥಿ ಅವರು ಈ ಸರಣಿಯಲ್ಲಿ ಆಡುತ್ತಿಲ್ಲ. ಅದರಿಂದಾಗಿ ಟಾಮ್ ಲಥಾಮ್ ನಾಯಕತ್ವ ವಹಿಸುತ್ತಿದ್ದಾರೆ. ನ್ಯೂಜಿಲೆಂಡ್ ತಂಡವು ಪಾಕಿಸ್ತಾನದಲ್ಲಿ ನಡೆದ ಸರಣಿಯಲ್ಲಿ ಆಡಿದ ನಂತರ ಭಾರತಕ್ಕೆ ಬಂದಿಳಿದಿದೆ.

ಪಾಕಿಸ್ತಾನ ವಿರುದ್ಧದ ಸರಣಿಯಲ್ಲಿ ಗ್ಲೆನ್ ಫಿಲಿಪ್ಸ್ ಅಮೋಘವಾಗಿ ಆಡಿದ್ದರು. ಅವರನ್ನು ಕಟ್ಟಿಹಾಕುವುದು ಆತಿಥೇಯ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ಬಲಾಬಲ

ಪಂದ್ಯ	113
ಭಾರತ ಜಯ	55
ನ್ಯೂಜಿಲೆಂಡ್ ಜಯ	50
ಫಲಿತಾಂಶವಿಲ್ಲ	7
ಟೈ	1

ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಭಾರತ (ಏಕದಿನ)

ಪಂದ್ಯ	ಗೆಲುವು	ಸೋಲು
6	3	3

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬ್ಯಾಡ್ಮಿಂಟನ್: ಸೇನ್‌ಗೆ ಸಾಟಿಯಾಗದ ಪ್ರಣಯ್

ನವದೆಹಲಿ (ಪಿಟಿಐ): ಭಾರತದ ಲಕ್ಷ್ಯಸೇನ್ ಮತ್ತು ಸೈನಾ ನೆಹ್ವಾಲ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ.

ಮಂಗಳವಾರ ಇಲ್ಲಿ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಲಕ್ಷ್ಯ 21-14, 21-15ರಿಂದ ಭಾರತದ ಎಚ್.ಎಸ್. ಪ್ರಣಯ್ ಅವರನ್ನು ಮಣಿಸಿದರು. ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ 21-13, 21-15ರಿಂದ ಸ್ಕಾಟ್ಲೆಂಡ್‌ನ ಕ್ರಿಸ್ಟೊಫರ್ ಗ್ರಿಮ್ಲಿ ಮತ್ತು ಮ್ಯಾಥ್ಯೂ ಗ್ರಿಮ್ಲಿ ಎದುರು ಗೆದ್ದರು. ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸೈನಾ 21–17, 12–21, 21–19ರಿಂದ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಎದುರು ಗೆದ್ದರು. ಡಬಲ್ಸ್‌ನಲ್ಲಿ ತ್ರಿಶಾ ಜೋಲಿ– ಗಾಯತ್ರಿ ಗೋಪಿಚಂದ್ 22-20, 17-21, 21-18ರಿಂದ ಫ್ರಾನ್ಸ್‌ನ ಮಾರ್ಗೋಟ್ ಲ್ಯಾಂಬರ್ಟ್– ಆ್ಯನ್ ಟ್ರಾನ್ ಅವರನ್ನು ಸೋಲಿಸಿದರು.

ಸಿಂಧುಗೆ ಸೋಲು: ಪಿ.ವಿ ಸಿಂಧು 14–21, 20–22ರಿಂದ ಥಾಯ್ಲೆಂಡ್‌ನ ಸುಪನಿದಾ ಕೇಟ್‌ಥೊಂಗ್ ಎದುರು ಸೋತರು.

ಆಸ್ಟ್ರೇಲಿಯಾ ಓಪನ್: ಎರಡನೇ ಸುತ್ತಿಗೆ ಜೊಕೊವಿಚ್

ಆ್ಯಂಡಿ ಮರೆಗೆ ಪ್ರಯಾಸದ ಗೆಲುವು

ಮೆಲ್ಬರ್ನ್ (ಎಎಫ್‌ಪಿ): ಬ್ರಿಟನ್‌ನ ಆ್ಯಂಡಿ ಮರೆ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಯಾಸದ ಗೆಲುವಿನೊಂದಿಗೆ ಎರಡನೇ ಸುತ್ತಿಗೆ ಮುನ್ನಡೆದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಮರೆ 6-3, 6-3, 4-6, 6-7 (7/9), 7-6 (10/6) ರಲ್ಲಿ ಇಟಲಿಯ ಮಟೆಯೊ ಬೆರೆಟಿನಿ ಅವರನ್ನು ಮಣಿಸಿದರು.

35 ವರ್ಷದ ಮರೆ, ಈ ಪಂದ್ಯ ಗೆಲ್ಲಲು 4 ಗಂಟೆ 49 ನಿಮಿಷ ಆಡಬೇಕಾಯಿತು. ಎದುರಾಳಿಗೆ ಕೇವಲ ಆರು ಗೇಮ್‌ಗಳನ್ನು ಬಿಟ್ಟುಕೊಟ್ಟು ಮೊದಲ ಎರಡು ಸೆಟ್‌ಗಳನ್ನು ಜಯಿಸಿದ್ದ ಬ್ರಿಟನ್‌ನ ಆಟಗಾರ ಸುಲಭ ಜಯದ ನಿರೀಕ್ಷೆಯಲ್ಲಿದ್ದರು. ಆದರೆ ಮೂರು ಮತ್ತು ನಾಲ್ಕನೇ ಸೆಟ್ ಗೆದ್ದ ಬೆರೆಟಿನಿ ಪಂದ್ಯದಲ್ಲಿ ಸಮಬಲ ಸಾಧಿಸಿದರು. ಮಾತ್ರವಲ್ಲ, ನಿರ್ಣಾಯಕ ಸೆಟ್‌ಅನ್ನು ಟೈಬ್ರೇಕರ್‌ಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು. ಕೊನೆಯಲ್ಲಿ ಒತ್ತಡವನ್ನು ಮೆಟ್ಟಿನಿಂತ ಮರೆ ಟೈಬ್ರೇಕರ್‌ನಲ್ಲಿ ಗೆದ್ದು ಸೋಲಿನಿಂದ ಪಾರಾದರು.


ಆ್ಯಂಡಿ ಮರೆ

ಐದನೇ ಶ್ರೇಯಾಂಕದ ಆಟಗಾರ ರಷ್ಯಾದ ಆಂಡ್ರೆ ರುಬ್ಲೆವ್ 6–3, 6–4, 6–2 ರಲ್ಲಿ 2020ರ ರನ್ನರ್ಸ್ ಅಪ್ ಡಾಮಿನಿಕ್ ಥಿಯೆಮ್ ವಿರುದ್ಧ ಗೆದ್ದರು. ಮಣಿಕಟ್ಟಿನ ಗಾಯದಿಂದ ಬಳಲಿದ್ದ ಥಿಯೆಮ್ ಅವರು 2021 ಮತ್ತು 2022ರ ಋತುವಿನಲ್ಲಿ ಒಟ್ಟು ಒಂಬತ್ತು ತಿಂಗಳು ಅಂಗಳದಿಂದ ದೂರವುಳಿದಿದ್ದರು.

ಜೊಕೊವಿಚ್ ಜಯಭೇರಿ: ಸರ್ಬಿಯಾದ ನೊವಾಕ್ ಜೊಕೊವಿಚ್ ಮೊದಲ ಸುತ್ತಿನಲ್ಲಿ 6–3, 6–4, 6–0 ರಲ್ಲಿ ಸ್ಪೇನ್‌ನ ರಾಬರ್ಟೊ ಕಾರ್ಬಲೆಸ್ ಬಯೆನಾ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕ್ರಮವಾಗಿ ನಾಲ್ಕು ಹಾಗೂ ಐದನೇ ಶ್ರೇಯಾಂಕ ಹೊಂದಿರುವ ಕರೊಲಿನಾ ಗಾರ್ಸಿಯಾ ಮತ್ತು ಅರ್ಯಾನ ಸಬಲೆಂಕಾ ಅವರು ಎರಡನೇ ಸುತ್ತಿಗೆ ಮುನ್ನಡೆದರು. ಫ್ರಾನ್ಸ್‌ನ ಗಾರ್ಸಿಯಾ 65 ನಿಮಿಷಗಳ ಹೋರಾಟದಲ್ಲಿ 6–3, 6–0 ರಲ್ಲಿ ಕೆನಡಾದ ಕ್ಯಾಥರಿನ್ ಸೆವೊವ್ ಅವರನ್ನು ಮಣಿಸಿದರೆ, ಸಬಲೆಂಕಾ 6–1, 6–4 ರಲ್ಲಿ ಥೆರೆಸಾ ಮಾರ್ಟಿನ್‌ಕೊವಾ ವಿರುದ್ಧ ಗೆದ್ದರು

ರಷ್ಯಾ, ಬೆಲಾರಸ್ ಧ್ವಜ ಪ್ರದರ್ಶಿಸುವಂತಿಲ್ಲ: ಆಸ್ಟ್ರೇಲಿಯಾ ಓಪನ್ ಟೂರ್ನಿಯ ಪಂದ್ಯಗಳ ವೇಳೆ ಪ್ರೇಕ್ಷಕರು ರಷ್ಯಾ ಹಾಗೂ ಬೆಲಾರಸ್ ದೇಶಗಳ ಧ್ವಜ ಪ್ರದರ್ಶಿಸುವುದಕ್ಕೆ ಟೆನಿಸ್ ಆಸ್ಟ್ರೇಲಿಯಾ ನಿಷೇಧ ಹೇರಿದೆ.

ಉಕ್ರೇನ್‌ನ ಕ್ಯಾಥರಿನಾ ಮತ್ತು ರಷ್ಯಾದ ಕ್ಯಾಮಿಲಾ ರಖಿಮೊವಾ ನಡುವಣ ಸೋಮವಾರ ನಡೆದ ಪಂದ್ಯದ ವೇಳೆ ಕೆಲವು ಪ್ರೇಕ್ಷಕರು ರಷ್ಯಾದ ಧ್ವಜ ಪ್ರದರ್ಶಿಸಿದ್ದರು. ಉಕ್ರೇನ್ ಬೆಂಬಲಿಗರು ಈ ವಿಷಯವನ್ನು ಅಂಗಳದ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರ ಗಮನಕ್ಕೆ ತಂದಿದ್ದರು.

ಎಚ್‌ಎಂಟಿಗೆ ಜಯ

ಬೆಂಗಳೂರು: ಎಚ್‌ಎಂಟಿ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಎಚ್‌ಎಂಟಿ 3–2ರಿಂದ ಹಾಸನ ಕ್ಲಬ್ ಎದುರು ಜಯ ಸಾಧಿಸಿತು. ತೇಸ್ವಿನ್ 36 ಮತ್ತು 41ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಜಸ್ವಂತ್ (24ನೇ ನಿ.) ಒಂದು ಗೋಲು ಹೊಡೆದರು. ಹಾಸನ ಪರ ಶ್ರೀಕಾಂತ್ (22ನೇ ನಿ.) ಮತ್ತು ಲೋಕೇಶ್ (39ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಉತ್ತಪ್ಪ ಅರ್ಧಶತಕ ವ್ಯರ್ಥ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕರ್ನಾಟಕದ ರಾಬಿನ್ ಉತ್ತಪ್ಪ ಅವರು ಇಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಟಿ20 ಲೀಗ್‌ನಲ್ಲಿ ಸ್ಫೋಟಕ ಅರ್ಧಶತಕ ಸಿಡಿಸಿದರು. ಆದರೆ ಅವರು ಪ್ರತಿನಿಧಿಸುವ ತಂಡವು ಸೋಲನುಭವಿಸಿತು.

ದುಬೈ ಕ್ಯಾಪಿಟಲ್ಸ್ ಪರ ಕಣಕ್ಕಿಳಿದ ಉತ್ತಪ್ಪ ಸೋಮವಾರ 46 ಎಸೆತಗಳಲ್ಲಿ 10 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡ 79 ರನ್ ಗಳಿಸಿದರು. ಆದರೆ ಜೇಮ್ಸ್ ವಿನ್ಸ್ ಔಟಾಗದೆ ಗಳಿಸಿದ 83 ರನ್‌ಗಳ ನೆರವಿನಿಂದ ಎದುರಾಳಿ ಗಲ್ಫ್ ಜೈಂಟ್ಸ್ ತಂಡವು ಒಂದು ಓವರ್ ಬಾಕಿ ಇರುವಂತೆಯೇ ಗೆಲುವು ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕ್ಯಾಪಿಟಲ್ಸ್ 8 ವಿಕೆಟ್‌ಗೆ 182 ರನ್ ಕಲೆಹಾಕಿತು. ಜೈಂಟ್ಸ್ 19 ಓವರ್‌ಗಳಲ್ಲಿ ಗುರಿ ತಲುಪಿತು. ನಾಲ್ಕು ವಿಕೆಟ್ ಕಳೆದುಕೊಂಡಿತು.

ಮಹಿಳಾ ಕ್ರಿಕೆಟ್: ಭಾರತ–ಸ್ಕಾಟ್ಲೆಂಡ್ ಮುಖಾಮುಖಿ

ಬೆನೊನಿ, ದಕ್ಷಿಣ ಆಫ್ರಿಕಾ: ಸತತ ಎರಡು ಪಂದ್ಯ ಗೆದ್ದು ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು, 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಸ್ಕಾಟ್ಲೆಂಡ್‌ಅನ್ನು ಎದುರಿಸಲಿದೆ. ಭಾರತ ಗೆಲುವಿನ ವಿಶ್ವಾಸದಲ್ಲಿದೆ. ಸ್ಕಾಟ್ಲೆಂಡ್ ಕೂಡ ಜಯದ ತವಕದಲ್ಲಿದೆ.

ಪಂದ್ಯ ಆರಂಭ: ಸಂಜೆ 5.15

ವಿಲ್ಲಾರಿಯಲ್–ಅಲ್‌ಚೆಮಿ ಒಪ್ಪಂದ

ಬೆಂಗಳೂರು: ಸ್ಪೇನ್‌ನ ವಿಲ್ಲಾರಿಯಲ್ ಫುಟ್‌ಬಾಲ್ ಅಕಾಡೆಮಿಯು ಬೆಂಗಳೂರಿನ ಅಲ್‌ಚೆಮಿ ಅಕಾಡೆಮಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದದೊಂದಿಗೆ ಅಲ್‌ಚೆಮಿಯು ವಿಲ್ಲಾರಿಯಲ್‌ನ ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. ಅಲ್‌ಚೆಮಿಯ ಆಯ್ದ ಆಟಗಾರರು ಮತ್ತು ಕೋಚ್‌ಗಳು ವಿಲ್ಲಾರಿಯಲ್‌ನ ಯುವ ತಂಡದೊಂದಿಗೆ ಆಡುವ ಮತ್ತು ತರಬೇತಿಯ ಅವಕಾಶ ಪಡೆಯಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.